ದಿನಕರ ದೇಸಾಯರ ಕಾವ್ಯ

ಗೌರೀಶ ಕಾಯ್ಕಿಣಿ

ಶ್ರೀ ರಾಘವೇಂದ್ರ ಪ್ರಕಾಶನ ಅಂಬಾರಕೊಡ್ಲ, ಅಂಕೋಲಾ

೬೮ ನೆಯ ಪ್ರಕಟಣೆ

ಬೆಳ್ಳಿ ಸ್ಮರಣೆಮಾಲೆ ೨

ದಿನಕರ ದೇಸಾಯರ ಕಾವ್ಯ

(ಸಮೀಕ್ಷಾ ಪ್ರಬಂಧಗಳು)

ಗೌರೀಶ ಕಾಯ್ಕಿಣಿ

ಶ್ರೀ ರಾಘವೇಂದ್ರ ಪ್ರಕಾಶನ ಅಂಕೋಲಾ ಉ.ಕ.

೧೯೯೫

'**DINAKARA DESĀYARA KAVYA**' – a collection of Critical Essays by **Dr. Gourish Kaikini** Gokarn and Published by Shri Raghavendra Prakashana Ambarkodla, Ankola Uttara Kannada – 581 314. First Impression : September, 1995 Pages : 100 Price : Rs. 25 - 00

ಮುಖಚಿತ್ರ ವಿನ್ಯಾಸ : ' ಗುರು ಆರ್ಟ್ಸ್ ' ಧಾರವಾಡ

ಬೆಲೆ : **ಇಪ್ಪತ್ತೈದು ರೂಪಾಯಿ**

ಮುದ್ರಣ :

ಶ್ರೀ ರಾಘವೇಂದ್ರ ಪ್ರಿಂಟರ್ಸ್, ಕಾರವಾರ (ಉ. ಕ.)



ಜನಸೇವಕ - ಕವಿ ದಿವಂಗತ ದಿನಕರ ದೇಸಾಯಿ

ಮುಮ್ಮಾತು

ಡಾ. ದಿನಕರ ದೇಸಾಯಿಯರ ಕಾವ್ಯಪ್ರಪಂಚದ ಬಗೆಗೆ ಆಗೀಗ ಪ್ರಾಸಂಗಿಕವಾಗಿ ನಾನು ಬರೆದ ಬರಹಗಳನ್ನು ಇಲ್ಲಿ ಒಟ್ಟಾಗಿ ಈ ಪುಟ್ಟ ಹೊತ್ತಿಗೆಯ ರೂಪದಲ್ಲಿ ಹೊರತರುತ್ತಿದ್ದೇನೆ. ಇದಕ್ಕೆ ನನ್ನ ಕವಿಮಿತ್ರರೂ ಸಮರ್ಥ ಪ್ರಕಾಶಕರೂ ಆದ ಶ್ರೀ ವಿಷ್ಣು ನಾಯ್ಕರ ಅನುಗ್ರಹದ ಆಗ್ರಹವೇ ಮೂಲ ಪ್ರಚೋದನೆ !

ಈ ಸಂಕಲನದಲ್ಲಿ ದಿನಕರರ ಚೌಪದಿಗಳ ಕುರಿತು ನಾನು ಸೇರಿಸಿದ ಲೇಖನ ('ಚೌಪದಿಗಳ ಚೌಕಶಿ') ಮಾತ್ರ ಈ ಸಂಕಲನಕ್ಕಾಗಿಯೇ – ಅದೂ ಪ್ರಿಯ ವಿಷ್ಣು ನಾಯ್ಕರ ಸಲಹೆ ಮೇರೆಗೆ-ಬರೆದದ್ದು. ಕವಿ ದಿನಕರರ ಚುಟುಕಗಳ ವಿಸ್ತಾರ ಅಪಾರ. 'ಕ್ಷಿತಿಜದ ತಂತಿ'ಯೇ ಅದರ ಅಂತ್ಯವನ್ನೂ ಮೀಟಬಲ್ಲದು. ಕನ್ನಡದಲ್ಲಿ ಗೀಚಿದ್ದೆಲ್ಲ ಶ್ರೀಗಂಧ !– ಎಂದಿದ್ದಾರೆ ದಿನಕರರು. ಈ ಮಾತನ್ನು ಕನ್ನಡದ ಸೌಂದರ್ಯವನ್ನು ಹೊಗಳಲು ಅವರು ಹೇಳಿದ್ದು. ಆದರೂ ಇದು ಅವರ ಈ ಚೌಪದಿಗಳ ರೂಪ ಗುಣಶೀಲಕ್ಕೂ ಯಥಾರ್ಥವಾಗಿ ಅನ್ವಯಿಸುತ್ತದೆ. ಶ್ರೀಗಂಧದ ಚೆಕ್ಕೆ ಒರಟಾಗಿ-ದೊರಗಾಗಿ ಕಾಣುತ್ತದೆ. ಆದರೆ ಅದನ್ನು ತಿಕ್ಕಿ ತೇದಂತೆ ಅದರ ಸುಗಂಧ ಹೆಚ್ಚು ಹೆಚ್ಚು ಸೂಸುತ್ತದೆ. ಡಾ. ದಿನಕರರ ಚುಟುಕಗಳೆಂಬ ಈ ಚೆಲುವಿನ ಚೆಕ್ಕೆಚೂರುಗಳೂ ಹಾಗೆಯೇ. ಇವುಗಳಲ್ಲಿ ಪದಲಾಲಿತ್ಯ ದೊಂದಿಗೆ ಅರ್ಥಗೌರವ ಹಾಸು ಹೊಕ್ಕಾಗಿಯೇ ಹೆಣೆದು ಹಬ್ಬಿದೆ. ಅದರ ಸೊಗಸನ್ನು ಇಲ್ಲಿ ಆದಷ್ಟು ಸಂಕ್ಷಿಪ್ತದಲ್ಲಿ ನೀಡಲು ಯತ್ನಿಸಿದ್ದೇನೆ.

ಈ ಸಮೀಕ್ಷೆಯಲ್ಲಿ ಸೇರದ ಕೆಲವು ಮಹತ್ವದ ಅಂಶಗಳೂ ಕವಿ ದಿನಕರರ ಚುಟುಕಗಳಲ್ಲಿ ತುಂಬ ಇವೆ. ಅವರ ಚೌಪದಿಗಳು ಒಂದು ಚೌ ಚೌ. ಹಲವು ರೂಪಗಳ, ವೇಷ-ಭೂಷಣಗಳ, ನಾಮ ರೂಪಗಳ ಬಣ್ಣದ ಚೌಕ ! ಕವಿಯ ಕಾವ್ಯ ಕಾಮಿನಿಯ ಕುಣಿತದ ಕೆಲವು ಹೆಜ್ಜೆಗಳ ರಿಂಗಣ ವಿನ್ಯಾಸವನ್ನು ಇಲ್ಲಿ ಗಮನಿಸಲಿಲ್ಲ. ಇದು ಕೇವಲ ವಿಸ್ತಾರದ ಭಯದಿಂದ. ಚುಟುಕಗಳ ಬಗ್ಗೆ ಹೇಗೊ ಹಾಗೆ ಕವಿ ದಿನಕರರ ಕಾವ್ಯದ ತತ್ತ್ವವಿಚಾರ, ಕವಿತ್ವದ ವಿಶ್ಲೇಷಣೆ, ಒಟ್ಟು ಜೀವನದೃಷ್ಟಿ, ವ್ಯಕ್ತವಾದ ಭಾವನೆಗಳ ಅಂತರಿಂಗಿತ ಇತ್ಯಾದಿ ವಿವರಗಳ ವಿವೇಚನೆಗೆ ಇನ್ನೊಂದು ಮಹಾಪ್ರಬಂಧವೇ ಬೇಕು.

ದಿನಕರ ದೇಸಾಯರ ಶಿಶುಗೀತೆಗಳ ಬಗ್ಗೆ ನಾನು ಬರೆಯಲು ಪ್ರೇರಣೆ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾಭೂಷಣರೆಲ್ಲರಿಗೆ, ಅಂತೆಯೇ ದಿನಕರರ ಪ್ರಾರಂಭಿಕ ಕಾವ್ಯಗಳ ಬಗ್ಗೆ ಪುಟ್ಟಲೇಖನ ಪಡೆದು ಪ್ರಕಟಿಸಿದ್ದ ದಿನಕರ ಷಷ್ಠ್ಯಬ್ದಿ ಸಮಿತಿಗೆ ನಾನು ಋಣಿ. ಮಿಕ್ಕುಳಿದ ಪ್ರಬಂಧಗಳಿಗೂ ಈ ಸಂಕಲನದ ಪ್ರಕಾಶನಕ್ಕೂ ಕಾರಣಕರ್ತರಾದ ವಿಷ್ಣು ನಾಯ್ಕರಿಗೆ ಅನನ್ಯ ಆಭಾರಿ. ನನ್ನ ಸಮಗ್ರ ಸಾಹಿತ್ಯ ಸಂಪುಟಗಳಂತೆ ಈ ಸಂಕಲನದಲ್ಲೂ ಹೆಚ್ಚು ತಪ್ಪುಗಳಿಗೆ ಎಡೆಯಿಲ್ಲದಂತೆ ಸುಂದರವಾಗಿ ಮುದ್ರಿಸಿದ ರಾಘವೇಂದ್ರ ಮುದ್ರಣಾಲಯದ ಪ್ರಿಯ ರಾಮ ನಾಯ್ಕರಿಗೂ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

ಗೋಕರ್ಣ
೨೨ – ೯ – ೧೯೭೫

— *ಗೌರೀಶ ಕಾಯ್ಕಿಣಿ*

ಪ್ರಕಾಶಕರ ನುಡಿ

ಸಂಕಲನವೊಂದು ಪ್ರಕಟವಾಗುವ ಮೊದಲೇ ಪ್ರಸಿದ್ಧಿಗೆ ಬಂದಿದ್ದ ಜನಾದರಣೀಯ ಹಿರಿಯ ಕವಿ ದಿನಕರ ದೇಸಾಯಿ. ಸುಂದರ-ಸುಲಲಿತವಾದ ಅವರ ಮಕ್ಕಳ ಪದ್ಯಗಳು ಇಂದು ನಾಡಿನಾದ್ಯಂತ ಚಿರಪರಿಚಿತ. ಅವರ ಚಿಂತನ ಪ್ರಧಾನ ಭಾವಗೀತಗಳೂ ಅಷ್ಟೇ ಜನಪ್ರಿಯ. ಅವರ ಸಾವಿರದ ಸಾವಿರದ ಸಾವಿರಾರು ಚುಟಕಗಳು ಇಂದು ನಾಡಿನ ಮನೆಮಾತು.

ಈ ಜನಸೇವಕ-ಕವಿಯ ವಿವಿಧ ಪ್ರಕಾರದ ಸಮೃದ್ಧವಾದ ಕಾವ್ಯಬೆಳಸಿನ ಗುಣವಿಶೇಷವೇನು ? ಕನ್ನಡ ಕಾವ್ಯಸಮೀಕ್ಷೆಯ ಸಂದರ್ಭದಲ್ಲಿ ಈ ಕವಿಗೆ ಸಲ್ಲುವ ಮಾನ ಯಾವುದು ? ಈ ಕವಿ ನಿಲ್ಲುವ ಸ್ಥಾನ ಎಲ್ಲಿ, ಯಾರೊಂದಿಗೆ ?-ಎಂಬಿತ್ಯಾದಿ ವಿಚಾರ-ವಿಮರ್ಶೆಗೆ ಮೀಸಲಾದ ಗಮನಾರ್ಹ ಪ್ರಯತ್ನ ಇದುವರೆಗೆ ನಡೆದಂತಿಲ್ಲ. ಆ ಕೊರತೆಯನ್ನು ತಕ್ಕಮಟ್ಟಿಗಾದರೂ ತುಂಬುವ ಒಂದು ಪುಟ್ಟ ಪ್ರಯತ್ನವಾಗಿ ಈ ಸಮೀಕ್ಷಾ ಸಂಕಲನವನ್ನು ಪ್ರಕಟಿಸುತ್ತಿದ್ದೇವೆ.

ಕವಿ ದಿನಕರರಿಗೂ ವಿಮರ್ಶಕ ಗೌರೀಶರಿಗೂ ಬಹುಕಾಲದ-ಬಹುಹತ್ತಿರದ ನಂಟು. ಆ ಕರ್ಮಯೋಗಿಯ ಸೇವಾಜೀವನವನ್ನೂ ಕಾವ್ಯಬದುಕನ್ನೂ ಈ ಸಾಹಿತ್ಯ ಸಾಧಕ ತುಂಬ ಸಮೀಪದಿಂದ ಅರಿತವರು, ಅರ್ಥಮಾಡಿಕೊಂಡವರು. ' ಓದು ಸಾರ್ಥಕ ' ಎಂದೆನಿಸುವ ಹಾಗೆ, ಡಾ. ಕಾಯ್ಕಿಣಿ ತಮ್ಮ ಇಲ್ಲಿಯ ಸಮೀಕ್ಷಾ ಪ್ರಬಂಧಗಳಲ್ಲಿ ಕವಿ ದಿನಕರರ ಕಾವ್ಯಾಂತರಂಗವನ್ನು ತೆರೆದು ತೋರಿಸಿದ್ದಾರೆ,-ತಮ್ಮದೇ ಆದ ವಿಶಿಷ್ಟ ಪದ್ಯಗಂಧೀ ಗದ್ಯಶೈಲಿಯಲ್ಲಿ.

ಇಂಥ ಒಂದು ಉಪಯುಕ್ತ ಸಂಕಲನವನ್ನು ನಮ್ಮ ಪ್ರಕಾಶನದ ಬೆಳ್ಳಿಸ್ಮರಣೆ ಮಾಲೆಯ ಮೂಲಕ ಪ್ರಕಟಿಸಲು ಸಹಕರಿಸಿದ ಗೌರೀಶರ ಔದಾರ್ಯಕ್ಕೆ ನಾನು ಆಭಾರಿಯಾಗಿದ್ದೇನೆ. ಇದರ ಮುದ್ರಣ ಕಾರ್ಯದಲ್ಲಿ ಶ್ರದ್ಧೆಯಿಂದ ದುಡಿದ ನನ್ನ ಸೋದರನಾದ ರಾಮನಿಗೂ, ಅವನ ಮುದ್ರಣಾಲಯದ ಸಿಬ್ಬಂದಿವರ್ಗಕ್ಕೂ ನನ್ನ ನೆನಕೆಗಳು ಸಲ್ಲುತ್ತವೆ.

– ವಿಷ್ಣು ನಾಯ್ಕ

' ಪರಿಮಳ '
ಅಂಬಾರಕೊಡ್ಲ, ಅಂಕೋಲಾ

ಪರಿವಿಡಿ

ದಿನಕರ ದೇಸಾಯರ ಕಾವ್ಯ

* ಮಕ್ಕಳ ಪದ್ಯಗಳು
* ಭಾವಗೀತಗಳು
* 'ಚೌಪದಿ'ಗಳ ಚೌಕಶಿ
* ಪ್ರಾರಂಭಿಕ ಕಾವ್ಯ

ದಿನಕರ ದೇಸಾಯಿ ಅವರ ಮಕ್ಕಳ ಪದ್ಯಗಳು

ಇವರು ರಾಷ್ಟ್ರಕವಿಗಳು. ಇವರು ಅನುಭಾವಿ ಕವಿಗಳು. ಇನ್ನಿವರು ನವ್ಯ ಕವಿಗಳು. ಓ ಇವರು ಸಮನ್ವಯ ಕವಿಗಳು–ಎಂದೆಲ್ಲ ನಮ್ಮ ಹೊಸಗನ್ನಡ ಕಾವ್ಯ ಪ್ರಪಂಚದಲ್ಲಿ ಒಂದು ಬಗೆಯ 'ಸ್ವಯಂಭೂ' ವರ್ಗೀಕರಣ ನಡೆದು ಬಂದಿದೆ. ಅದರ ಯುಕ್ತಾಯುಕ್ತತೆ ಇಷ್ಟಾನಿಷ್ಟತೆ ಏನೇ ಇರಲಿ, ಅದೇ ಚಾಳಿಗೆ ಈಡಾಗಿ ನಾನೂ ಮುಂದುವರಿಯುವದಾದರೆ ಮಕ್ಕಳ ಕವಿಗಳು ಜನತೆಯ ಕವಿಗಳು ಎಂಬ ಇನ್ನೆರಡು ಗುಂಪುಗಳನ್ನು ಗುರುತಿಸಬಲ್ಲೆನು–ಬಲ್ಲವರೆನ್ನುವವರು ಅದನ್ನು ಒಪ್ಪಲಿ ಬಿಡಲಿ.

ಏಕೆಂದರೆ ಸಂಕೀರ್ಣ ಕ್ರತುಶಕ್ತಿಯ ಸಮ್ಮಿಶ್ರ ಗುಣವೈಖರಿಯ ಒಬ್ಬ ಕವಿಯನ್ನು ಆಡು–ಕುರಿಗಳಂತೆ ಇಷ್ಟುಸಲೀಸಾಗಿ ವಿಂಗಡಿಸಿ ಬೇರೆ ಬೇರೆ ದಾವಣಿ ಗಳಲ್ಲಿ ಕಟ್ಟಿ ನಿಲ್ಲಿಸಲು ನಿಜವಾಗಿಯೂ ಸಾಧ್ಯವಿಲ್ಲ. ಅಂಥ ಬಹುಮುಖ ಪ್ರತಿಭೆಯ ಕವಿ ತನ್ನ ಕಾವ್ಯ ಸೃಷ್ಟಿಯ ಋತುಮಾನದಲ್ಲಿ ಒಂದೇ ಕಾಲಕ್ಕೆ ಒಂದಕ್ಕಿಂತ ಹೆಚ್ಚು ಮಾದರಿಯ ಕವಿತಾರಚನೆ ಸಾಧಿಸಿದ್ದುಂಟು. 'ಸಖೀಗೀತ', 'ಗಂಗಾವತರಣ' ಬರೆದ ಅಂಬಿಕಾತನಯದತ್ತರು 'ಕರುಳಿನ ವಚನ'ಗಳನ್ನು ಬರೆದರು. ಚಂದ್ರನ ಕುರಿತು ಪ್ರೌಢ ಕವಿತೆಯಂತೆ ಮಕ್ಕಳ ಕವನಗಳನ್ನೂ ಬರೆದಿದ್ದಾರೆ. 'ರಕ್ತಾಕ್ಷಿ', 'ಪಾಂಚಜನ್ಯ'ದಂಥ ಕೃತಿಗಳನ್ನು ರಚಿಸಿದ ಕುವೆಂಪುಪ್ರತಿಭೆ 'ಮನೆ ಮನೆ ಮುದ್ದುಮನೆ' 'ಬೊಮ್ಮನ ಹಳ್ಳಿಯ ಕಿಂದರಜೋಗಿ'ಯನ್ನೂ ಸೃಷ್ಟಿಸಿತು. 'ಗಂಡುಗೊಡಲಿ' ರಚಿಸಿದ ರಾಜರತ್ನಂ 'ರತ್ನನ ಪದಗಳು' ಬರೆದಂತೆ ಅನೇಕ ಮುದ್ದು ಮುದ್ದಾದ ಶಿಶುಗೀತಗಳನ್ನೂ ಬರೆದರು.

ಆದಾಗ್ಯೂ ಸ್ಥೂಲವಾಗಿ ಒಂದು ಮೊತ್ತದಲ್ಲಿ, ಹಾಗೆಯೇ ಸೂಕ್ಷ್ಮವಾಗಿ ಒಂದು ಗುಣಮಟ್ಟದಲ್ಲಿ ಯಾವನೊಬ್ಬ ಕವಿಯ ಕೃತಿರಾಶಿಯನ್ನು ಒಟ್ಟಾರೆ ಗಮನಿಸಿ ದಾಗ ಅದರಲ್ಲಿ ಮೇಲಾಗಿ–ಮಿಗಿಲಾಗಿ ವಿಜೃಂಭಿಸುವ ಒಂದು ಕಾವ್ಯರೀತಿಯನ್ನೋ ಮಾದರಿಯನ್ನೋ ಗುರುತಿಸುವದು ಸಾಧ್ಯ. ಆ ದೃಷ್ಟಿಯಿಂದ ಮೇಲೆ ನಮೂದಿಸಿದ ವರ್ಗೀಕರಣವೂ ಸಾಧು ಎನ್ನಬಹುದು. ಇಂಥ ವರ್ಗೀಕರಣ ತಕ್ಕು, (Valid)ದಾಗಲಿಕ್ಕೆ ಮುಖ್ಯ ಕಾರಣ ಆ ಕವಿ ಏನೇ ಬರೆದರೂ ಹೇಗೇ ಬರೆ ದರೂ ಅವರಲ್ಲಿ ಹರಿದಾಡುವ ಅವನ ಊಹನೆಯ ಗುಣ, ಕಲ್ಪನೆಯ ತೀವ್ರತೆ

ಹಾಗೂ ಪ್ರಯೋಗಿಸುವ ಭಾಷೆಯ ಜಾಡು–ಅದರ ಪದಪವಣಿಕೆ, ಶಬ್ದಗಳ ಆಯ್ಕೆ, ಬಳಕೆ ತಡಿಕೆಗಳ ಹದ–ಹವಣೂ–ಇವೆಲ್ಲವುಗಳ ಒಂದು ವಿಶಿಷ್ಟವೂ ನಿರ್ದಿಷ್ಟವೂ ಆದ ರೀತಿ ಅವನು ಹೆಚ್ಚಾಗಿ ಯಾವ ವರ್ಗೀಕರಣಕ್ಕೆ ಒಗ್ಗುವವ ನೆಂಬುದನ್ನು ಹೆಚ್ಚು ಕಡಿಮೆ ಖಚಿತಗೊಳಿಸಬಹುದು.

ಈ ದೃಷ್ಟಿಯಿಂದ ನಮ್ಮ ಉತ್ತರ ಕನ್ನಡದ ಹಿರಿಯ ಕವಿ ಡಾ. ದಿನಕರ ದೇಸಾಯಿ ಸತ್ವದಿಂದಲೂ ಸಿದ್ಧಿಯಿಂದಲೂ ಜನತೆಯ ಕವಿ. ಅದರ ಜತೆಗೇ ಪ್ರಸಿದ್ಧಿಯಿಂದ ಮಕ್ಕಳ ಕವಿ. ಅವರು ಪ್ರೌಢರಿಗಾಗಿಯೇ ಮೊದಲು ಕವಿತೆ ರಚಿಸತೊಡಗಿದರು. ಅಂಥ ಕೆಲವನ್ನು ದಿ. ಬಿ. ಎಂ. ಶ್ರೀ ಅವರು ದಿನಕರರು ಕಾಲೇಜ ಕಲಿಯುವ ದಿನಗಳಲ್ಲಿಯೇ ‘ ತಳಿರು ’ ಸಂಕಲನದಲ್ಲಿ ಪ್ರಕಟಿಸಿದ್ದರು. ಆದರೆ ವಿದ್ಯಾ ಇಲಾಖೆಗಳ ಅನುಗ್ರಹದಿಂದ ಕನ್ನಡ ಪಠ್ಯದ ಅನೇಕ ಕ್ರಮಿಕ ಪುಸ್ತಕಗಳಲ್ಲಿ ಪ್ರಾಥಮಿಕ–ಮಾಧ್ಯಮಿಕ ಶಿಕ್ಷಣದ ಎಲ್ಲ ಪಾಠಗಳಲ್ಲಿಯೂ ಇವರ ಮಕ್ಕಳ ಪದ್ಯಗಳು ಕಾಣಿಸಿಕೊಂಡು ಕನ್ನಡ ಮಕ್ಕಳ ಮೆಚ್ಚುಗೆಯಲ್ಲಿ ಅಚ್ಚಳಿಯದ ಸ್ಥಾನವನ್ನು ಗಳಿಸಿಕೊಂಡವು.

ಈ ಜನಪ್ರಿಯತೆಯ ಶಕ್ತಿಗೆ ನಾನೂ ಸೋತುಹೋಗಿ ಡಾ. ದೇಸಾಯರು ಮೂಲತಃ ಮಕ್ಕಳ ಕವಿಗಳು, ಮಕ್ಕಳ ಪದ್ಯಗಳನ್ನೇ ಮೊದಲಿಗೆ ಬರೆದಿರಬೇಕು ಎಂದು ಭಾವಿಸಿದೆ. ಆ ಬಗೆಗೆ ಅವರಿಗೇ ನೇರ ಬರೆದು ಕೇಳಿದಾಗ ಅವರು ಹೀಗೆ ಖುಲಾಸೆ ಕೊಟ್ಟರು :

‘ I first wrote the poems for adults. After some years I wrote poems for Children… One reason why I began to write Children's poems much later than my poems for adults was that I began to use simple words ’.

ಇಲ್ಲಿದೆ ದಿನಕರರ ಕಾವ್ಯದೃಷ್ಟಿಯ ನಿಲುಕು. ಅವರು ಮಕ್ಕಳ ಕವಿಯೋ, ಜನತೆಯ ಕವಿಯೋ ಎಂಬ ಪ್ರಶ್ನೆಗೆ ಅವರ ಈ ನಿಲುವಿನಿಂದಲೇ ಉತ್ತರ ಸಿಗುತ್ತದೆ. ಅವರು ಮಕ್ಕಳ ಪದ್ಯ ಬರೆದಂತೆ ಒಕ್ಕಲ ಪದ್ಯ ಬರೆದರು. ‘ ದೀನಗಿಂತ ದೇವ ಬಡವ ’, ‘ ನನ್ನ ದೇಹದ ಬೂದಿ ’ ಮುಂತಾದ ಮನನೀಯ ಪ್ರೌಢ ಪದ್ಯ ಬರೆದರು. ‘ ನಾಡವರೇ ನಿಜ ನಾಡಿಗರು ’ ‘ಕೆಂಪು ಬಾವುಟವು ರೈತರದು ’ ಇತ್ಯಾದಿ ರಾಷ್ಟ್ರೀಯ, ವರ್ಗಜಾಗೃತಿಯ ಗೀತ ಹಾಡಿದರು. ‘ ಕೇಶವ ಕಾಮತಿ ಕೇಳೋ ಸಂಗತಿ । ಊರಿಗೆ ದೊಡ್ಡ ಒಡೆಯ । ದೆವ್ವಕ್ಕಿಂತ ಕಡೆಯ ॥ ’ ಎಂದು

ಮುಂತಾದ ಅವರ ಗುಮಟೆಯ ಪದ್ಯಗಳು ಇನ್ನೂ ನಮ್ಮ ಕರಾವಳಿಯ ಹಾಲಕ್ಕಿ ಒಕ್ಕಲ ಬಾಯಲ್ಲಿ ನಲಿದಾಡುತ್ತಿವೆ.

ಅಂದಾಗ ಮಕ್ಕಳ ಹಾಗೂ ಜನತೆಯ ಮನಸ್ಸನ್ನು ಸೂರೆಗೊಳ್ಳುವ ಅವರ ಕಾವ್ಯದ ಮೋಹನಶಕ್ತಿ ಯಾವದು ? ಅದೇ ಅವರು ಕಾವ್ಯಸಾಧನೆಯಲ್ಲಿ ಮಾಡಿದ ಸಂಕಲ್ಪ. 'I began to use simple words' ಆದರೆ ಇಲ್ಲಿ ಅವರು ಆರಂಭಿಸಿದ್ದು ಕೇವಲ ಸಾದಾಸರಳ ಶಬ್ದಸರಣಿ ಮಾತ್ರವಲ್ಲ. ಹರಿಯುವ ಹಳ್ಳ ತನ್ನ ನೀರಿನ ಮೊತ್ತ, ರಭಸ, ನಿಟ್ಟುನಡೆಗಳಿಗೆ ತಕ್ಕಂತೆ ತನ್ನ ಪಾತ್ರವನ್ನು ಅದರ ಗಾತ್ರವನ್ನೂ ಕೊರೆದುಕೊಂಡು ಮುಂದುವರಿಯುತ್ತದೆ. ಕವಿಯ ಶಬ್ದಶೈಲಿಯ ಬೆನ್ನಿಗೆ ಅದನ್ನು ಅವರು ರೂಪಿಸಿಕೊಳ್ಳುವ ವಿಶಿಷ್ಟ ಮನೋಧರ್ಮ, ಭಾವ ಸೂಕ್ಷ್ಮ ಹಾಗೂ ಉತ್ಪ್ರೇಕ್ಷೆಯ ಉಡ್ಡಾಣ ಅಥವಾ ಪ್ರತಿಭೆಯ ಉನ್ಮೇಷ ತನ್ನದೇ ಆದ ಒತ್ತಡದಿಂದ ಕೆಲಸಮಾಡುತ್ತದೆ. ಭಾರತ ಸೇವಕ, ಜನಸೇವಕ, ಸಮಾಜ ಕಾರ್ಯಕ್ಕೆ ದೀನ-ದಲಿತ ಬಹುಜನ ಸಮುದಾಯದ ಕಲ್ಯಾಣಕ್ಕಾಗಿ ಜೀವಮಾನವೆಲ್ಲ ಮುಡಿಪಿಟ್ಟು ದುಡಿಯುವ ಕವಿ ದಿನಕರರ ಕಾವ್ಯ-ಅದು ಪ್ರೌಢವಿರಲಿ, ಮುಗ್ಧವಿರಲಿ-ಜನತೆಯ ಹೃದಯಕ್ಕೆ ನಿಲುಕುವಂತೆ ಆ ಹೃದಯದ ಮಿಡಿತ ನುಡಿಸುವಂತೆ ಸರಳ ಸಾದಾ ಸುಬೋಧ ಶಬ್ದಶೈಲಿಯನ್ನೇ ಕೊನೆಗೂ ಆಯ್ದು ತನ್ನನ್ನು ಎರಕ ಹೊಯ್ದುಕೊಳ್ಳುತ್ತದೆ.

ಮಕ್ಕಳ ಮನಸ್ಸಿನಂತೆಯೇ ಜನತೆಯ ಮನಸ್ಸು. ಅಲ್ಲಿ ಸಲ್ಲುವದೇ ಇಲ್ಲೂ ಸಲ್ಲುತ್ತದೆ. ಅಲ್ಲಿ ಶಿಷ್ಟ-ಶ್ಲೇಷ (Sophistry)ಕ್ಕೆ ಬೌದ್ಧಿಕ ಕಸರತ್ತಿಗೆ, ಸ್ವೈರ ಕಲ್ಪನಾವಿಲಾಸದ ಕರಾಮತ್ತಿಗೆ ಅಷ್ಟೊಂದು ಇಂಬಿಲ್ಲ. ಪ್ರೌಢವಿರಲಿ, ಬಾಲವಿರಲಿ ಅಲ್ಲಿ ಪ್ರಗಲ್ಭತೆಗಿಂತ ಪ್ರಸನ್ನತೆ ಪ್ರಫುಲ್ಲತೆಗೇ ಪ್ರಾಮುಖ್ಯತೆ.

ಆದ್ದರಿಂದಲೇ ಡಾ. ದಿನಕರ ದೇಸಾಯಿಯರನ್ನು ಜನತೆಯ ಕವಿಯೆಂದರೂ ಸರಿಯೇ, ಮಕ್ಕಳ ಕವಿಯೆಂದರೂ ಸರಿಯೇ. ಆದರೆ ಇಲ್ಲಿ ನಾವು ಅವರನ್ನು ಗಮನಿಸುವದು ಕನ್ನಡ ಕಾವ್ಯದಲ್ಲಿಯ ಒಬ್ಬ ಶ್ರೇಷ್ಠ ಮಕ್ಕಳ ಕವಿಯೆಂದು.

ಕವಿ ದಿನಕರರು ಪ್ರಕಟಿಸಿದ ಪ್ರಪ್ರಥಮ ಮಕ್ಕಳ ಪದ್ಯ ಯಾವುದು ? ಮಕ್ಕಳಿಗೆ ಕೇಳಿದರೆ ಅವರಲ್ಲಿ ಇತ್ತಂಡವಾಗಿ ವಾದವೇ ಏಳಬಹುದು. ಒಂದು ತಂಡ 'ಟಿಕ್ ಟಿಕ್ ಗೆಳೆಯ' ಎಂಬ ಗಡಿಯಾರದ ಪದ್ಯ, ಇನ್ನೊಂದು ತಂಡ 'ಬೆಕ್ಕೇ ಬೆಕ್ಕೇ ಮುದ್ದಿನಸೊಕ್ಕೇ' ಎಂಬ ಬೆಕ್ಕಿನ ಪದ್ಯವನ್ನು ಎತ್ತಿ ಹಿಡಿದು ಹಾಡಿ

ಕೈ ತಟ್ಟಿ ಕುಣಿಯಬಹುದು. ಆದರೆ ಇವೆರಡರಲ್ಲಿ ಒಂದು ಮೊದಲನೆಯದೆಂಬ ಭಾವನೆ ಬೇರೂರಲು ಒಂದು ಕಾರಣ ತೀರ ಪ್ರಾಥಮಿಕ ಇಯತ್ತೆಗಳಲ್ಲಿ ನಮ್ಮ ಮಕ್ಕಳು ಇದನ್ನು ಓದಿದ್ದೇ ಆಗಿರಬೇಕು.

ಈ ಕುರಿತು ನಾನು ದಿನಕರರನ್ನು ಕೇಳಿದಾಗ ಅವರು ತಿಳಿಸಿದ್ದು ಹೀಗೆ: 'ಯಾವುದು ಮೊದಲು ನನ್ನ ಕವನವೋ ನನಗೆ ಈಗ ನೆನಪಾಗುವದಿಲ್ಲ. ಆದರೆ 'ಬೆಕ್ಕಿ'ನ ಪದ್ಯ ಮಾತ್ರವೊದಲನೆಯದಲ್ಲ.' ಅದೇನೇ ಇರಲಿ, ಅವರ 'ಮಕ್ಕಳ ಗೀತಗಳು' ಎಂಬ ಪ್ರಥಮ ಕವನ ಸಂಕಲನ ೧೯೫೧ ರಲ್ಲಿ ಪ್ರಕಟವಾಯಿತು. ಆಗ ಅದಕ್ಕೆ ಅಂದಿನ ಮುಂಬಯಿ ಸರಕಾರದಿಂದ ಬಹುಮಾನವೂ ಸಂದಿತ್ತು. ಅನಂತರ ಅವರ 'ಮಕ್ಕಳ ಪದ್ಯಗಳು' ಎಂಬ ಎರಡನೆಯ ಸಂಕಲನ ೧೯೫೭ ರಲ್ಲಿ ಹೊರ ಬಂತು. ಅದೇ ವರ್ಷ 'ಗೀತ'ಗಳ ಎರಡನೆಯ ಆವೃತ್ತಿಯು ಪ್ರಕಟವಾಯಿತು. ದಿನಕರರ ಶಿಶುಕಾವ್ಯ ಇವೆರಡೇ ಸಂಕಲನಗಳಲ್ಲಿ ಅಡಕ ವಾಗಿದೆ. ಈಚೆಗೆ ೧೯೭೪ ರಲ್ಲಿ ಕವಿವರ್ಯರು ತಮ್ಮ ಹಿಂದಿನ ಎರಡು ಸಂಗ್ರಹ ಗಳಿಂದ ಆಯ್ದ ಕವನಗಳನ್ನು ಸೇರಿಸಿ 'ಮಕ್ಕಳ ಪದ್ಯ' ಎಂಬ ಹೆಸರಿನಲ್ಲಿ ಸಂಗ್ರಹವನ್ನೊಂದು ಪ್ರಕಟಿಸಿದ್ದಾಗಿದೆ. (ಅದರಲ್ಲಿ ಇನ್ನು ಮೂರು ಹೊಸ 'ಬೆಕ್ಕಿನ ಪದ್ಯ'ಗಳನ್ನು ಸೇರಿಸಿದ್ದಾರೆ.) ಈ ಹೊಸ ಸಂಗ್ರಹವನ್ನೇ ಮುಂದಿಟ್ಟುಕೊಂಡು ದಿನಕರರ 'ಮಕ್ಕಳಪದ್ಯ' ಗಳ ಬಗೆಗೆ ಈ ಪರಿಶೀಲನೆ ಕೈಕೊಳ್ಳಲಾಗಿದೆ, ಸದ್ಯದ ಪರಿಮಿತಿಯ ಅನುಕೂಲಕ್ಕಾಗಿ.

ಈ ಮಕ್ಕಳ ಪದ್ಯಗಳ ಸರ್ವ ಸಾಮಾನ್ಯ ಸ್ಥೂಲ ಲಕ್ಷಣಗಳನ್ನು ನಿರೂಪಿಸುವ ಮುನ್ನ, ಈ ಪದ್ಯ ಪ್ರಕಾರದ ವೈಶಿಷ್ಟ್ಯವನ್ನು ತುಸು ಜ್ಞಾಪಿಸಿಕೊಳ್ಳಬೇಕು. ಮಕ್ಕಳ ಪದ್ಯವೆಂದರೇನು ? ಮಕ್ಕಳಿಗಾಗಿ ಬರೆದ ಪದ್ಯವೋ ? ಮಕ್ಕಳೇ ಬರೆದ ಪದ್ಯವೋ ? ಅಥವಾ ಶುದ್ಧ ಮಕ್ಕಳೇ ಬರೆದ ಪದ್ಯವೋ ? ಈ ಕೊನೆಯ ಪ್ರಕಾರವು ಇಂದು ಸಾಹಿತ್ಯದಲ್ಲಿ ಒಂದು ವಿಶೇಷ ಕುತೂಹಲದ ಸ್ಥಾನವನ್ನೂ ಬೆಲೆಯನ್ನೂ ಪಡೆಯುತ್ತಿದೆ. ಅನೇಕ ಮಕ್ಕಳಲ್ಲಿ ಅವರ ತೀಕ್ಷ್ಣಬುದ್ಧಿ, ಸೂಕ್ಷ್ಮ ದೃಷ್ಟಿ ಮತ್ತು ತೀವ್ರ ಕಲ್ಪನೆಗಳೊಂದಿಗೆ ಅಷ್ಟೇ ಬಲವಾದ ತಾಲದ ಅಥವಾ ಲಯದ (Rhythm) ಪ್ರಜ್ಞೆಯೂ ಇದ್ದರೆ ಅವರು ತಮ್ಮ ಶಬ್ದಕೋಶದ ಇತಿಮಿತಿಯಲ್ಲಿಯೇ ತಮ್ಮ ಅನುಭವದ ತೆಕ್ಕೆಯೊಳಗೆ ಪದ್ಯ ಕಟ್ಟಿಹೇಳುವುದೂ ಹಾಡುವದು ಉಂಟು. ಗೋವಾದಲ್ಲಿ ಪ್ರಸಿದ್ಧ ಕೊಂಕಣಿ ಕವಿ ಶ್ರೀ ಆರ್. ವಿ. ಪಂಡಿತರಿದ್ದಾರೆ. ಅವರು ತಮ್ಮ ಮಗ ಮಾತು ಬಂದಾಗಿನಿಂದ ಪ್ರಾಸಕಟ್ಟಿಹಾಡಿದ ಚುಟುಕುಗಳನ್ನು, ಆತ ತಾನಾಗಿಯೇ ಕಟ್ಟಿದ ಬಾಲಭಾವದ ಪುಟ್ಟಕತೆಗಳನ್ನು

ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ನಿಜವಾದ ಶಿಶುಸಾಹಿತ್ಯ–ಮಕ್ಕಳೇ ಮಕ್ಕಳಿಗಾಗಿ ೫–೬ ವರ್ಷ ಪ್ರಾಯದೊಳಗೇ ರಚಿಸಿ ರೂಪಿಸಿದ ಸಾಹಿತ್ಯ. ಆದರೆ ಇಂಥ ರಚನೆ ತೀರ ಅಪರೂಪದ್ದು.

ಇನ್ನು ಮೊದಲನೆಯ ಮಾದರಿ–ಮಕ್ಕಳಿಗಾಗಿ ಬರೆದದ್ದು. ರವೀಂದ್ರನಾಥರಿಂದ ಆನಂದಕಂದರವರೆಗೂ ಬೇಂದ್ರೆಯವರಿಂದ ನಾರಾಯಣ ತೊರ್ಕೆಯವರೆಗೂ ಮಕ್ಕಳಿಗಾಗಿ ಪದ್ಯಗಳನ್ನು ಬರೆದಿದ್ದಾರೆ. ಟಾಗೋರರ 'ಕ್ರಿಸೆಂಟಮೂನ್'–(ಬಿದಿಗೆಯ ಚಂದ್ರ) ಆನಂದಕಂದರ 'ಮುದ್ದನಮಾತು' ಹಾಗೆಯೇ ಬೇಂದ್ರೆಯವರ ಹಲವಾರು ಮಕ್ಕಳ ಮನೋಲಹರಿ ಬಿಂಬಿಸುವ 'ಯಾರಿಗೂ ಹೇಳೋಣ ಬ್ಯಾಡಾ' 'ಬನ್ನಿ ಬನ್ನಿ ಕನಸುಗಳೇ' 'ಚಂದ್ರ' ಮುಂತಾದ ಉತ್ಕೃಷ್ಟ ಕವನಗಳು ಮಕ್ಕಳಪಾತಳಿಯಲ್ಲಿ ನಡೆದ ಪ್ರಗಲ್ಭ ಪ್ರೌಢ ಪ್ರತಿಭೆಯ ಕಲ್ಪನಾ ವಿಲಾಸದ ಲೀಲೆಗಳಾಗಿವೆ. ಅವುಗಳ ಮಾತು, ಧಾಟಿ ಮಕ್ಕಳದರಂತೆ. ಆದರೆ ಅಲ್ಲಿ ಒಡಮೂಡಿದ ಊಹೆಯು, ಉಕ್ತಿಯು ಚಮತ್ಕೃತಿ ಅಷ್ಟು ಸರಳವಲ್ಲ. ಮುಗ್ಧವೂ ಅಲ್ಲ. ಇದರ ಬಗೆಗೆ ಹೆಚ್ಚಿನ ವಿಶ್ಲೇಷಣೆ ಇಲ್ಲಿ ಅಶಕ್ಯ. ರವೀಂದ್ರರ 'ಲಿಟ್ಲಬಿಗ್‌ಮ್ಯಾನ್' ಅಥವಾ ಬೇಂದ್ರೆಯವರ 'ಕರಿಮರಿನಾಯಿ' ಬಾಲಿಶ ಭಾವವನ್ನೂ ಮೀರಿ ಪರಿಸ್ಪಂದನಗೊಳ್ಳುತ್ತದೆ. ಇರಲಿ ಇಂಥ ಹೃದ್ಯಪದ್ಯಗಳಲ್ಲಿ ಅಭಿವ್ಯಕ್ತಿಯು ಬಾಲ ಭಾಷಿತವಾಗಿ ಕಂಡರೂ ಅದರೊಳಗಿಂದ ವ್ಯಂಜನಗೊಂಡ ರಂಜನೆಗೂಡುವ ಆಶಯದ ಸತ್ವದಲ್ಲಿ ಒಂದು ಪ್ರೌಢಿಮೆಯ ಅರ್ಥಗೌರವವಿರುತ್ತದೆ. ಹೀಗೆ ಆಡುವ, ಹಾಡುವ ಮಕ್ಕಳು ಮರಿಟಾಗೋರರು, ಮರಿಬೇಂದ್ರೆ, ಮರಿಕೃಷ್ಣಶರ್ಮರು. ಅರ್ಥಾತ್ ಚಿಕ್ಕಕವನಗಳೆಲ್ಲ ಚಿಕ್ಕವರಿಗಾಗಿ ಬರೆದ ಕವನಗಳೆಂದ ಮಾತ್ರಕ್ಕೆ ಚಿಕ್ಕವರ ಚಿಕ್ಕಂದಿನ ಬಗೆಯ ಕವನಗಳಲ್ಲ.

ಆದ್ದರಿಂದ ಮೇಲೆ ಹೇಳಿದ ಎರಡನೆಯ ಪ್ರಕಾರದ ಕವನಗಳೇ ನಿಜವಾದ ಮಕ್ಕಳ ಪದ್ಯಗಳು. ಮಕ್ಕಳ ದೃಷ್ಟಿಯಿಂದ ಅವರ ಭಾವ ಲಹರಿಯಂತೆಯೇ ಮೂಡಿಬಂದ ಪದ್ಯಗಳು. ಇವುಗಳ ಮುಖ್ಯ ಲಕ್ಷಣವೆಂದರೆ, ಇಂಥ ಪದ್ಯವನ್ನು ಓದಿದಾಗ ಮಕ್ಕಳಿಗೆ ಇದು ತಮ್ಮದೇ ಪದ್ಯವೆನಿಸಬೇಕು. ಹಾಗೆ ಅನಿಸುವದು ಯಾವಾಗ ? ಹೇಗೆ ?

ಮಕ್ಕಳ ಹೃದಯ ನಾದಲೋಲ. ಮಕ್ಕಳಿಗೆ ಕಿವಿಗೆ ಸವಿಯಾಗುವ, ಹುಚ್ಚು ಹಿಡಿಸುವ, ಗಟ್ಟಿಮುಟ್ಟಾದ ಲಲಿತ ಮಧುರವಾದ ಪ್ರಾಸಮಯತೆ ಬೇಕು. ಹಾಗೆಯೇ ಕಟ್ಟುನಿಟ್ಟಾದ ಲಯುಗಾರಿಕೆಯ ಕಾಲದ ಆವರ್ತ, ತಾಲದ ಗತ್ತು

ಬೇಕು. ಪದ್ಯ ಓದಿದಾಗ ಅವನ್ನು ಹಾಡುವಂತೆ ಹಾಡಿದಾಗ ಅದಕ್ಕೆ ಹೆಜ್ಜೆಹಾಕಿ ಕೈತಟ್ಟಿ ಕುಣಿಯುವಂತೆ ಮಕ್ಕಳಿಗೆ ಅನಿಸಬೇಕು. ಈ ಪ್ರಾಸ (Ryme) ಮತ್ತು ಈ ಲಯಬಂಧ (Rhythm) ಮಕ್ಕಳ ಪದ್ಯದ ಜೀವಾಳ. ಆ ಮೇಲೆ ಪದ್ಯದಲ್ಲಿಯ ಲಾಕ್ಷಣಿಕ ಅಂಶಗಳು ಮಕ್ಕಳ ಬುದ್ಧಿಗೆ ನಿಲುಕುವಂತೆ ಇರಬೇಕು. ಅಲ್ಲಿಯ ಊಹೆ–ಉತ್ಪ್ರೇಕ್ಷೆಗಳು, ಉಪಮೆ ರೂಪಕಗಳು ಚಿತ್ರಮಯವಾಗಿ ಅದ್ಭುತರಮ್ಯವಾಗಿ ವಿಚಿತ್ರಲೋಕವನ್ನೇ ತೆರೆದು, ಅಲ್ಲಿಗೆ ಕರೆಯುವಂತೆ ಅವರ ಭಾವಕೋಶಕ್ಕೆ ಬಣ್ಣವನ್ನೂ ರೂಪವನ್ನೂ ಸೊಗಸನ್ನೂ ತುಂಬುವಂತೆ ಇರಬೇಕು. ಮಕ್ಕಳ ಕಣ್ಣು 'ಕ್ಷ' ಕಿರಣದಂತೆ ಯಥಾರ್ಥ ಪಾರದರ್ಶಿ ಅಲ್ಲ; ಅದು ಯಕ್ಷಕಿರಣ. ಮಾಯಾದೀಪ್ತಿಯ ಅಪರಾದರ್ಶಿ. ಕೊನೆಗೆ ಪದ್ಯದ ಭಾಷೆ ಮತ್ತು ಭಣಿತದ ಶೈಲಿ ಮಕ್ಕಳ ನಾಲಿಗೆಗೆ ನಡುವಳಿಕೆಗೆ ಹಾಗೂ ತಿಳುವಳಿಕೆಗೆ ಸಹಜವಾಗಿ ಹೊಂದಿಕೊಳ್ಳಬೇಕು. ಕೆಲವು ಸಲ ಈ ಪಂಚತಂತ್ರಗಳಲ್ಲಿ ಒಂದೆರಡು ಲೋಪವಾದರೂ ಉಳಿದವುಗಳ ಕಸುವಿನಿಂದ ಪದ್ಯ ಮಕ್ಕಳ ಎದೆಯನ್ನು ತಟ್ಟಬಲ್ಲದು. ವಿಶೇಷತಃ ಅವರನ್ನು ಬಲವಾಗಿ ಸೆರೆಹಿಡಿಯುವ ಪ್ರಾಸ ಮತ್ತು ಲಯಬದ್ಧತೆಗಳು ಬಲಿಷ್ಠವಿದ್ದರೆ. ಇದಕ್ಕೊಂದು ಉತ್ತಮ ಉದಾಹರಣೆ, ಅಂಬಿಕಾತನಯದತ್ತರ 'ಪಾತರ ಗಿತ್ತಿಪಕ್ಕಾ' ಪ್ರಾಸ, ಲಯ, ಊಹೆ, ಭಾಷೆ ಮತ್ತು ಶೈಲಿ ಈ ಪಂಚಾಂಗ ಶುದ್ಧಿಯ ಒರೆಗಲ್ಲಿಗೆ ದಿನಕರರ ಮಕ್ಕಳ ಪದ್ಯಗಳನ್ನು ಒರೆದು ನೋಡಿದಾಗ ಅವು 'ಸರಾಸರಿ' ಹೊನ್ನಿನ ಬೆಲೆಗೆ ತೂಗುತ್ತವೆ.

'ಪಂಚಖಾದ್ಯ' ಎಲ್ಲ ಮಕ್ಕಳ ಪರಮ ಪ್ರೀತಿಯ ಕಜ್ಜಾಯ. ದಿನಕರರ ಈ ಗೀತ–ಪದ್ಯಗಳನ್ನು ಓದಿದಾಗೆಲ್ಲ ನನಗೆ ಈ ಪಂಚ-ಖಜ್ಜಾಯದ ನೆನಪಿನಿಂದ ನಾಲಗೆಗೆ ನೀರೂರುತ್ತದೆ. ಮೇಲೆ ನಮೂದಿಸಿದ ಐದು ಗುಣಗಳ ಹಿತಮಿತವಾದ ಹೊಂದಾಣಿಕೆಯಲ್ಲಿ ದಿನಕರರು ತಮ್ಮದೇ ಆದ ಒಂದು ಹದವನ್ನು ಸಾಧಿಸಿದ್ದಾರೆ. ಅವರ ಯಾವ ಪದ್ಯವನ್ನೇ ಎತ್ತಿಕೊಳ್ಳಿ, ದನಿತೆಗೆದು ಓದಿಕೊಳ್ಳಿ. ಅವುಗಳ ಸಹಜ ಪ್ರಾಸ, ಬಿಗುವಿನ ಪದಬಂಧ, ಲಲಿತವಾದ ಲಯಗಾರಿಕೆ ತೀರ ಪ್ರವಾಹಿಯೂ ಅರ್ಥವಾಹಿಯೂ ಆದ ಆಡುಮಾತಿನ ನಡಿಗೆ ಇವುಗಳ ಉತ್ಕೃಷ್ಟ ಸಮವಾಯ ಅಲ್ಲ, ಸಮನ್ವಯ–ಈ ಕಾವ್ಯದ ಪಾಕಸಿದ್ಧಿ. ಇಲ್ಲಿ ಮಕ್ಕಳ ಭಾವನೆ, ಊಹನೆಗಳ ಬೀಸು ಹಾಸುಗಳ ಎತ್ತರ–ಬಿತ್ತರಗಳನ್ನು ಮೀರಿ ಕವಿಯ ಕಲ್ಪನೆ ಎಲ್ಲೂ ಸ್ವೈರವಾಗಿ ಏರಾಡುವದಿಲ್ಲ, ಹಾರಾಡುವದಿಲ್ಲ. ಆದಾಗ್ಯೂ ಅದು ಬಾಲರ ಮನೋಭೂಮಿಯ ಆಕರ್ಷಣೆಯಿಂದ ಚಿತ್ರಭಿತ್ತಿಯ ಆಧಾರದಿಂದ ಜಾರಿ ತಪ್ಪಿ ಹೋಗುವದಿಲ್ಲ. 'ಮಕ್ಕಳ ಆಟದ ಹಕ್ಕಿ ದಿಟ' ಎಂಬ 'ಗಾಳಿಪಟ'ದಂತೆ. ಅದು, ಹಕ್ಕಿಯ ಮೀರಿ । ದಿಕ್ಕಿಗೆ ಹಾರಿ । ಹದ್ದಿಗೆ ಸೋಲು । ಚಿಕ್ಕೆಗು ಮೇಲು । ಏರಿ ಹಾರಾಡಿ

ಮುಗಿಲಲಿ ಮಾಟ ಸೊಗಸಿನ ಆಟ।. ಆಡಿದರೂ ಅದರ ಹುರಿ ಪುಟಾಣಿಗಳ ಪುಟ್ಟ ಮುಷ್ಟಿಯಲ್ಲಿ ಭದ್ರವಾಗಿಯೇ ಇರುತ್ತದೆ. ದಿನಕರರ ಪದ್ಯಗಳು ನಿಜ ವಾಗಿಯೂ ಮಕ್ಕಳ ಬದುಕಿನ ಯಾವ ಭಾವ ಭಂಗಿಯೊಂದಿಗೂ ಪೂರ್ತಿ ಹೊಂದಿಕೊಂಡೇ ಪಡಿನುಡಿಯುತ್ತವೆ. ಮಕ್ಕಳ ಮನೋಗತವನ್ನು ಅವು ಎಲ್ಲೂ ಕೈ ಬಿಡುವದಿಲ್ಲ. ಮಕ್ಕಳ ಆನಂದದ ಭರವಸೆಗೆ ಎಂದೂ ಕೈ ಕೊಡುವದಿಲ್ಲ.

ಈ 'ಗಾಳಿಪಟ' ಎಂಬ ಪದ್ಯವನ್ನೇ ಅಭ್ಯಸಿಸಿ : ಹಾರಾಡು। ಹೋರಾಡು, ಮೀರಿ। ಹಾರಿ, ಸೋಲು। ಮೇಲು, ಪಟ। ದಿಟ. ಆಟ। ಮಾಟ, ಸಣ್ಣ। ಅಣ್ಣ ಇಂಥ ಕೆಲವೇ ಸುಲಭ ಶಬ್ದ ಪ್ರಾಸಗಳನ್ನು ಇದು ಪಡೆದಿದೆ. ಇಂಥ ಪರಿಮಿತ ಹಾಗೂ ಪರಿಚಿತ ಪ್ರಾಸಗಳು ಎಲ್ಲಾ ಪದ್ಯಗಳಲ್ಲಿಯೂ ಆಗಾಗ್ಗೆ ಬರುತ್ತಿರುತ್ತವೆ. ಮುಗಿಲು, ಹಕ್ಕಿ, ಹದ್ದು, ಚಿಕ್ಕೆ ಮುಂತಾದ ಪ್ರತಿಮೆಗಳು ಇತರ ಪದ್ಯಗಳಲ್ಲಿ ಯಂತೆ ಇಲ್ಲಿಯೂ ಮಕ್ಕಳ ಅರಿವಿನ ಅಳವು ಮೀರಿ ನಿಲ್ಲುವದಿಲ್ಲ.

ಆದಾಗ್ಯೂ ಈ ಪದ್ಯ ಬಾಲಮನೋಭಾವದ ಒಂದು ಲಹರಿಯ ಉದ್ಗಾರವನ್ನು ಪೂರ್ತಿಯಾಗಿ, ಪರ್ಯಾಪ್ತವಾಗಿ ಮಾತಿನಲ್ಲಿ ಸಾಕಾರಗೊಳಿಸುತ್ತದೆ. ಮಾತ್ರವಲ್ಲ, ಒಂದೆರಡು ಕಡೆಗೆ ಮಕ್ಕಳ ಎದೆಯಾಳದ ಒಂದು ಸಾತ್ವಿಕ ಶ್ರದ್ಧೆಯ ಮಿಣುಕನ್ನು ಫಕ್ಕನೆ ಬೆಳಗಿಸಿ ಮುಂದೆ ಸಾಗುತ್ತದೆ. ಮೊದಲನುಡಿಯ ಮುಗಿತಾಯಕ್ಕೆ ಗಾಳಿಪಟ ಹಾರಿಸುವ ಹುಡುಗ ಹೇಳುತ್ತಾನೆ :

'ನೋಡೋ ಮುಟ್ಟಿತು ಮುಗಿಲಲ್ಲಿ
ದೇವರ ಅಟ್ಟದ ತುದಿಯಲ್ಲಿ।'.

ಆ ಬಾಲಕನ ಊಹೆಗೆ ಈ ದೈವಿಕತೆಯ ಈಷತ್‌ಸ್ಪರ್ಶ ದಿನಕರ ದೃಷ್ಟಿಯ ಕಾಣ್ಕೆ. ಹಾಗೆಯೇ ಪದ್ಯದ ಮುಗಿತಾಯಕ್ಕೆ ಮಿಂಚುವ ಈ ಸುಂದರ ಉತ್ಪ್ರೇಕ್ಷೆ ನೋಡಿ :

'ನೋಡೋ ಎತ್ತರದಲಿ ಚಂದ
ಬಾನಿನ ಹಣೆಯಲಿ ಶ್ರೀಗಂಧ।'

ದೂರದ ಎತ್ತರದಲ್ಲಿ ಸಂಜೆಯ ಹೊಂಬಿಸಿಲಲ್ಲಿ ಹೊಳೆಯುವ ಆ ಗಾಳಿಪಟ ಆ ಬಾಲಕನಿಗೆ ಒಮ್ಮೆಲೆ ಬಾನಿನ ಹಣೆಯಲ್ಲಿ ಹಚ್ಚಿದ ಗಂಧದ ಬೊಟ್ಟಿನಂತೆ ಕಂಡಿತು! ಎಂಥ ಎದೆದುಂಬುವ ಮಾನವೀಯ ಕಂಪಿನ ಕಾವನ್ನು ಈ ಪಂಕ್ತಿಯು ಸೂಸುತ್ತದೆ! ಈ ಉತ್ಪ್ರೇಕ್ಷೆಯ ನಿಲುಕು ಎಷ್ಟು ಹೃದ್ಯವೋ ಸೂಚಿಸಲಾದ ಬಾಲಕನ ಊಹೆಯ ನಿಲುಕಿಗೂ ಅದು ಅಷ್ಟೇ ಸಾಧ್ಯ.

ಕೇವಲ ನಾಲ್ಕೈದು ಬಣ್ಣದ ಕಾಜಿನ ತುಣುಕುಗಳನ್ನೋ ಬಳೆಯ ಓಡು ಗಳನ್ನೋ 'ಬಹುರೂಪಿ' ಕೆಲೀಡೊಸ್ಕೋಪ (Kaleidoscope)ದ ನಳಿಕೆಯ ಒಂದು ತುದಿಯಲ್ಲಿಟ್ಟು ಅದನ್ನು ಸುತ್ತಾಡಿಸಿದಂತೆ, ಇನ್ನೊಂದು ತುದಿಯಿಂದ ನೋಡುವವರಿಗೆ ಚಿತ್ರ ವಿಚಿತ್ರ ಚೆಲವು ರೂಹುಗಳ ವರ್ಣರಂಜಿತ ವ್ಯೂಹಗಳು ಮರುಳುಗೊಳಿಸುತ್ತವೆ. ಅದೇ ರೀತಿ, ಕೆಲವೇ ಪರಿಚಿತ ಶಬ್ದಪ್ರಾಸಗಳು ಒಂದೆರಡೇ ಮಾದರಿಯ ಮಾತ್ರಾಗಣಗಳು, ಇವುಗಳನ್ನೇ ಸುತ್ತಾಡಿಸಿ ಪ್ರತಿಶಬ್ದದ ವ್ಯೂಹದಲ್ಲಿಯೂ ಹೊಸ ಸೊಗಸಿನ ರೂಹುಗಾರಿಕೆಯನ್ನು ಸಾಧಿಸುವ ಹಸ್ತಕೌಶಲ್ಯ ಈ ಕವಿಗೆ ಸಿದ್ಧಿಸಿದೆ.

ಈ ಪದ್ಯಗಳಲ್ಲಿ ಕವಿಯು ಸಾಧಿಸಿದ ಯಶಸ್ಸಿನ ಮರ್ಮ ಕವಿಯ ವಾಗ್ಧೋರಣೆಯ ದನಿಯಲ್ಲ. ಮಕ್ಕಳೊಂದಿಗೆ ಆತ ವಹಿಸಿದ ನಿಲುವೆಯಲ್ಲಿ ಇದೆ. ಕಥನ ಕವನಗಳನ್ನು ಕೆಲವು ಪೂರ್ಣ ಪ್ರಮಾಣದ (Ful length) ಸ್ವಭಾವ ಚಿತ್ರ ಗಳನ್ನು ಬಿಟ್ಟರೆ ಉಳಿದ ಎಲ್ಲಾ ಪದ್ಯಗಳಲ್ಲಿ ಕವಿಯು ಒಂದಲ್ಲ ಒಂದು ಬಗೆಯಲ್ಲಿ ನಾಟಕೀಯ (Dramatic) ಗುಣವನ್ನು ತುಂಬಿದ್ದಾರೆ. 'ಬೆಕ್ಕಿನ' ಕವನಗಳಂಥ ಹಲವಾರು ಪದ್ಯಗಳು ಸಂಬೋಧನೆಯ ಇಲ್ಲವೆ ಸಂವಾದ ರೂಪ ದಲ್ಲಿ ಇರುತ್ತವೆ. (ಸಂಬೋಧನೆ ಎಂದರೆ ಇಲ್ಲಿ Apostrophising ಎಂಬ ಅರ್ಥದಲ್ಲಿ) ಪದ್ಯದುದ್ದಕ್ಕೂ ಅದರ ವಸ್ತುವಾದ ಪ್ರಾಣಿಯನ್ನೋ ವಸ್ತುವನ್ನೋ ಸಂಬೋಧಿಸಿ ಮಾತನಾಡುವುದು, ಇಲ್ಲವೆ ಬಣ್ಣಿಸುವದು ಇದರ ರೀತಿ. ಬೆಕ್ಕಿನ ಕುರಿತ ಐದು ಪದ್ಯಗಳು, 'ಇಣಚಿ', 'ಕಾಮನಬಿಲ್ಲು' ಮುಂತಾದವು ಈ ಬಗೆಯವು. ಆದರೆ 'ಬೆಕ್ಕಿನ ಉತ್ತರ' 'ತಾಯಿಯ ಉತ್ತರ' ಇವು ಪ್ರಶ್ನೋತ್ತರಗಳ ಧಾಟಿಯವು. ಇಂಥವುಗಳಲ್ಲಿ ಕವನ ಒಂದು ರೀತಿ ಸಕ್ರೀಯ ಅಮಾಯಕ ಸಜೀವವಾಗುತ್ತದೆ. ಈ ನಾಟಕೀಯತೆಯನ್ನು ತರುವ ಇನ್ನೊಂದು ರೀತಿ ಮಗುವೆ ಪದ್ಯದ ನಾಯಕನಾಗಿ ಮಾತನಾಡುವದು. ಅಲ್ಲಿಯ ವಸ್ತುವಿನ್ಯಾಸ ಮಗುವಿನ ಮಾತಿನಲ್ಲಿಯೇ ಆಡಿತೋರುವ ರೀತಿ ಇದು. 'ಮಳೆರಾಯ', 'ಮಕ್ಕಳ ಬಯಕೆ', 'ನಮ್ಮ ಹಳ್ಳಿ', 'ಬಳಗ' ಮುಂತಾದವು ಇಂತಹವು. 'ಅಕ್ಕನಬಂಡಿ' 'ಅಕ್ಕನ ಲಗ್ನ' 'ನಮ್ಮೂರ ಪಟ್ಟ' ಮುಂತಾದವೂ ಕಥನ (Narrative) ಶೈಲಿಯಲ್ಲಿ ಇದ್ದರೂ ಅದನ್ನು ಕಥಿಸುವ ದನಿ ಕವಿ ಯದಲ್ಲ, ಒಂದು ಮಗುವಿನದೇ ಎಂಬಂತೆ ಮಗುವೇ ನುಡಿಯುವಂತೆ ಕವಿ ಎಚ್ಚರಿಕೆವಹಿಸಿದ್ದಾರೆ.

ಇನ್ನುಳಿದ ದೊಡ್ಡ ಗುಂಪು ಕಥನ ಕವನಗಳದು. 'ಮಲಮಗನ ಮದುವೆ', 'ಇಲಿಸಮ್ಮೇಳನ', 'ಚಂದ್ರನ ಕೂಸು' ಹಾಗೂ 'ರೈತ ಮತ್ತು ಕರಡಿ'

ಇವು ಕವನ ಕಥೆಗಳು. ಇವೇ ಜಾಡಿನ ಪ್ರಸಂಗ ಕಥನಗಳೆಂದರೆ 'ತಿಪ್ಪಾಭಟ್ಟರು ನೇಗಿಲು ಹಿಡಿದರು', 'ತಿಪ್ಪಾಭಟ್ಟರ ಕುಂಬಳಕಾಯಿ', 'ಅಕ್ಕನಲಗ್ನ' ಇತ್ಯಾದಿ. ಪೂರ್ತಿಶಬ್ದಚಿತ್ರಗಳು 'ಅಡಿಗೆಭಟ್ಟ', 'ಕೀಟಲೆ ಹುಡುಗ', 'ನಮ್ಮೂರ ಪೆದ್ದ', 'ಸೋಮಾರಿಮಲ್ಲ' ಮತ್ತು ಸುದೀರ್ಘವಾದ 'ತಿಪ್ಪಾಭಟ್ಟರು'. ಶುದ್ಧವರ್ಣನಾ ಕವನಗಳು 'ಚೆನ್ನಿ ಮತ್ತು ಕುನ್ನಿ', 'ಊದಬತ್ತಿ', 'ತತ್ತಿಯ ದೋಸೆ', 'ಪಾತರಗಿತ್ತಿ', 'ಚಂದಿರ ಮತ್ತು ತಾರೆಗಳು', 'ಕುಂಬಾರನ ತಿಗರಿ', 'ಬೆಳೆ', 'ದೇವರ ಎತ್ತು', 'ಹೊಲಿಗೆಯ ಯಂತ್ರ' ಮತ್ತು 'ಮೈಸೂರಿನ ತಿಂಡಿಗಳು.'

ಈ ಪದ್ಯಗಳನ್ನು ವಸ್ತುವಿನ ಪ್ರಕಾರದಂತೆ ವರ್ಗೀಕರಿಸಲೂಬಹುದು : ೧. ಪಶುಪಕ್ಷಿಗಳ ಬಗೆಗೆ–ಇವುಗಳಲ್ಲಿ ೩ ಕಥೆಗಳನ್ನು ಬಿಟ್ಟು ಉಳಿದವು ೪. ೨. ನಿಸರ್ಗ-ನಕ್ಷತ್ರ ಲೋಕ,ಒಟ್ಟು ೫. ೩. ಕೌಟುಂಬಿಕ–ಜೋಗುಳ ಹಿಡಿದು ೩. ಮತ್ತು ೪. ಬಾಲಲೀಲೆಯ ವಿನೋದ ವಿಷಯುಗಳವು.

ಈ ಸಂಕಲನದಲ್ಲಿ ಎರಡು ಎದ್ದು ಕಾಣುವ ಗುಂಪುಗಳಿವೆ. ಒಂದು ಬೆಕ್ಕಿನ ಪದ್ಯಗಳು ಆರು ; ಇನ್ನೊಂದು ತಿಪ್ಪಾಭಟ್ಟರ ಕುರಿತು ನಾಲ್ಕು. ಈ ನಾಲ್ಕರಲ್ಲಿ ಒಂದು ಸುದೀರ್ಘಕವನ 'ತಿಪ್ಪಾಭಟ್ಟರು'. ಆ ವಿನೋದ ಮೂರ್ತಿಯ ಅಳತೆಯ ಸ್ವರೂಪ ದರ್ಶನ. ನಿಜವಾಗಿಯೂ ಆ ಭಟ್ಟರ ಬಗೆಗೆ ಬಂದ ಇತರ ತುಂಡುಪದ್ಯಗಳು ಇದರೊಳಗೆ ಸೇರಿ ಈ ಖಂಡಕಾವ್ಯ ಪೂರ್ತಿಯಾಗಬಹುದಿತ್ತು. 'ತಿಪ್ಪಾಭಟ್ಟರ' ಕೊಡೆಯಲ್ಲಿ ಸ್ನಾನ, ರೂಮಾಲು, ಬುದ್ಧಿಯ ಬಲಶಾಲಿ, ಪಾಯಸದ ಹುಚ್ಚು, ಅವರು ನೇಗಿಲು ಹಿಡಿದದ್ದು, ಅವರ ಜನಿವಾರ, ಕುಂಬಳ ಕಾಯಿ ಖರೀದಿ–ಇವೆಲ್ಲ ಬಿಡಿ ಹಾಗೂ ಪ್ರಾಸಂಗಿಕ (Episodic) ಪದ್ಯಗಳು ಆ ವ್ಯಕ್ತಿಯ ವ್ಯಂಗ್ಯ ಚಿತ್ರಣ (Caricature)ದ ವಿವಿಧ ಭಂಗಿಗಳೇ ಆಗಿವೆ. ಆದರೆ ಈ ತುಂಡು ಪದ್ಯಗಳ ಗಣಸಂಖ್ಯೆ ಆ ಸುದೀರ್ಘ ಕವನದ ವೃತ್ತಕ್ಕೆ ಹೊಂದಿಕೆ ಆಗದು. ಇಲ್ಲವಾದರೆ ಇವೆಲ್ಲ ಒಂದೇ ವಸ್ತುವಿನ್ಯಾಸದ ನೀಳ್ಗವನ ವಾಗಬಹುದಿತ್ತು, ಇರಲಿ.

ಬೆಕ್ಕಿನ ಪದ್ಯಗಳು ಹೆಚ್ಚು ನಾಟಕೀಯ. ಚಿಕ್ಕಮಕ್ಕಳ ಭಾವಲೋಕಕ್ಕೆ ಹೆಚ್ಚು ಹತ್ತಿರ ಹಾಗೂ ಹಿಗ್ಗಿನವು. ಅವುಗಳ Pattern ಕೂಡಾ ಒಂದೇ–'ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ' ಆರಂಭವಾಗುವ ಈ ಪದ್ಯಗಳು ಮಗುವಿಗೂ ಅದರ ಮುದ್ದಿನ ಬೆಕ್ಕಿಗೂ ನಡೆದ ಸಂವಾದ ಕಥನಗಳಂತಿವೆ. 'ಕೇಳೋ ಕಳ್ಳಾ ಮುದ್ದಿನ

ಮಳ್ಳಾ ' ಎಂಬ ಮಾತಿನಿಂದ ಬೆಕ್ಕಿನ ಉತ್ತರ ಆರಂಭ (ಅದು ಬಂದಲ್ಲಿ). ಇವುಗಳಲ್ಲಿ ' ಬೆಕ್ಕು ' ಮಾತ್ರ ಒಂದು ಶಬ್ದಚಿತ್ರಣ-ಮಗುವಿನ ಮಾತಿನಲ್ಲಿಯೇ ಕವಿ ಬರೆದದ್ದು.

ಬೆಕ್ಕಿನ ಕುರಿತು ಮೊದಲನೆಯ ಕವನ Pussy cat pussy cat Where had you Been ? ಎಂಬ ಜನಪ್ರಿಯ ಇಂಗ್ಲೀಷ ಶಿಶುಗೀತದ ಅನುಕರಣ. ದಿನಕರರ ಶಿಶುಗೀತಗಳಲ್ಲಿ ಇದೊಂದೇ ಅಂಥ ಅನುಕರಣ ಗೀತ. ಇದೂ ಪೂರ್ತಿ ಕನ್ನಡೀಕರಣಗೊಂಡಿದೆ. ಮಗು ಬೆಕ್ಕಿಗಾಗಿ ' ಹಾಲೂ ಬೆಲ್ಲ ಕಾಯಿಸಿ ಇಟ್ಟಿದ್ದೆ ' ಅನ್ನುವದು ಈ ಕನ್ನಡತನಕ್ಕೆ ಕನ್ನಡಿ. ಆಂಗ್ಲ Pussy ಲಂಡನ್ನಿಗೆ ಹೋಗಿತ್ತು ರಾಣಿಯನ್ನು ನೋಡಲು. ಆದರೆ ಅಲ್ಲಿ ನೋಡಿದ್ದು ಆಕೆಯ ಸಿಂಹಾಸನದ ಕೆಳಗೆ ಒಂದು ಇಲಿಯನ್ನು ! ಬೆಕ್ಕಿಗೆ ಎಲ್ಲೆ ಹೋಗಲಿ ಇಲಿಯೊಂದೇ ಲಕ್ಷ್ಯ ! ದಿನಕರರ ಈ ಕನ್ನಡ ಬೆಕ್ಕೂ ಹೆಚ್ಚು ನಿರೀಕ್ಷಕ. ಅದು ' ರಾಜನಸಂಗಡ ರಾಣಿಯೂ ಇದ್ದಳು । ಅಂತಃಪುರದೊಳಗೆ '-ಎಂದು ಕಂಡುಕೊಳ್ಳುತ್ತದೆ. ಇಲ್ಲಿ ಅಂತಃಪುರ, ರಾಣಿಯಮಂಚ, ರಾಜನ ದಂಪತಿಯ ಏಕಾಂತ ಸೂಚಿತವಾಗಿದೆ. ಆದರೆ ಅದು ಚಿಲಿಪಿಲಿ ಇಲಿಯೊಂದನ್ನು ಗಮನಿಸುವದು ಆನಂತರ. ಅಂದರೆ ಈ ಪದ್ಯದ ಬೆಕ್ಕಿನ ಆಸಕ್ತಿಯ ಒಮ್ಮೊಗತನ ಸಡಿಲು ಬೀಳುತ್ತದೆ. ಇದರಿಂದ ವಿವರ ವರ್ಣಿಕೆಯಲ್ಲಿ ಈ ಪದ್ಯ ಇಂಗ್ಲೀಷ ಕವನಕ್ಕಿಂತ ಹೆಚ್ಚು ತುಂಬಿಬಂದಿದ್ದರೂ ಗುರಿಗಾರಿಕೆಯಲ್ಲಿ ಮೊಂಡವೆನಿಸುತ್ತದೆ. Pussy cat ಹೋದದ್ದು ರಾಣಿಯ ದರ್ಶನಕ್ಕೆ ಆದರೆ ಮಾಡಿದ್ದು ಇಲಿಯ ಬೇಟೆ-ಕಂಡಿದ್ದೂ ಇಲಿಯನ್ನೇ. ಆದರೆ ದಿನಕರರ ಮುದ್ದಿನ ಸೊಕ್ಕು ಹಾಗಲ್ಲ, ಇದಕ್ಕೆ ' ಪರಿಸರ ಪ್ರಜ್ಞೆ ' ಹೆಚ್ಚು !

' ಕುಮಟೆಯ ತೇರು ' ಬೇರೆ ಯಾವ ಊರ ತೇರಜಾತ್ರೆಗೂ ಸಲ್ಲುವ ಚೆಂದ ಪದ್ಯ. ಕುಮಟೆಯೇ ಏಕೆ ? ' ಗುಮಟೆಯ ಪದಕ್ಕೆ ' ಅದು ಸರಿಗೂಡುತ್ತದೆ ! ' ಬೆಕ್ಕಿನ ಆರೈಕೆ 'ಯಲ್ಲಿ ' ಮುದ್ದಿನ ಮಳ್ಳ 'ನಿಗೆ ಬೆಕ್ಕು ಉತ್ತರ ಕೊಡುವದಿಲ್ಲ. ಕವಿಯೇ ಹಾಡುತ್ತಾನೆ. ಬೆಕ್ಕಿಗೆ ಜಳಕ ಬೇಡವೆಂದು ಹಾಗೆಯೇ ಜಳಕದ ಥೀಮನ್ನೆ ಇಟ್ಟುಕೊಂಡ ಪದ್ಯ. ಕೊನೆಗೆ ಆರೈಕೆ-ಹಾಲು, ಮೀನುಗಳ ಪೂರೈಕೆಯ ಕಲ್ಪನೆಯಲ್ಲಿ ಕೊನೆಗಾಣುತ್ತದೆ ! ' ಬೆಕ್ಕಿನ ಉತ್ತರ ' ಇದೇ ಮಾದರಿಯ ಸುಟಿ ಯಾದ ಪದ್ಯ. ಆದರೆ ಕಳ್ಳ-ಮಳ್ಳ ಕೇಳಿದ ಪ್ರಶ್ನೆ ಎರಡು. ಬೆಕ್ಕಿನ ಉತ್ತರ ಮಾತ್ರ ಒಂದು. ' ಎರಡೂ ಕಣ್ಣಲಿ ಕಾಜಿನಗೋಲಿಯ ನಾಟಿಸಿದನೆ ಬೊಮ್ಮ । ' ಎಂಬುದಕ್ಕೆ ಬೆಕ್ಕಿನ ಉತ್ತರವಿಲ್ಲ. ಬೆಕ್ಕಿಗೆ ತನ್ನ ಮೀಸೆಯ ಬಗೆಗೆ ದೊಡ್ಡ

ಹೆಮ್ಮೆ. 'ಮೀಸೆಯ ಬೋಳಿಸಿಕೊಂಡರೆ ಕೆಡುವದೆ ಬೆಕ್ಕಿನ ಸಿಂಗಾರ ?' ಎಂಬ ಪ್ರಶ್ನೆ ಕವಿಯದೇ ಉದ್ಗಾರವೆನಿಸುತ್ತದೆ. 'ಬೆಕ್ಕಿನ' ಎಂಬ ಪರೋಕ್ಷ ಕಥನ ದಿಂದ ಮಗು ಕೇಳಿದರೆ 'ನಿನ್ನಯ' ಎಂದಾಗಬೇಕಿತ್ತು. ಇರಲಿ 'ಬೆಕ್ಕು' ಶಬ್ದಚಿತ್ರದ ರಚನೆ (Structure) 'ಪುನರಾಗಮನ' ಕವನಕ್ಕೆ ತುಸು ಗಂಭೀರ ('ಮಾರ್ಗೀಯ'?) ಶೀರ್ಷಿಕೆ ಅಡ್ಡಿ. ಬೆಕ್ಕನ್ನು ಕೊತ್ತಲವಲ್ಲಿ ತುಂಬಿ ಬೆಟ್ಟದ ಬುಡದಲಿ ಕತ್ತಲೆಯನು ನಂಬಿ ಬಿಟ್ಟು ಬಂದ ಬೆಕ್ಕು ತಪ್ಪದೆ ಹಿಂದಿರುಗುತ್ತದೆ. ಅವರ ಗುಟ್ಟು ಮಗು ಬೆಕ್ಕಿಗೆ ಕೇಳುತ್ತದೆ. ಮಗುವಿಗೆ ಮುದ್ದು ಬೆಕ್ಕಿನ ಮೇಲೆ ಅಪಾರ ಮರುಕ. ಅಜ್ಜಿಯ ಕಾಟ ತಪ್ಪಿಸಿಕೊಳ್ಳಲು ಸದ್ದಿಲ್ಲದೆ ಅಕ್ಕನ ಊರಿಗೆ ಜಾರಿ ಹೋಗೋಣವೇ ? ಎಂದು ಮಗು ಬೆಕ್ಕಿನೊಡನೆ ಸಂಚಿನ ಪಂಚಿಕೆ ಎತ್ತುತ್ತದೆ. ಈ ಪದ್ಯ ಮಗುವಿನ ಮನೋಭಾವದಲ್ಲಿ ನಿಜವಾಗಿಯೂ ಹೃದ್ಯವಾಗಿದೆ. ಆದರೆ ಇದರ ಆಡುಮಾತಿನ ಜಾಡಿಗೆ 'ಪುನಃ' 'ಹೋಗಿ ಬರೋಣವೆ ?' ಇಂಥ ಪದಪ್ರಯೋಗ ಕೀಸರವೆನಿಸುತ್ತದೆ. ಈ ಪದ್ಯ ಮಗುವಿನದೇ ಭಾಷಣ. ಬೆಕ್ಕು ಮೌನ. 'ಬೆಕ್ಕು' ಪದ್ಯದ ರಚನೆಯಲ್ಲಿ ಪ್ರತಿ ನುಡಿಯು ಕೊನೆಯ ಎರಡು ಸಾಲುಗಳ ಮುಗಿತಾಯ ನಾದಾನುಕರಣ (ಮೆಂವ್, ಮೆಂವ್, ಡ್ರೊಂವ್, ಡ್ರೌಂವ್, ಗುರ್ ಗುರ್, ಕುರ್ ಕುರ್ ! ಹೋ ಹೋ ಧೋ ದೊ; ಚೀ ಚೀ, ಸೀ ಸಿ; ಹಾಳ್ ಹಾಳ್, ತಾಳ್ ತಾಳ್) ದಿಂದ ರುಚಿಕಟ್ಟಾಗಿದ್ದರೆ ಈ ಕವನದ ಸೊಗಸು ಬೆಕ್ಕಿನೊಂದಿಗೆ ಮಗು ಮಾಡುವ ಸಂಚಿನ ಭಾವ ಸಂವೇದನೆಯಲ್ಲಿದೆ. ಹೀಗೆ ಅದೇ ಬೆಕ್ಕೂ ಅದೇ ಮಗು: ಆದರೆ ಆರೂ ಪದ್ಯಗಳು ತಮ್ಮ Structure, theme, toneಗಳ ವೈವಿಧ್ಯದಿಂದಾಗಿ ಒಂದೇ ಗಣ ವೃತ್ತದಲ್ಲಿಯೂ ಹೊಸ ಸ್ವಾರಸ್ಯವನ್ನು ಸಾಧಿಸಿರುತ್ತವೆ. ದಿನಕರರು ಬಹಳ ವರ್ಷ ಒಂದು ಬೆಕ್ಕು ಸಾಕಿದ್ದರು. ಅದು ಅವರ ಮೇಜಿನ ಮೇಲೆಯೇ ಉಣ್ಣುತಿತ್ತು. ಮುದ್ದಿನ ಸೊಕ್ಕಿನಿಂದ ಬೆಳೆದಿತ್ತು. ಅದರ ದೊಡ್ಡ ಭಾವಚಿತ್ರವು ಒಮ್ಮೆ 'ಜನಸೇವಕ'ದ ವಿಶೇಷಾಂಕದ ಮುಖಪುಟವನ್ನು ಅಲಂಕರಿಸಿತ್ತು. ಇವೆಲ್ಲ, ಕವನಗಳು ಅದಕ್ಕೆ ಮುಡಿಪಾಗುಬಹುದಿತ್ತು.

ಇನ್ನು ಶಿಪ್ಪಾಭಟ್ಟರ ಪದ್ಯಗಳ ರುಚಿಯೇ ಬೇರೆ. ಅಲ್ಲಿ ಒಗರು. ಚುರುಕು, ಹುಳಿ, ಅಣಕ, ಗೇಲಿ, ಗಮ್ಮತ್ತು ಎಲ್ಲ 'ಭೇಳ ಮಿಸಳ'ದಂತೆ ಹುರಿಕಟ್ಟಾಗಿ ಕಲಬೆರಕೆ ಆಗಿವೆ. ಭಟ್ಟರ ಫಜೀತಿ ಕೆಲವು ಬಿಡಿ ಪದ್ಯಗಳ ವಿಷಯ. ಹಳೆ ಹರಕು ಕೊಡೆಯಲ್ಲಿಯೇ ಭಟ್ಟರಿಗೆ ಸ್ನಾನ. ಕುಂಬಳಕಾಯಿ ಖರೀದಿ ಮಾಡಿ ತರುವಾಗ ಮನೆದಣಪೆಯಲ್ಲಿ ಅದು ಬಿದ್ದು ಒಡೆಯುತ್ತದೆ. ನೇಗಿಲು ಊಳಲು ಹೋಗಿ ಹೋರಿಗಳು ಓಡಿ ಹಿಡಿತ ಜಾರಿ ದೋತ್ರ ಬಿಚ್ಚಿ ಭಟ್ಟರು ಆಚೆ ಈಚೀನ

ಒಕ್ಕಲಿಂದ ನಗಿಸಿಕೊಂಡರು. ಅವರ ರೂಮಾಲು ಜನಿವಾರದ ವೈಚಿತ್ರ್ಯ ಇವಲ್ಲದೆ ಕೀಟಲೆ ಹುಡುಗನ ಕೀಟಲೆಗೂ ಭಟ್ಟರು ಬಲಿ ಆಗುತ್ತಾರೆ. ಅವರ ಕುರಿತ ಸುದೀರ್ಘ ಎರಡು ಕವನ ಕನ್ನಡ ಶಿಶು ಸಾಹಿತ್ಯದಲ್ಲಿಯೇ ಒಂದು ಅಖಂಡ ಕಲಾ ಮೌಲ್ಯದ ಖಂಡ ಕಾವ್ಯ. ಇಂಥ ನಗೆ ಮೋಡಿಯ ನೀಳ್ಗವನ ಅದೂ ಮಕ್ಕಳಿಗಾಗಿ ಬರೆದದ್ದು ನಮ್ಮಲ್ಲಿ ತೀರ ವಿರಳ. ಇದರ ೪೮ ನುಡಿಗಳು ೧೧ ಪರಿಚ್ಛೇದಗಳಲ್ಲಿ ೧೯೨ ಸಾಲಿನ ಚೌಪದಿಗಳಾಗಿ ಹರಿದಿವೆ. ತಿಪ್ಪಾಭಟ್ಟರ ಚರ್ಯೆ ಚರಿತೆ, ಚಟ-ಚಾಳಿಗಳು ಗುಡಿಯಲ್ಲಿ, ಹಬ್ಬದಲ್ಲಿ, ಪೇಟೆಯಲ್ಲಿ, ಬಯಲಾಟವಲ್ಲಿ, ಊಟದಲ್ಲಿ, ಲೇವಾದೇವಿಯಲ್ಲಿ, ಮನೆಮುಂದಿಯಲ್ಲಿ, ಬಾಳಿನಲ್ಲಿ, ಸಾವಿನಲ್ಲಿ ಆ ಭಟ್ಟರ ವಿವಿಧ ನಿಕಟವಾದ ವಿಕಟವಾದ ನೋಟಗಳನ್ನು ಕವಿ, ಮಕ್ಕಳ ಕುತೂಹಲ ಉದ್ದಕ್ಕೂ ಸೆರೆಹಿಡಿಯುವಂತೆ ನಿರೂಪಿಸಿದ್ದಾರೆ. ಅಲ್ಲಲ್ಲಿ ಮಿಂಚುವ ಅವರ ಟೀಕೆಯ ತಿವಿತಗಳು ತುಂಬ ಮಾರ್ಮಿಕವಾಗಿವೆ.

ಆದರೆ ಇಲ್ಲಿ ಹರಿದಾಡುವ ಹಾಸ್ಯ ತಿಳಿಯಾದರೂ ತುಸು ಕಟುವೇ ಆಗಿದೆ.– ಪರಿಹಾಸ, ಉಪಹಾಸ ಅಪಹಾಸ್ಯಗಳ ಎಲ್ಲ ಛಾಯೆಗಳನ್ನು ಅದು ಪಡೆದಿದೆ. ಈ ಪರಿಣಾಮ (Effect) ಸಾಧಿಸಲಿಕ್ಕೆ ಕವಿ ತಿಪ್ಪಾಭಟ್ಟರನ್ನು ಏನೆಲ್ಲ ಸನ್ನಿವೇಶಗಳಿಗೆ ಒಡ್ಡಿ ತೋರಿಸಿದ್ದಾರೆ. ಅವರ ಹೊಲಸು, ಜಿಪುಣತೆ, ಹೊಟ್ಟೆಬಾಕತನ, ಡಂಬಾಚಾರ, ಗೊಡ್ಡು ಬ್ರಾಹ್ಮಣಿಕೆಗಳ ಜೊತೆಗೆ ಅವರಿಗೆ ಅಂಟಿದ ಸೂಳೆಗಾರಿಕೆ, ಮೀನ ತಿನ್ನುವ ಚಟ, ಅಡ್ಡವೇಷ ಕಟ್ಟುವ ಚಾಪಲ್ಯ-ಹೀಗೆ ಅನೇಕ ವಿಸಂಗತವಲ್ಲದಿದ್ದರೂ ಅಸಂಗತ ಚಿತ್ರಗಳಲ್ಲಿ ತಿಪ್ಪಾಭಟ್ಟರು ಒಂದೇಸಮನೆ ಕಾಣಿಸಿಕೊಳ್ಳುತ್ತಾರೆ. ಇಲ್ಲಿಯ ಹಾಸ್ಯ Sardonic ಜಾತಿಯದು. ಕಟುವಾದ ಕುಚೇಷ್ಟೆ, ಆದರೆ ಅದು ಹರಿತವಿದ್ದರೂ ಅವರಲ್ಲಿ ಕಹಿ ಹುಳಿ ಉರಿ ಏನೂ ಇಲ್ಲ. ಕೆಲವು Sampling ನೋಡಿರಿ–

‘ತಿಪ್ಪಾ ಭಟ್ಟರ ಡೊಳ್ಳು । ನೋಡಲು ಮಕ್ಕಳು ಮಳ್ಳು ।
ಕುಂಬಳಕಾಯಿಯಹಾಗೆ । ಉರುಟುರುಟಾಗಿದೆ ಹೀಗೆ’

ಇಲ್ಲಿ ಕೊನೆಯ ಪಾದ ಸಾಭಿನಯವಾಗಿಯೇ ಆಡಿತೋರಿಸಬೇಕು. ಕುಂಬಳಕಾಯಿಯಂಥ ಡೊಳ್ಳು ಅಂದಾಕ್ಷಣ ಮಕ್ಕಳಿಗೆ ಈ ಹಸ್ತಾಭಿನಯ ತಾನಾಗಿಯೇ ತೋಚುವಂತಿದೆ.

‘ತಿಪ್ಪಾ ಭಟ್ಟರ ಜುಟ್ಟು । ತಲೆಯಲಿ ಎಲ್ಲಿಗು ಮುಟ್ಟು
ಮೂರೇ ಕೂದಲು ಕೂಡಿ । ಗಾಳಿಗೆ ಕುಣಿವುದು ನೋಡಿ’

‘ ಭಟ್ಟರ ಕಾಲಿನಜೋಡು । ಒಳಗಡೆ ಪೂರಾ ಓಡು ।
‘ ಭಟ್ಟರ ದುಡ್ಡಿಗೆ ತಕ್ಕ । ಅಂದನು ಚಮಗಾರ್ ಪೊಕ್ಕ ’

ಇಂಥ ಅಡ್ಡ ಟಿಪ್ಪಣೆ ಮರ್ಮಭೇದಿಯಾಗಿ ಬರುತ್ತವೆ.

‘ ಭಟ್ಟರು ಮಾಡಲು ಮಾಟ । ತಪ್ಪಿತು ದೆವ್ವದ ಕಾಟ ।
ಪರಿಜನ ಸೋಮಿಗೆ ಜಡ್ಡು । ಭಟ್ಟರಿಗಾಯಿತು ದುಡ್ಡು ’
‘ ಗುಡಿಯಲಿ ದೇವರ ತೀರ್ಥ । ಭಟ್ಟರಿಗದು ಚರಿತಾರ್ಥ
(‘ ತೀರ್ಥದ ನೀರನು ಚೆಲ್ಲಿ । ಹೂವಿನ ಪಕಳೆಗೆ ಬಿಲ್ಲಿ ।’)
ಹೊಂಡದ ನೀರೂ ಸುದ್ದಾ । ಭಟ್ಟರ ಕೈಯಲಿ ಶುದ್ಧ ।’

‘ ಭಟ್ಟರ ಕೈಯಲಿ ತಟ್ಟೆ । ಅದರಲಿ ಕೋಳಿಯ ಮೊಟ್ಟೆ
ಸಾಲೆಯ ಮಕ್ಕಳು ನೋಡಿ । ನಲಿದರು ಚೇಷ್ಟೆಯ ಮಾಡಿ ’

‘ ಭಟ್ಟರು ತಿಂದರು ಮೀನು । ನಮ್ಮೆಲ್ಲರ ಗತಿ ಏನು ?
ಭಟ್ಟರಿಗೇತಕೆ ಮೀನು ? । ಪರಗೀ ದಡಿ ಇಲ್ಲೇನು ?’

‘ ಭಟ್ಟರು ಕಂಡರು ಸುಗ್ಗಿ । ಮನದಲಿ ಬಹಳೇ ಹಿಗ್ಗಿ ।
ಕೊಟ್ಟರು ಒಂದೇ ಬಿಲ್ಲಿ । ಕರಡೀಗೂ ಅದರಲ್ಲಿ । ’

ಅಂದರೆ ಕರಡಿಯ ವೇಷ ಬೇರೆ ಸುಗ್ಗಿಯ ಜತೆಗೆ. ಆದರೆ ಭಟ್ಟರ ಬಿಲ್ಲಿಯಲ್ಲಿ ಎರಡೂ ಸಮಾವೇಶ !

‘ ಬೇಸಿಗೆ ಬಿಸಿಲಿನ ತಾಪ । ಭಟ್ಟರಿಗಾಗದು ಪಾಪ ।
ನೋಡಲು ಹೋದರು ಕುತ್ರಿ । ತಿಂಗಳ ಬೆಳಕಿಗು ಛತ್ರಿ । ’

‘ ತಿಪ್ಪು ಭಟ್ಟರ ಬೆಕ್ಕು ಮೈಯಲಿ ಬಹಳೇ ಸೊಕ್ಕು
ನೆರೆಮನೆ ಮಕ್ಕಳ ಹಾಲು । ಭಟ್ಟರ ಬೆಕ್ಕಿನ ಪಾಲು ।’
ಹೇಗಿದೇ ಈ ವ್ಯಂಗ್ಯ ? ಇದಕ್ಕೂ ಖಾರ ಇಲ್ಲಿದೆ.

‘ ತಿಪ್ಪುಭಟ್ಟರ ಮಾಣೆ । ಕೆಲಸಕ್ಕೆ ಬಾರದ ಪ್ರಾಣಿ
ಇಲ್ಲದ ವ್ಯಸನಕೆ ಬಿದ್ದ । ಸೂಳೆಯ ದಾಗಿನ ಕದ್ದ ’

ಈ ಕೆಲಸಕ್ಕೆ ಬಾರದ ಭಟ್ಟರ ಮಾಣಿ ಸೂಳೆಗಾರಿಕೆಯಿಂದ ತಾನೇ ಲಾಭಪಡೆದ ! ಸೂಳೆಯು ಒಡವೆಯನ್ನೆ ಕದೀಮ ಕದ್ದನಂತೆ !

ಪಾಪ ಈ ವಯೋಗುಣ ವಿಶೇಷಣ ವಿಶಿಷ್ಟ. ತಿಪ್ಪಾಭಟ್ಟರಿಗೆ ಎಪ್ಪತ್ತಾಯಿತು. ಆದರೆ ಶರಣನನ್ನು ಮರಣದಲ್ಲಿ ನೋಡಬೇಕು. ಭಟ್ಟರದು ವೀರ ಮರಣ.

‘ ಭಟ್ಟರು ಹಿಡಿದರು ಬೆತ್ತ । ಬಡಿದರು ಬಲ್ಲೆಯ ಹುತ್ತ
ಹುತ್ತಿನ ಒಳಗಡೆ ಹಾವು । ಭಟ್ಟರಿಗಾಯಿತು ಸಾವು ’

ಭಟ್ಟರು ಸತ್ತರೆಂದು ಊರಮಕ್ಕಳಿಗೆಲ್ಲ ನೋವು. ಆದರೆ ಸತ್ತರೂ ಅವರು ಅಮರರು. ಹೇಗೆ ಗೊತ್ತೆ ? ಇಲ್ಲಿದೆ ಕವಿಯ Master Stroke

‘ ಊರಿನ ಬಂಡೀ ಹಬ್ಬ । ಆಡು ಕಟ್ಟಿಯ ಸುಬ್ಬ ।
ಭಟ್ಟರ ಹಗರಣ ಮಾಡಿ । ತೋರಿಸಿದನು ಉಂಡಾಡಿ ’

ಇದೇ ಬಗೆಯ ವ್ಯಂಗ್ಯ ವಿನೋದ ‘ ಅಡಿಗೆಭಟ್ಟ ’ನ ಚಿತ್ರಣದಲ್ಲಿದೆ. ಪ್ರಾಥಮಿಕ ಶಾಲೆಯ ಕೆಳವರ್ಗದ ಮಕ್ಕಳು ಈ ಪದ್ಯವನ್ನು ಸಾಭಿನಯವಾಗಿ ಪ್ರದರ್ಶಿಸಿದ್ದನ್ನು ನಾನು ನೋಡಿದ್ದೇನೆ. ಓದಿದಾಗಿನಗಿಂತ ನೋಡಿ ಕೇಳಿದಾಗ ಅದರ ಕಾವ್ಯಗುಣ ಹೆಚ್ಚಿನ ಪ್ರಭಾವ ಬೀರಿತು. ದಿನಕರರ ಇಂಥ ಶಿಶುಗೀತಗಳ ಸ್ವಾರಸ್ಯವೇ ಇದು. ಈ ಕವನದ ಆರಂಭ ಹೀಗೆ.

‘ ಅಡಿಗೆಯ ಭಟ್ಟ । ನಾಲಿಗೆ ಕೆಟ್ಟ ।
ಬಿಡಿಸುವ ಮೊದಲೆ । ಬಾಯೊಳಗಿಟ್ಟ । ’

ಇದರ ಕೊನೆಯ ನುಡಿ

‘ ಅಡಿಗೆಯ ಭಟ್ಟ । ಜಗದಲಿ ಶ್ರೇಷ್ಠ
ಭಟ್ಟನ ಬೈದರೆ । ಕೂಳಿಗೆ ಕಷ್ಟ ’ ।

‘ ಕೀಟಲೆ ಹುಡುಗ ಗೋಪಾಲ । ಹಳ್ಳಿಗೆ ಅವನೆ ಭೂಪಾಲ । ’

ಆತನ ಕೀಟಲೆಯ ವರ್ಣನೆ ಹೊಳೆಗೆ ಮೀಯಲು ಇಳಿದ ತಿಪ್ಪಾಭಟ್ಟರನ್ನೆ ಕಾಡಿದ್ದು.–ಅವರು ಉಡಲು ತಂದ ಪಂಜೆಯನ್ನೆ ಅಡಗಿಸಿಟ್ಟಿದ್ದು. ಆದರೆ ಈ ಕವನ ಉತ್ತರಾರ್ಧದಲ್ಲಿ ಗೋಪಾಲನನ್ನು ಮರೆತು ತಿಪ್ಪಾಭಟ್ಟರ ಪೇಚಾಟವನ್ನೆ

ಬಣ್ಣಿಸುತ್ತ ಮುಗಿದಿದೆ. ' ನಮ್ಮೂರ ಪೆದ್ದ 'ನು ಕೀಟಲೆಪಡುಗನ ಅಪರಾವತಾರ. ಆದರೆ ಹೇಳಿ ಕೇಳಿ ಪೆದ್ದ. ಎಷ್ಟೋ ಸರ್ತಿ ಮಿಠಾಯಿ ಕದ್ದ ಹಣ ಕದ್ದ: ಒಮ್ಮೆ ಉಂಡೆಯು ಕದ್ದ (ಓಡುವಾಗ) ತಿನ್ನುವ ಮೊದಲೇ ಗುಂಡಿಗೆ ಬಿದ್ದ । ಈ ಪದ್ಯವು ಒಂದರ್ಥದಲ್ಲಿ action song ಆಗಬಹುದು. ' ಸೋಮಾರಿಮಲ್ಲ ' ಪೆದ್ದ ಗಿಂತಲೂ ಹೆಚ್ಚು ಯಶಸ್ವಿ ಪದ್ಯ. ಇದು ಪ್ರಶ್ನೋತ್ತರ ರೂಪದಲ್ಲಿ ಇದ್ದುದರಿಂದ ಇದರ ನಾಟಕೀಯ ಸ್ವಾರಸ್ಯ ಹೆಚ್ಚು. ಇದೇ ಭಾವವನ್ನು ವ್ಯಕ್ತಮಾಡುವ ಬೇರೊಂದು ಹಳ್ಳಿಯ ಹಾಡನ್ನು ನಾನು ಎಂದೋ ಕೇಳಿದ್ದುಂಟು. ಸೋಮಾರಿ ಮಲ್ಲಾ ಯಾವ ಕೆಲಸಕ್ಕೂ ಬಾರಾ. ಪ್ರತಿಯೊಂದು ಕೆಲಸಕ್ಕೂ ಒಂದು ನೆಪ ಹೇಳಿ ಕಳ್ಳಬೀಳುತ್ತಾನೆ. ಆದರೆ ' ಊಟಕೆ ಬಾರೋ ಮಲ್ಲಾ ' ಅಂದಾಕ್ಷಣ, ' ಹಾಜರು ಇದ್ದೇನಲ್ಲಾ ' ಎಂದು ಸಿದ್ಧ.

' ನಮ್ಮ ಹಳ್ಳಿಯಲ್ಲಿ ' ಒಂದು ವೈಶಿಷ್ಟ್ಯ ಪೂರ್ಣ ಕವನ. ತನ್ನ ಮನೆ, ತನ್ನ ಊರು ತನಗೆ ಚೆಂದ, ತನಗೆ ಮೆಚ್ಚು. There is no place like home. ಆದರೆ ಈ ಭಾವವನ್ನು ಹುಚ್ಚು ಆವೇಶದಿಂದ ಕುರುಡು ಅಚ್ಚೆಯಿಂದ ಇಲ್ಲಿ ಮೂಡಿಸಿಲ್ಲ. ಈ ಊರ ಪ್ರೇಮಿಗೆ ತನ್ನ ಊರಿನ ಲೋಪ-ದೋಷಗಳೆಲ್ಲ ಗೊತ್ತು. ಆದರೂ ಅವನಿಗೆ ಆ ಹಳ್ಳಿ ಸುಂದರ, ಶ್ರೇಷ್ಠ. ಒಂದೆರಡು ನುಡಿ ಕೇಳಿರಿ :

' ಎಲ್ಲಾ ಕಡೆಯಲಿ ಬೆಳೆದರು ಕಳ್ಳಿ
ಧರೆಯಲಿ ನಮದೇ । ಸುಂದರ ಹಳ್ಳಿ '
' ತುಸು ಮಳೆ ಬಂದರು ಕೆಸರೇ ಕೆಸರು
ಆದರು ಹಳ್ಳಿಗೆ ಒಳ್ಳೇ ಹೆಸರು.
ಮಾವಿನ ಮರಗಳು ಊರೊಳಗೆಲ್ಲಾ
ಒಂದೂ ಹಣ್ಣಿಗೆ ಸವಿರಸವಿಲ್ಲಾ.
ಕೆರೆಯೊಳಗಂತು ತಾವರೆ ಕಾಣ
ತಪ್ಪದೇ ಕಾಂಬುದು ಮಲಗಿದ ಕೋಣ '

ಆದರೂ ನಮದೇ ಹಳ್ಳಿಯು ಶ್ರೇಷ್ಠ ಏಕೆ ?

' ನಮ್ಮೀ ಹಳ್ಳಿಗೆ ನಾವೇ ಯೋಗ್ಯ
ಈತರದೂರೇ ನಮ್ಮದು ಭಾಗ್ಯ '

ನಾಡ ಒಲುಮೆಯ ಒಂದು ನೈಜವಾದ ನಮೋನ್ಮೇಷವಿದು.

ದಿನಕರರ ಮಕ್ಕಳ ಪದ್ಯಗಳ ಇನ್ನೊಂದು ಮಾದರಿ ಕಥನ ಕವನಗಳು-ಪದ್ಯ ರೂಪದಲ್ಲಿ ಹೇಳಿದ ಕತೆಗಳು. ಅಂಥ ನಾಲ್ಕನ್ನು ಇಲ್ಲಿ ಗಮನಿಸೋಣ.

'ಮಂಗನ ಮದುವೆ' ಇದೊಂದು ಪ್ರಸಂಗ ಕಥನ. 'ಬಿಸಿಲಲಿ ಮಳೆ; ಮಂಗನ ಮದುವೆ' ಎಂಬುದೊಂದು ಜಾನಪದ ನಾಣ್ಣುಡಿ. ಅದನ್ನು ಕವಿ ಇಲ್ಲಿ 'ಮರ್ಕಟ ಕುಕ್ಕುಟ' ಲಗ್ನವಾಗಿ ಬಣ್ಣಿಸಿದ್ದಾರೆ.

'ಬಿಸಿಲಲಿ ಮಳೆಹನಿ ಮಂಗನ ಲಗ್ನ
ಮದುವೆಯು ನೋಡಲು ಮಕ್ಕಳು ಮಗ್ನ'

ಈ ಮದುವೆಯು ಪೌರೋಹಿತ್ಯವೂ ನಮ್ಮ ತಿಪ್ಪಾಭಟ್ಟರದೇ : ಕಾಮನಬಿಲ್ಲಿನ ಮಂಟಪ. ಕರಿಪುಕ್ಕದ ಹೇಂಟೆಯೇ ಮದುವಳತಿ.

'ದಿಬ್ಬಣ ಹೊರಡಲು ಕುಣಿಯುಲಿಕೆಂದು
ಬೆಟ್ಟದ ನವಿಲುಗಳೆಲ್ಲಾ ಬಂದು' ಥಕ ಥೈ ಕುಣಿದವು.

ಮಂಗನ ಮನದಲಿ ಮುಂದಿನ ಗಣಿತ (ನವಿಲ ಕುಣಿತಕ್ಕೆ ಅವನ ಲಕ್ಷ್ಯವಿದ್ದಿಲ್ಲಾ !)

'ಹೊಸ ಸಂಸಾರವ ಹೂಡುವ ಕನಸು' ಅಂದರೆ
'ಬೇಗನೆ ಅಪ್ಪನು ಆಗುವ ಮನಸು'

ಅಂತೂ ನಿರ್ವಿಘ್ನವಾಗಿ ಈ ಕೋತಿ ಹೇಂಟೆಗಳ ಮದುವೆ ಮುಗಿಯಿತು. ಕೋತಿಯು ಕೊರಳಿಗೆ ಹಾರ ಹಾಕಿದ ಹೇಂಟೆಗೆ ಬಡಿವಾರ ! ಆದರೆ ಅಷ್ಟರಲ್ಲಿ ಗುಡುಗು ಮಿಂಚು ಮಳೆಯ ಆರ್ಭಟ ಸುರು. ಮಂಟಪ ತುಂಬ ನೀರು. ಚಪ್ಪರದ ಮಡಲು ಹಾರಿ ಹೋದವು. ಜತೆಗೆ 'ಮಂಗನು ಹಾರಿದ ಟೊಂಗೆಯು ತುದಿಗೆ। ಹೇಂಟೆಯೂ ಹಾರಿತು ಗೂಡಿನ ಒಳಗೆ' ಕವಿಗೆ ಇಲ್ಲಿ ತಾತ್ಪರ್ಯ ಹೇಳುವ ಚಾಪಲ್ಯ.

'ಒಬ್ಬರಿಗೊಬ್ಬರೂ ದರುಶನವಿಲ್ಲ'

'ಇಲಿ ಸಮ್ಮೇಳನ' ಇದು ಇಸೋಪನ ಒಂದು ನೀತಿ ಕಥೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವ ಠರಾವು ಪಾಸು ಮಾಡಿದ ಇಲಿಗಳ ಕೂಟದ ಕತೆ.

ಕವಿಯು ಕತೆಯನ್ನು ನೇರವಾಗಿ ಜೋರಾಗಿ ಹೇಳಿದ್ದಾರೆ. ಇಲಿಗಳ ತಂಡವು ಒಂದೆಡೆ ಸೇರಲು ಅದರ ಮುಖಂಡ ಆವೇಶದಿಂದ ಭಾಷಣ ಬಿಗಿಯುತ್ತಾನೆ.

ಬೆಕ್ಕಿನ ಬಳಗದ ಸೊಕ್ಕಿನ ಆಟವನ್ನು ಮೂಷಕ ಕುಲಕ್ಕೆ ಆಗುವ ಕಾಟವನ್ನು ತಪ್ಪಿಸಲು ಒಂದು ಯುಕ್ತಿಯನ್ನು ಸೂಚಿಸಲು ಕೇಳಿಕೊಳ್ಳುತ್ತಾನೆ. ಈಗ ಸಭೆಯಲ್ಲಿ ಒಂದಿಲಿ ಎದ್ದು ದೇವರ ಮುಂದಿನ ಗಂಟೆಯ ಕುಂಟೆ ಬೆಕ್ಕಿನ ಕೊರಳಿಗೆ ಕಟ್ಟುವ ಸೂಚನೆ ಮುಂದಿಡುತ್ತಾನೆ.

‘ ಗಂಟೆಯ ಕಟ್ಟಲು ಬೆಕ್ಕಿನ ಪಾಡು
ಕುನ್ನಿಗಿಂತ ಕನಿಷ್ಠವು ನೋಡು:
ಗಂಟೆಯ ಸಪ್ಪಳ ಕೇಳಿದ ಕ್ಷಣಕೆ
ಬಿಲದೊಳು ಸೇರಲು ನಮಗೆಚ್ಚರಿಕೆ ’

ಸರಿ ‘ ಗಂಟೆಯ ಸೂಚನೆ ಮಂಜೂರಾಯ್ತು । ಗಂಟೆಯ ದೊರಕಿಸಿ ತಂದದ್ದಾಯ್ತು ’ ಆದರೆ ಬೆಕ್ಕಿನಕೊರಳಲಿ ಕಟ್ಟುವರಾರು ? ‘ ಪ್ರಶ್ನೆಗೆ ಉತ್ತರ ಸಿಗಲಿಲ್ಲ । ಸಭೆಯಲಿ ಸಪ್ಪಳವೇ ಇಲ್ಲ ’. ಕವಿಯ ಮುಗಿತಾಯ ಹೀಗೆ

‘ ಇಲಿಯ ಮುಖಂಡನಿಗೂ ಸುಸ್ತು
ಇಲಿ ಸಮ್ಮೇಳನ ಬರಖಾಸ್ತು ’.

ಆಡು ಮಾತಿನ ಧಾಟಿಯಲ್ಲಿ ಈ ಕಥನ ರಭಸದಿಂದ ಸಾಗಿದಷ್ಟೇ ನಾಟ್ಯಮಯವಾಗಿ ಡಿಕ್ಕಿಹೊಡೆದಂತೆ ಮುಗಿಯುತ್ತದೆ. (ಈ ರಭಸದಲ್ಲಿ ಒಂದಿಲಿಯ ಸೂಚನೆಯ ಕೊನೆಗೆ ಆತ ಮಾತು ಮುಗಿಸಿದ ಸೂಚನೆ ಕ್ರಿಯಾಪದವೇ ತಪ್ಪಿಹೋಗಿದೆ।) ‘ಚೀ ಪೀ ಎನ್ನುತ ಇಲಿಗಳ ತಂಡ, ‘ ಗಣಗಣ ಗಂಟೆ ಝಣಝಣ ವೆನ್ನಲು ’ ‘ ಜಯ ಜಯವೆನ್ನಿ ’ ಇಂಥ ಶಬ್ದ ಸರಣಿ ಮಕ್ಕಳ ಕಿವಿಗೆ ಮೆಚ್ಚಿಗೆ ಆಗುವಂತಿದೆ. ಇಲಿಯ ಮಾತಿನಲ್ಲಿ ಆವೇಶ ಹೆಚ್ಚಿಸಲು ಅದರ ಕೊನೆಯ ನುಡಿಯ ಪ್ರತಿಪಾದಕ್ಕೆ ಗಣಸಂಖ್ಯೆ (ನಾಲ್ಕುಮಾತ್ರೆಯ ಒಂದು ಗಣ) ೪ ರಿಂದ ೨ಕ್ಕೆ ಇಳಿಸಲಾಗಿದೆ. ಮುಖಂಡರ ಮಾತು ಎಷ್ಟು ಉದ್ದವೋ ಆ ಅಬ್ಬರ ಭಾಷಣದ ನಂತರ ಸಭೆ ಸದ್ದಿಲ್ಲದೆ ಬರಖಾಸ್ತು.

ಇದಕ್ಕೂ ಸುದೀರ್ಘ ಕಥೆ ‘ ರೈತ ಮತ್ತು ಕರಡಿ ’ ತಿಪ್ಪಾಭಟ್ಟರ ಚರಿತ್ರೆಯ ನಂತರ ಇದುವೆ ಒಂದು ನೀಳ್ಗತೆ. ಕತೆಯ ವಸ್ತು ಚಿಕ್ಕದು. ಮಲೆನಾಡ ಸೆರಗಿನಲ್ಲಿ ಮೂಲಂಗಿ ಬೆಳೆಯುವ ರೈತ ಮೋಟಂಗಿ (ಈ ಹೆಸರು ಪ್ರಾಸಕ್ಕಾಗಿಯೇ ಹುಟ್ಟಿದ್ದು ?) ಈ ರೈತನ ಬೆಳಗೆ ಹುಚ್ಚಾಗಿ ಬೆಟ್ಟದ ಕರಡಿ ಅವನನ್ನು ಕಾಡುತ್ತದೆ. ದೊಡ್ಡ ಕರಡಿಯೊಂದಿಗೆ ರೈತ ಒಪ್ಪಂದ ಮಾಡಿ

ಕೊಳ್ಳುತ್ತಾನೆ. ಎರಡು ಸಲ. ಎರಡೂ ಸಲ ಕರಡಿಯೇ ಬೇಸ್ತು ಬೀಳುತ್ತದೆ. ರೈತನಿಗೇ ಲಾಭ. ಮೊದಲ ಸಲ ಹೊಲದಲ್ಲಿ ಮೇಲೆ ಬೆಳೆದದ್ದೆಲ್ಲ ಕರಡಿಗೆ, ಕೆಳಗೆ ನೆಲದಲ್ಲಿ ಬೆಳೆದದ್ದೆಲ್ಲ ರೈತನಿಗೆ. ಅಂದಾಗ ಕರಡಿಯ ಬಾಯಿಗೆ ಸೊಪ್ಪುದೇಟು, ಮೋಟಂಗಿಯ ಮನೆಗೆ ಮೂಲಂಗಿ ಗಡ್ಡೆಗಳ ರಾಶಿ. ಈ ಅನುಭವದಿಂದ ಬುದ್ಧಿ ಕಲಿತ (!) ಕರಡಿ ಎರಡನೆಯ ಸಲ ಕೆಳಗಿನ ಬೆಳೆ ತನಗೆ, ತುದಿಯ ಬೆಳೆ ರೈತನಿಗೆ ಎಂದು ಕರಾರು ಹಾಕುತ್ತದೆ. ರೈತ ಒಪ್ಪಿ ರಾಗಿಯನ್ನು ಈ ಸಲ ಬಿತ್ತಿ ರಾಗಿಯ ಕದರ ಕಣಜ ಕಟ್ಟುತ್ತಾನೆ. ಕೆಳಗಿನ ದೇಟು ಹುಲ್ಲೂ ಕರಡಿಯ ಪಾಲಿಗೆ ಹೋಗುತ್ತದೆ. ಮೊದ್ದು ಕರಡಿ ಹೀಗೆ ಮೋಸ ಹೋದರೂ ರೈತನನ್ನು ಬಯ್ಯುವದಿಲ್ಲ. ' ಅಯ್ಯೋ ಈ ಬುಡ ಬರಿ ಸಪ್ಪೆ । ಹಾಳಾಗಲಿ ರೈತನ ತಿಪ್ಪೆ ॥ ಆತನ ಗೊಬ್ಬರವೇ ಹಾಳು ! ಹಾಳಾಯಿತೆ ರಾಗಿಯ ಕಾಳು । ' ಎಂದು ಕರಡಿಯ ಕೋಪ ಬರಿ ಬರಿ ಶಾಪ !

ಈ ಕಥನ ಕವನ ಸರಾಗವಾಗಿ ಸಾಗುತ್ತದೆ. ಇಲ್ಲಿ ಕಥೆಯ ಸ್ವಾರಸ್ಯ ಮಕ್ಕಳನ್ನು ಮುಂದೊಯ್ಯುತ್ತದೆ. ಅವರಿಗೆ ಪ್ರಾಸ-ಪ್ರಸ್ತಾರಗಳ ಆಕರ್ಷಣೆ ಕಡಿಮೆ ಅವರೂ ಪರಿವೆ ಇಲ್ಲ. ಈ ಕಥನಕವನ ೪ ಪರಿಚ್ಛೇದಗಳಾಗಿ ೨೦ ನುಡಿಗಳಲ್ಲಿ ಸುದೀರ್ಘ ವಾಗಿ ಬೆಳೆದುನಿಂತಿದೆ. ಈ ನುಡಿಗಳು ಹೆಚ್ಚಾಗಿ ಚೌಪದಿಗಳು. ಆದರೆ ಎರಡು ದ್ವಿಪದಿಗಳು ಒಂದು ಷಟ್ಪದಿ (?)ಯೂ ಒಳಗೊಂಡಿದೆ. ಕೊನೆಯ ನುಡಿಯ ಶಿನೆಯ ಹಾಗೂ ಕೊನೆಯ ನುಡಿಯಲ್ಲಿ ೪ ಮಾತ್ರೆಗಳ ಎರಡೆರಡೇ ಗಣಗಳ ಎರಡು ಪಾದಗಳಿವೆ. ಮಾತಿನ ದನಿಪಲ್ಲಟಣೆಗಾಗಿ ಇರಬೇಕು.

' ಗೇಣಿಯ ತಿಂದರೆ ನೋಡಯ್ಯ
ನಿನ್ನನು ನಾ ತಿಂದೇ ಬಿಡುವೆ.

ನಾನೇ ಒಡೆಯ
ಸುಳ್ಳಿದು ನಡೆಯ

ಇಬ್ಬರಿಗೂ ಸರಿಸಮ ಭಾಗ
ಕಡಿಮೆಯ ಕೊಟ್ಟರೆ ಅದು ಆಗ '

ಕರಡಿಯ ಈ ಗೇಣಿ ಕರಾರಿನ ಮಾತಿಗೆ ಆ ಧೂರ್ತ ರೈತ ಅದರ ಚೌಕಟ್ಟಿನಲ್ಲಿಯೇ ಈ ಒಡೆಯಗೆ ಪೂರ್ತಿ ಮೋಸ ಮಾಡುತ್ತಾನೆ. ಒಡೆಯರ ಮೋಸಗಾರಿಕೆಯ ವಿರುದ್ಧ ರೈತರ ಚಳವಳಿಯನ್ನು ಯಶಸ್ವಿಯಾಗಿ ಸಂಘಟಿಸಿದ ದೇಸಾಯರ ಈ

ಕವನ ಒಡೆಯ-ಒಕ್ಕಲ ಸಂಬಂಧಕ್ಕೆ ಪ್ರತೀಕವಿರಲಾರದು. ಇದು ಶುದ್ಧ ಮಕ್ಕಳ ಮನೋರಂಜನೆಯ ಕಥೆ. (ಶ್ರೀರಾಮನು ಮರಳಿ ಬರುವತನಕ ಅವನ ಪ್ರತಿನಿಧಿಯಾಗಿ ಆಡಳಿತ ನಡೆಯಿಸಿದ ಭರತನಿಗೂ ಅಂದು ಅಯೋಧ್ಯೆಯ ರೈತರು ಹೀಗೆಯೇ ಬೋಳೈಸಿದರೆಂದು ಒಂದು ಜಾನಪದ ಕತೆಯಿದೆ !

ಈ ನಡುವೆ ಕವಿ ಒಂದು ದ್ವಾಪರಯುಗದ್ದೆಂಬ ಪುರಾಣ ಕಥೆಯನ್ನು ಹಾಡಿದ್ದಾರೆ. ಅದು ' ಚಂದ್ರನ ಕೂಸು. ' ಚಂದ್ರಶಶಿ-ಶಶಾಂಕ ಹೇಗಾದ ? ಒಮ್ಮೆ ಆ ಯುಗದಲ್ಲಿ ಒಂದು ಬೆಳದಿಂಗಳರಾತ್ರಿ ಅಡವಿಯಲ್ಲಿ ಮೊಲಗಳು ಮೇಯುತ್ತಿದ್ದಾಗ ಬೇಡರು ಅವುಗಳ ಬೇಟೆಗೆ ನುಗ್ಗಿ ಬಂದರು. ಆಗ ಒಂದು ಮೊಲ ಹೆದರಿ ಹೌಹಾರಿ ಮುಗಿಲಿಗೆ ಹಾರಿ ಚಂದ್ರನಲ್ಲಿಯೇ ಅವಿತುಕೊಂಡಿತು. ಅಲ್ಲಿ ನಿರ್ಭಯವಾಗಿ ಕೂತ ಆ ಮೊಲಕ್ಕೆ ಹಾಗೆ ಆಸರೆ ನೀಡಿ ' ಚಂದ್ರನಿಗಾನಂದವು ಹಿರಿದು ' ' ಆ ಮೊಲವೆ ಶಾಶ್ವತವಾಗಿ। ಮೆರೆವುದು ಚಂದ್ರನ ಕೂಸಾಗಿ '. ರಸಿಕರ ಪುಣ್ಯ, ಕವಿಯು ನೀತಿಪಾಠ ಹೇಳುವ ಮೋಹ ಈ ಚೆಂದ ಕವನದ ಕೊನೆಗೆ ಕಾಣಿಸಿಕೊಂಡಿಲ್ಲ.

' ದೇವರ ಎತ್ತು ' ಈ ವರ್ಣನೆಯ ಕವನದ ಕೊನೆಗೆ ಆ ಎತ್ತು ಯಾಕೆ ಬಂತು-ಎಂದು ಕವಿ ಹೇಳಿದ್ದಾರೆ.

' ಈಶ ಭಕ್ತಿಯ ಲೋಕಕೆ ಸಾರಿ
ನಮ್ರ ವರ್ತನೆಯ ರೀತಿಯ ತೋರಿ
ನಮನ ಹಾಕುವದು ಮಂಡಿಯನೂರಿ '

' ಬಿಸಿ ಬಿಸಿ ಕಾಫಿ ' ' ಕುಂಬಾರನ ತಿಗರಿ ' ' ಹೊ ಲಿ ಗೆ ಯ ಯ ಂ ತ್ರ ' ' ಮೈಸೂರಿನ ತಿಂಡಿಗಳು ' ಮುಂತಾದ ವರ್ಣನಾಪದ್ಯಗಳ ಆಕರ್ಷಣೆ ಅವುಗಳ ಶಬ್ದ ಚಿತ್ರಣ ಶಕ್ತಿ ಹಿತಮಿತವಾದ ಅಲಂಕಾರಿಕತೆಯಿಂದ ಇಲ್ಲಿಯ ಸ್ವಭಾವೋಕ್ತಿ ಮನದಟ್ಟಾಗುವಂತಿದೆ. ' ಕುಂಬಾರನ ತಿಗರಿ ' ಮತ್ತು ' ಹೊಲಿಗೆಯ ಯಂತ್ರ ' ಇವಕ್ಕೆ ಸಾಕ್ಷಿ. ಮಕ್ಕಳ ಬೆರಗುಗಣ್ಣಿಗೆ ತಿಗರಿಗು ಬುಗರಿಗು ಸಂಬಂಧ ತೋಚುತ್ತದೆ. ಅವಕ್ಕೂ ಮುಂದೆ ' ಮಣ್ಣಿನ ಮುದ್ದೆಗೆ ಆನಂದ। ಗರಗರ ತಿರುಗುವದೇ ಚೆಂದ ' ಅನಿಸುತ್ತದೆ. ಅಂದಾಗ ' ನಾವೂ ತಿಗರಿಯನೇರುವದು। ಮುದ್ದೆಯ ಪರಿಯಲಿ ತಿರುಗುವದು। ನಾವೂ ಗಡಿಗೆಗಳಾದಲ್ಲಿ। ಸೋಜಿಗವಲ್ಲವೆ ಜಗದಲ್ಲಿ '? ಹೇಗಿದೆ ಈ ಬಾಲಭಾವದ ಉತ್ಪ್ರೇಕ್ಷೆ ?

'ಹೊಲಿಗೆಯ ಯಂತ್ರ' ಮಕ್ಕಳ ಪಾತಳಿಯಿಂದ ಹಾಡಿದ ಯಂತ್ರಯುಗದ ಹಾಗೂ ವಿದ್ಯೆಯ (Technology) ಮಹಿಮೆ ಈ ಯಂತ್ರ 'ಹಳ್ಳಿಯ ಜನರಿಗೆ ಹೊಸದೌಲತ್ತು। ಸಿಂಪಿ ಮುರಾರಿಯ ನಿಜ ಸಂಪತ್ತು'. ಯಂತ್ರದ ಸುತ್ತಲು ಅರಿವೆಯ ಗಟ್ಟಿ. ಒಂದೇ ದಿನದಲಿ ತೀರಿಸಿಬಿಟ್ಟ. ಇದರಿಂದ 'ಕಲಿತೆವು ಯಂತ್ರ ಸಿಪಾಯಿಯ ಗಟ್ಟ।' (ಆದರೆ ಯಂತ್ರವು ಸಿಪಾಯಿಯಾಗಿಯೇ ಕೆಲಸ ಮಾಡಬೇಕು. ಅದೇ ಒಡಯನಾಗಿ ಮಾನವನನ್ನು ಆಳಬಾರದು।) ಪ್ರತಿನುಡಿಯ ಕೊನೆಯ ಸಾಲು ಒಂದೇ 'ಭರ ಭರ ಹೊಲಿ ಹೊಲಿ ಸಿಂಪಿಗನೇ।'

ಇನ್ನುಳಿದವು ನಿಜವಾಗಿಯೂ ಅಪ್ಪಟ ಮಕ್ಕಳ ಪದ್ಯಗಳು. ಬುದ್ಧಿಗಿಂತ ಅವರ ಭಾವನೆ ಕಲ್ಪನೆಗಳನ್ನು ಕೆರಳಿಸಿ ಕೊನರಿಸಿದ ವಸ್ತುಗಳ ಕವನರೂಪಗಳು. ಅವುಗಳಿಗೆ ಹಾಯುವ ಮುಂಚೆ 'ಬೆಳೆ' ಕವನವನ್ನು ಗಮನಿಸಬೇಕು.

> 'ಬಿಸಿನೆಲದಲಿ ತುಸು ಹಸಿಯಾಯ್ತು
> ಬಿತ್ತಿದ ಬೀಜವು ಸಸಿಯಾಯ್ತು
> ಸಸಿ ದೊಡ್ಡಾಗಲು ತೆನೆಯಾಯ್ತು
> ತೆನೆಯೇ ದೇವರಮನೆಯಾಯ್ತು'

ಪ್ರಕೃತಿಯ ವಿಕಾಸ ಕ್ರಮವನ್ನು ಒಂದು ದೈವಿಕ ಭಾವದಿಂದ ನೋಡುವ ಸಂಸ್ಕಾರ ಇದು ಮಕ್ಕಳ ಮನಸ್ಸಿಗೆ ಕೊಡುತ್ತದೆ. ತೆನೆಯೆಂದರೆ ದೇವರ ಮನೆ. ತೆನೆಯಿಂದ ಮನೆಮನೆಗೆ ಅನ್ನವು ಬಂತು. ಅವರಿಂದ 'ದೂರಾಯಿತು ಹೊಟ್ಟೆಯ ಹಸಿವು। ಜೋರಾಯಿತು ರಟ್ಟೆಯ ಕಸುವು' (ಇಲ್ಲಿ ಬಾಲಭಾವದ ಸಹಜ ಪ್ರಾಸದೊಂದಿಗೆ ಅರ್ಥದ ಒಂದು ಪ್ರಾಸಾದಿಕತೆಯೂ ತುಂಬಿದೆ) ಆದ್ದರಿಂದ ಕವಿಯ ಕೊನೆಯ ತೀರ್ಮಾನ

> 'ಬೆಳೆಯೇ ಭೂಮಿಯ ಬಂಗಾರ
> ಬೆಳೆಯೇ ದೇವರ ಅವತಾರ'

ಬೇಂದ್ರೆ ಹಾಡಿದ 'ಅನ್ನಾವತಾರ'ಕ್ಕೆ ಇಲ್ಲಿ ಮಕ್ಕಳ ಮಾತಿನಲ್ಲಿ ದಿನಕರರು ಅವಕ್ಕೆ ದನಿಗೂಡಿಸಿದ್ದಾರೆ.

ಇನ್ನು ಅಪ್ಪಟ ಮಕ್ಕಳ ಪದ್ಯಗಳಲ್ಲಿ 'ಜೋಗುಳ' ಗೀತದ ಈ ಒಂದು ಮಾದರಿ ಕೇಳಿರಿ :

ಜೋ ಜೋ ಜೋ ಜೋ ನನ ತಂಗಿ
ಜೋಗುಳ ಹಾಡುವೆ ರಸರಂಗಿ

ಆ ತಂಗಿಯನ್ನು ಈ ಅಕ್ಕ ಮಾವಿನ ಕುಡಿಯೇ ಮುದ್ದಿನ ಮಗಿಯೇ, ಜೀವದ ಜೇನೇ ಬಾಳಿನ ಬೆಳಕೇ, ಅರಳಿದ ಹೂವೇ ಎಂದೆಲ್ಲ ಕೊಂಡಾಡುತ್ತಾಳೆ. ಆ ತಂಗಿಗೆ ಕುಡಿಯಲು ಗಂಜಿ. ಆಟಕೆ ಗುಲಗಂಜಿ ಅವಳ ಮೈ ಕೈ ಬಣ್ಣ ನಾರಂಗಿ. ಅವಳಿಗೆ ರೇಶಿಮೆ ನಿಲುವಂಗಿ. ಕೊರಳಿಗೆ ಚಿನ್ನದ ಮಾಗಾಯಿ. ಈ ಹಾಡು ನೈಜ ಗರತಿಯ ಹಾಡಿನ ದನಿ ಮೂಡಿಸುತ್ತದೆ. ವಾತ್ಸಲ್ಯದ ಧ್ವನಿ ಮಿಡಿಯುತ್ತದೆ.

ಶಿಶುಗೀತದ ಒಂದು ಲಕ್ಷಣ ಅದ್ಭುತರಮ್ಯ ಕಲ್ಪನೆ Fantasy. ಅಂಥ ಮಹಾ ವಿಲಾಸದ ಪದ್ಯಗಳಲ್ಲಿಯೇ ಈ ಕವಿಯ ಪ್ರತಿಭೆ ಪಳಗಿದೆ. 'ತಾಯಿಯ ಉತ್ತರ' 'ಅಕ್ಕನ ಬಂಡಿ' 'ಮಕ್ಕಳ ಬಯಕೆ' 'ಚಂದಿರ ಮತ್ತು ತಾರೆಗಳು' ಇವು ಅದಕ್ಕೆ ತಕ್ಕ ನಿದರ್ಶನ. ಇಲ್ಲಿ ಎಲ್ಲೂ ಉತ್ಪ್ರೇಕ್ಷೆ ಬಾಲ ಮನೋಲಹರಿಯನ್ನು ಮೀರಿ ಓಡುವದಿಲ್ಲ.

'ಮಕ್ಕಳಿಗೆಲ್ಲ ಸಿಕ್ಕುವದೇನೇ ಆಕಾಶದ ಚಿಕ್ಕಿ ?'
'ನೀನಾದರೆ ಹಕ್ಕಿ'
'(ಹಾಗೆಯೇ') ಜರತಾರೆಯ ಬಟ್ಟೆ ?
'ನೀನಾದರೆ ಚಿಟ್ಟೆ'
'(ಮತ್ತೆ) ಬೆಟ್ಟದ ನಾರಿಂಗ ?'
'ನೀನಾದರೆ ಮಂಗ'

ಇವು ತಾಯಿ ಕಂದನ ಪ್ರಶ್ನೆಗಳಿಗೆ ಕೊಡುವ ಉತ್ತರ.

ಅರಬೈಲು ಘಟ್ಟ ಹತ್ತಲು ಹೊರಟ 'ಅಕ್ಕನಬಂಡಿ' ಹೇಗಿದೆ? ಪುಂಡಬೆಕ್ಕು ಅದರ ನೊಗ ಹಿಡಿಯಿತು. ಕುನ್ನಿಮರಿ ಡೋಲು ಬಡಿಯಿತು. ಮಂಗ ಮುಂದೆ ಕೂತು ಬಂಡಿ ನಡಿಸಿತು. ಹೇಂಟೆಯೊಂದು ಹಾರಿಬಂದು ಹಾದಿ ಗುಡಿಸಿತು. ಆಗ ಅಕ್ಕ ನಕ್ಕು ನಕ್ಕು ಬಾಯಿ ಕಿಸಿದಳು. ಪಕ್ಕದಲ್ಲಿ ಕೂತ ತಂಗಿ ತುಂಬ ಹಸಿದಳು. ಇಲ್ಲಿಂದ ಅನಾಹುತಕ್ಕೆ ಆರಂಭ.

ಕೊಡ್ಲಗದ್ದೆ ಬಂತು. ಮಾಣಿಭಟ್ಟ ಹಾಲು ಬೆಲ್ಲ ಬಾಳೇಹಣ್ಣು ತಂದು ಇಟ್ಟ. ಹಾಲು ಕಂಡು ಹಾಳು ಬೆಕ್ಕು ಮೇಲೆ ಹಾರಿತು. ಆಗ ಬಂಡಿ ಓರೆಯಾಗಿ ಕೆಳಗೆ ಜಾರಿತು. ಬದಿಯ ಹಳ್ಳದಲ್ಲಿ ಅಕ್ಕತಂಗಿ ಬಿದ್ದರು. ಇಲ್ಲಿಗೆ ಕತೆ ಮುಗಿಯಲಿಲ್ಲ.

ಮಗುವಿನ ಮನಸ್ಸಿಗೆ ಸೋಲಿಲ್ಲ. ಅವರಿಬ್ಬರೂ ದೇವರನ್ನೇ ಎತ್ತಿಕೊಂಡು ಸಭಕೆ ನೆಗೆದರು. ಅಲ್ಲಿ ಈ Fantasyಗೆ ಟಾಚಣಿಯು ಚುಚ್ಚು–'ಮಾಣಿ ಭಟ್ಟ ಬೆಪ್ಪಗಾಗಿ ಕವಳ ಜಗಿದನು.'

'ಮಕ್ಕಳ ಬಯಕೆ' ಇದೇ ಮನೋರಾಜ್ಯದ ದೃಶ್ಯ. ಮುಗಿಲಿನವರೆಗೂ ಮಕ್ಕಳ ರಾಜ್ಯ।

'ಆಕಾಶದವರೆಗೂ ನಾ ಹೋಗಿ
ತೋರಣ ಕಟ್ಟುವೆ ಓರಣವಾಗಿ
ಮುಗಿಲಲಿ ಅಡಗುವೆ ಮಳೆಹನಿಯಾಗಿ
ಮಿಂಚಿನ ಬೆಳಕಿಗೆ ತೋರುವೆನು
ಪಂಚಿನ ಮಾಡಕೆ ಹಾರುವೆನು'

'ಗುಡು ಗುಡು ಗುಮ್ಮನ ಪದ್ಯ' ಈ ಕಂದನೇ ಬಾರಿಸುವನು. ಗುಡ್ಡದ ಬದಿಗೆ ಮಳೆಯಾಗಿ ಬಿದ್ದು ಗಿಡಮರಗಳ ಹಸಿರೆಲೆಗಳ ತುದಿಗೆ ಆತ ಪಟಪಟ ಕುಣಿಯುವನು. ಅಲ್ಲಿ ಮುಂದೆ 'ಅಂಗಳದಲಿ ನೀರಾಗುವೆನು। ಗುಳ್ಳೆಯ ರೂಪದಿ ತೋರುವೆನು' ಈ ಬಯಕೆ ಒಂದೇ ವಿಚಾರ ಬೆಳೆದಿದೆ. ಮಳೆಯಾಗಿ ಬಿದ್ದು ಹೊಳೆಯಾಗಿ ಹರಿದು ತಡಸಲಾಗಿ ಧುಮ್ಮಿಕ್ಕಿ 'ಶರಧಿ'ಯನ್ನು ಸೇರಿ ತೆರೆಗಳೊಂದಿಗೆ ಆಡಬೇಕೆಂಬ ವಿಚಾರ. ಆದರೆ ಇಲ್ಲಿ ಮಗುವಿಗೆ ಹೀಗೆ ಸಮಗ್ರ ನದಿ ನಿರ್ವಾಹದ ಕಲ್ಪನೆ ಅಷ್ಟೊಂದು ಸಹಜವಲ್ಲ. ಅದೂ ತಡಸಲಾಗಬೇಕೆಂಬುದು ಕೇಳಿ ತಿಳಿದ ವಿಚಾರ. 'ಶರಧಿ' ಮಗುವಿನ ಶಬ್ದಕೋಶಕ್ಕೆ ಮೀರಿದ ಮಾತು ಇರಲಿ.

'ಪಾತರಗಿತ್ತಿ' ಪೂರ್ತಿ ಮಕ್ಕಳ ಮನೋಲಹರಿ–ಮನೋಹರ ಊಹನೆ. ಇಲ್ಲಿ ಮಗುವಿನ ಕಣ್ಣಿನ ಬೆಳಕು ಬಣ್ಣ ತುಂಬಿದೆ. ಆದರೆ ಇಡಿಯ ಕಲ್ಪನಾ ವಿಲಾಸವನ್ನು ಕವಿ ಆ ಮಗುವಿನ ಕನಸನ್ನಾಗಿ ಪರಿಭಾವಿಸಿದ್ದೇಕೋ. 'ಮಿಕಿ ಮಿಕಿ ಕನಸು' (ಮಿಕಿ ಮಿಕಿ ನೋಡು ಎಂಬ ಪದಪ್ರಯೋಗದ ಹೊಸರೂಪವಿದು !) ಮೊದಲ ಮೂರು ಪುಟ್ಟ ನುಡಿಗಳಲ್ಲಿ ಮಗುವಿನ ದೃಷ್ಟಿಯಲ್ಲಿ ಪಾತರಗಿತ್ತಿಯ ಬೆನ್ನು ಮೈಮಾಟದ ಬಣ್ಣನೆ ಇದೆ. 'ಪಾತರಗಿತ್ತಿಯ ಬೆನ್ನನು ಹತ್ತಿ। ಕೂತೆನು ನಾನು ಅಳುಕೇನು ? ಇಲ್ಲಿಂದ ಕನಸು ಸುರು. ಅವರ ಸವಾರಿ ಮಾಡಿ ಮುಗಿಲಿಗೆ ಹಾರಿ ಭೂಮಿಗೆ ಇಳಿದು, ಬಗೆ ಬಗೆ ಹೂವಿನ ಬಣ್ಣದ ತೋಟದಲ್ಲಿ ಜಿಗಿ ಜಿಗಿದಾಡಿ, ಪಾತರಗಿತ್ತಿಯು ಈಂಟಿದ ಹೂವಿನ ಹಾಲಿನಲ್ಲಿ ಮಗುವೂ ಪಾಲು ಪಡೆಯುತ್ತದೆ !

' ಹೂಮಕರಂದ । ಬಲು ರುಚಿಯಿಂದ ॥ ನಾನು ತಿಂದೆ । ಸವಿ ಸವಿಯೆಂದೆ ॥
ಹಿಗ್ಗಿತು ಮನಸು ಮುಗಿಯಿತು ಕನಸು ॥'

ಇದೇ ಕಲ್ಪನೆಯು ನೇರದ ಅರಳು ' ಕಾಮನಬಿಲ್ಲು '. ಕಾಮನ ಬಿಲ್ಲು (ರಾಮನ ಬಿಲ್ಲೇ । ?) ಮುಗಿಲಿನಲಿ ಬಣ್ಣದ ತೋರಣ. ಮಗುವಿನ ಪ್ರಜ್ಞಾಪ್ರಪಂಚದಲ್ಲಿ ಕಾಮನಬಿಲ್ಲಿನ ಹುಟ್ಟು ಹೇಗೆ ?

' ದೇವರ ಮಕ್ಕಳು । ಸಾಬೂನಿನ ನೀ–। ರ್ಗುಳ್ಳೆಯ
ಊದಿದರೆ ? ॥ ಗುಳ್ಳೆಗಳೆಲ್ಲವು । ಪಂಕ್ತಿಯು ಸೇರಲು ।
ಮುಗಿಲಲಿ ತೂಗಿದರೆ ?

ಇದೇ ರೀತಿ ' ಚಂದಿರ ತಾರೆಗಳ ' ಕುರಿತ ಪದ್ಯದಲ್ಲಿ ಚಂದ್ರನ ಕೋರೆಬಿಂಬವನ್ನು ಕಂಡಾಗ ಮಗುವಿನ ಪ್ರಶ್ನೆ ' ಲಕ ಲಕ ಹೊಳೆಯಲು ಬಿಳಿ ಬೆಳ್ಳಿ ಈತರ ಹೊಳೆವುದೆ ಬೆಳ್ಳುಳ್ಳಿ ?' ಈ ಪದ್ಯದಲ್ಲಿ ಚಂದಿರಮಾಮ ಮೋಡಗಳಲ್ಲಿ ಅಡಗಿದಾಗ ' ಉಡುಗಣ ' ಅವನನ್ನ ಹುಡುಕಾಡುತ್ತಾರೆ. ಈ ಹಿರಿಯಣ್ಣ ಕಿರಿಚಿಣ್ಣರ ಕಣ್ಣುಮುಚ್ಚಾಲೆ ಕಂಡಾಗ ತಂದೆದೇವರ ಬೇಸರಿಕೆ ಮುಗಿಯುವದು. ನೀರಡಿಕೆ ತಣಿಯುವದು. (ಇಲ್ಲಿ ಬಳಕೆಯ ಶಬ್ದ ' ನೀರಡಿಕೆ 'ಯ ಬದಲು ಪ್ರಯೋಗಿಸಬಹುದಿತ್ತು. ' ಉಡುಗಣ ' ಮಕ್ಕಳ ಮಾತಿನ ಶಬ್ದವಲ್ಲ. ಗ್ರಾಂಥಿಕ, ' ಡ ' ಕಾರದ ದ್ವಿತೀಯಾಕ್ಷರ ಪ್ರಾಸಕ್ಕೇ ತಂದಂತಿದೆ !)

' ಚೆನ್ನಿ ಮತ್ತು ಕುನ್ನಿ ' ' ಇಣಚಿ ' ಇವೆರಡೂ ಬಾಲಕನ ಭಾವಲೋಕದಲ್ಲಿ ಈ ಸಾಧು ಪ್ರಾಣಿಗಳು ಗೆದ್ದ ಮುದ್ದಿನ ಸ್ಥಾನವನ್ನು ಜೀವಂತವಾಗಿ ಬಿಂಬಿಸುತ್ತವೆ. ಇದೇ ಬಗೆಯ ವರ್ಣನಾ ವೈಖರಿ ' ದೇವರ ಎತ್ತು ' ಪಡೆದಿದೆ. ಆದರೆ ಸ್ವಾಭಾವಿಕವಾಗಿಯೇ ಈ ದೊಡ್ಡ ಪ್ರಾಣಿಯ ಇದಿರು ಮಗು ತಟಸ್ಥ. ಕವಿಯೇ ಮಕ್ಕಳೊಂದಿಗೆ ನಿಂತು ಬಣ್ಣಿಸುತ್ತಾರೆ. ' ಬಂತು ಬಂತು ದೇವರ ಎತ್ತು ! ಹಣೆಯಮೇಲೆ ಕುಂಕುಮ ಮುತ್ತು ' ' ಟಪ ಟಪ ಕೋಲು ' ' ಡುಬು ಡುಬು ಡೋಲು ' ' ಗಿಜಿಗಿಜಿ ಗೆಜ್ಜೆ ' ಇದೆಲ್ಲ ಮಕ್ಕಳದೇ ಥಾಟಿ. ಆದರೆ ' ಮಕ್ಕಳೆಲ್ಲರೂ ನೆರೆದರು ಸುತ್ತು ' ಎನ್ನುವ ಬದಲು ಆ ಮಕ್ಕಳೇ ನಾವೆಲ್ಲ ನೆರೆದೆವೆಂದರೆ ಈ ಪದ್ಯ ಇನ್ನೂ ಆತ್ಮೀಯವಾಗುತ್ತಿತ್ತು ಮಕ್ಕಳಿಗೆ.

ಕೊನೆಯದಾಗಿ ಎರಡು ಕುಣಿತದ ಪದ್ಯಗಳು. ಮಕ್ಕಳ ಗೀತದ ಉತ್ತಮ ಮಾದರಿ. ' ಮಕ್ಕಳ ಕುಣಿತ ' ' ಮಕ್ಕಳ ಕೋಲಾಟ '. ಕುಣಿತಕ್ಕಿಂತಲೂ

‘ ಕೋಲಾಟ ’ ಹೆಚ್ಚು ಚಟುವಟಿಕೆಯ ಚಪಲದ ಚಲುವಿನ ಕವನ. ಈ ಪದ್ಯಗಳ ಜೀಕಿನ ಲಯ, ಗತಿ ಮಕ್ಕಳ ಲವಲವಿಕೆಯ ಲಕ್ಷಣವಂತಿಕೆಯಿಂದ ತುಂಬಿದೆ. ‘ ಮಕ್ಕಳ ಕುಣಿತ ’ ಹೀಗೆ ಆರಂಭವಾಗಿದೆ.

‘ ಕುಣಿವುದು ನಾನು
ಮಣಿವುದು ನೀನು
ಬಾರೇ ಅಕ್ಕಾ ತಾಧಿಮಿ ಥೈ
ಹಿಗ್ಗುವೆ ನಾನು
ಬಗ್ಗುವೆ ನಾನು
ಇಬ್ಬರು ಕೂಡಿಯೇ ತಕಧಿಮಿಥೈ ’

ಇಲ್ಲಿಯ ಆಶಯ ಪ್ರಕೃತಿಯ ಪ್ರತಿಮೆಗಳನ್ನು ಬಳಸಿಕೊಂಡಿದೆ. ‘ ಮಿಂಚಿನ ತೆರದಲಿ ಮೆರೆವರೆ ಸೈ । ಮಂಜಿನವೋಲು ಧರೆಗಿಳಿವರೆ ಸೈ ’ ‘ ಹೂವಿನ ತೆರದಲಿ ನಾವ್ ನಗಲು । ಭೂಮಿಗೆ ಇಳಿವುದು ಆ ಮುಗಿಲು ’. ಆಗ ಮಗು ಆ ಮೋಡದ ಮರೆಗೆ ಅಡಗುವದು. ಅಕ್ಕ ಹಾಗೆ ಅಡಗಿದರೆ ತಂಗಿ ಹಕ್ಕಿಯಾಗಿ ಮೇಲೆ ಹಾರಿ ಅವಳನ್ನು ಕಂಡುಹಿಡಿಯುವಳು. ಬಾಲ ಭಾವದ ಚಕ್ಕಂದ ಇಲ್ಲಿದೆ. ಆದರೆ

ಒಬ್ಬರಿಗೊಬ್ಬರು ಅಪ್ಪುವೆವೈ
ಅವ್ವನು ಅಪ್ಪನು ಒಪ್ಪಲು ಸೈ

ಈ ವಿಚಾರ ಆ ಕುಣಿತದ ಮನದಣಿ ಮೋಜಿನಲ್ಲಿ ಮೈಮರೆತದ ಹಿಗ್ಗಿನಲ್ಲಿ ವಿಸಂಗತ. ಕುಣಿತದ ಭಂಗಿಗೆ ಅವ್ವ–ಅಪ್ಪರ ಒಪ್ಪಿಗೆ ಯಾಕೆ ಬೇಕು ? ಸ್ವಚ್ಛಂದಕ್ಕೆ ಈ ಬಂಧವೇಕೆ ?

ಆದರೆ ‘ ಮಕ್ಕಳ ’ ಕೋಲಾಟ ’ ಕವಿಯ ಅಪ್ರತಿಮ ರಚನೆ. ಕನ್ನಡದ ಹಿರಿಯ ಶಿಶುಗೀತಗಳಲ್ಲಿ ಒಂದು. ಅಂಬಿಕಾತನಯದತ್ತರು ಪ್ರಗಲ್ಭ ಪ್ರಜ್ಞೆಯ ಲೋಕದಲ್ಲಿ ‘ ಕುಣಿಯೋಣ ಬಾ ’ ಕವನದಿಂದ ಸಾಧಿಸಿದ ಒಂದು ಪ್ರೌಢಿಮೆಗೆ ಸರಿಸಾಟಿ ಯಾಗಬಲ್ಲ ಶ್ರೇಯಸ್ಸನ್ನು ದಿನಕರರು ಬಾಲಕರ ಭಾವಲೋಕದಲ್ಲಿ ಈ ಕೋಲಾಟದ ಹಾಡಿನಿಂದ ಸಾಧಿಸಿದ್ದಾರೆ ಅಂದರೆ ಅತಿಶಯೋಕ್ತಿ ಆಗದು. ೧೦ ಪುಟ್ಟ ಷಟ್ಪದಿಗಳಿಂದ ಕೂಡಿದ ಈ ನೀಳ್ಗವನ ಈ ಮಾದರಿಯ ಮಕ್ಕಳ ಪದ್ಯಗಳಲ್ಲಿಯೇ ಅಪ್ರತಿಮ ಇದರ ಆರಂಭ–

ಶರಣೂ ಶರಣೂ ಕೋಲೇನಾ
ಧರಣಿಗೆ ನಮನಾ ಬೆನಾ ಬೆನಾ

ಇಲ್ಲಿಯ ರೀತಿ ಒಕ್ಕಲ ಗುಮಟೆಯ ಪದ್ಯದ್ದು. ಧರಣಿಗೆ–ಭೂಮಿತಾಯಿಗೆ ನಮನ ಸೂಚಕವಾಗಿದೆ. ಬೆನಕ (ವಿನಾಯಕ)ನ ಚಿಕ್ಕರೂಪ 'ಬೆನಾ'. ಇದು ಕವಿಯದೇ ಕಲ್ಪನೆ ಇರಬೇಕು. ತಾಯಿ ತಂದೆಗಳೊಂದಿಗೆ ಮಕ್ಕಳು ತೆಂಗಿನ ಕಾಯಿಗೂ ನಮನ ಹೇಳುತ್ತಾರೆ.

'ಕುಡಿಯಿರಿ ಹಾಲಾ। ಹಿಡಿಯಿರಿ ಕೋಲಾ।
ಇದು ಹೊಸ ಕಾಲಾ–ಕೋಲೇನಾ
ಮಕ್ಕಳಿಗೆಲ್ಲಾ ಸಕ್ಕರೆ ಬೆಲ್ಲಾ
ಚಿಂತೆಯುಸಲ್ಲಾ–ಕೋಲೇನಾ'

ಕಿರಿದಾದ ಸೊಲ್ಲಿನಲ್ಲಿ ಹಿರಿದಾದ ಭಾವವ್ಯಂಜನೆ ಇಲ್ಲಿದೆ. ಸಡಗರದ ಹೆಜ್ಜೆ–ಗೆಜ್ಜೆಗಳ ಬಿಜ್ಜೆಯಲ್ಲಿ ಸಾಗಿವ ಈ 'ಮೋಹನ ಲೀಲೆಯ ಕಂಡು' 'ನಲಿವುದು ಮುಗಿಲು। ಏತಕೆ ದಿಗಿಲು ?। ಹಗಲೂ ಇರುಳೂ ಕೋಲೇನಾ' 'ತಿಂಗಳ ಬೆಳಕೂ ಮಂಗಳ ಥಳಕೂ। ಅಂಗಳದೊಳಗೇ ಕೋಲೇನಾ'

ಇದು 'ಮಕ್ಕಳ ಸುಗ್ಗಿ। ಮುದುಕರು ಕುಗ್ಗಿ। ಬೆನ್ನನು ಬಗ್ಗಿಸೆ ಕೋಲೇನಾ' ಇಲ್ಲಿಯ ಭಾವಾವೇಶದ ಈ ಹಿಗ್ಗು ನೋಡಿ–

'ಕುಣಿಯಲಿ ಕಡಲೂ
ತೆಂಗಿನ ಮಡಲೂ
ಭೂಮಿಯ ಒಡಲೂ ಕೋಲೇನಾ
ಭತ್ತದ ಕದಿರೂ
ಬೆಟ್ಟದ ಬಿದಿರೂ
ಹಕ್ಕಿಯ ಹೊದರೂ ಕೋಲೇನಾ'

ಮಣ್ಣಿನ ಮಕ್ಕಳ ಈ ಪ್ರತಿಮಾ ಸೃಷ್ಟಿ ಎಷ್ಟು ನೈಜ ಮತ್ತು ಸಹಜವಾಗಿದೆ !

'ಸಂತಸ ಉಕ್ಕಿ
ಆಗಸ ಮಿಕ್ಕಿ

ಮಿನುಗಲಿ ಚುಕ್ಕಿ ಕೋಲೇನಾ
ಕುಣಿಯಲಿ ಕೋಲಾ
ಹಾರಲಿಪಳ್ಳಾ
ಜಗವೇ ಮಳ್ಳಾ ಕೋಲೇನಾ '

ಮಾತಿನ ಚಕ್ಕಂದದೊಂದಿಗೆ ಭಾವದ ಉಕ್ಕಂದ ಹೇಗೆ ಚಿಮ್ಮಿ ಚೆಲ್ಲುವರಿದಿದೆ! ಈ ಕವನದ ೯ ನೆಯ ನುಡಿ–

' ಮಕ್ಕಳದೃಷ್ಟಿ
ಮಂಗಳ ಸೃಷ್ಟಿ
ನವ ಸಂತುಷ್ಟಿ ಕೋಲೇನಾ
ಕುಣಿವುದೆ ಶಕ್ತಿ
ಮಣಿವುದೆ ಭಕ್ತಿ
ಜೀವನ್ಮುಕ್ತಿ ಕೋಲೇನಾ '

ಎಂಥ ಹಿರಿಯ ತತ್ವಸೂಕ್ಷ್ಮ ಈ ಪುಟ್ಟ ಮಾತುಗಳಲ್ಲಿ ತುಂಬಿ ತುಳುಕಾಡಿದೆ. 'ಜೀವನ್+ಮುಕ್ತಿಗೆ' ಇಲ್ಲಿ ಹೊಸ ಸ್ವಾರಸ್ಯದ ಅರ್ಥತುಂಬಿದೆ. ಈ ಪದ್ಯ ಇಲ್ಲಿಯೇ ಮುಗಿಯಬೇಕು. ಆದರೆ ಕವಿಗೆ ನೀತಿಬೋಧಕ ಮೋಹ ಬಿಟ್ಟಿಲ್ಲ. ಅದಕ್ಕಾಗಿ ೧೦ ನೆಯ ನುಡಿ–

' ಹುಣ್ಣಿವೆ ಹೋಳಿ
ಚಿಣ್ಣರೆ ಏಳಿ
ದುಮ್ಮಾನ ಸುಡಿರೋ ಕೋಲೇನಾ '

ಈ ಚರಣಾರ್ಧದಲ್ಲಿ ಕುಣಿತಕ್ಕೆ ಹೋಳಿಹಬ್ಬದ ಹಿನ್ನೆಲೆ ಕಲ್ಪಿಸಿದೆ. ಸರಿ; ಆದರೆ ಮುಂದೆ ?

' ನೃತ್ಯವ ಕುಣಿದು
ಸತ್ಯವ ನುಡಿದು
ನಿತ್ಯತೆಪಡೆಯಿರಿ ಕೋಲೇನಾ '

ಇದೆಂಥ ಉಪದೇಶ ? ಕೋಲಾಟದ ಕುಣಿತಕ್ಕೂ–ಸತ್ಯನುಡಿಯುವದಕ್ಕೂ ಯಾವ ಸಂಬಂಧ ? ನಿತ್ಯತೆ ಪಡೆಯುವದು ಯಾರು ? ಇದು ಮಕ್ಕಳಿಗೆ ಕವಿಯ

ಬೋಧವೋ ಮಕ್ಕಳೇ ಕೋಲಾಟ ನೋಡುವವರಿಗೆ ಸಾರುವ ಸಂದೇಶವೋ ? ಇದು ಹೋಳಿ ಹಬ್ಬದ ನೂತನ ಸುಗ್ಗಿಯ ನವ ಸಂತೋಷದ ಸಂದರ್ಭಕ್ಕೆ ಹೊಂದಿಕೆ ಆಗುವಂತಿಲ್ಲ.

ಮಕ್ಕಳ ಮನಸ್ಸು ಉತ್ಸಾಹದ ಬುಗ್ಗೆ, ಉಲ್ಲಾಸದ ಹೊಗ್ಗೆ. ಅದನ್ನು ಚಿಮ್ಮಿಸಲು ಅರಳಿಸಲು ಬೇಕಾದ ಭಾವ–ಭಾಷೆ, ಭಣಿತ ಭಂಗಿಮೆಗಳ ಯೋಗ್ಯ ಯೋಗ ಒಂದು ಮಾಂತ್ರಿಕತೆ ಕಿಂದರ ಜೋಗಿಯ ಮಾಯಾಕಿನ್ನರಿಯಂತೆ. ಅಂಥ ಸ್ವರಗಳ ಮಿಡಿತ ನುಡಿತ ಈ ಕವಿಗೆ ಕರಗತವಾಗಿವೆ. ಆದಾಗ್ಯು ಅಲ್ಲಲ್ಲಿ ಅಪ್ಪಿತಪ್ಪಿ ಮಗುವಿನ ನಾಲಿಗೆಗೆ ನಿಲುಕದ, ಅರಿವಿಗೆ ಎಟುಕದ ಶಬ್ದ ಪದ ಪ್ರಯೋಗಗಳು ಪದ್ಯಗಳಲ್ಲಿ ನುಸುಳಿಬರುವದುಂಟು. ಅಂಥ ಕೆಲವನ್ನು ಮೇಲೆ ಪ್ರಸಂಗವಶವಾಗಿ ಎತ್ತಿ ತೋರಿಸಿದ್ದಾಗಿದೆ. ಇನ್ನು ಕೆಲವನ್ನು ನೋಡಬಹುದು. 'ಕಂದಾ' ಪ್ರಾಸಕ್ಕೆ 'ಮಕರಂದ' ತಂಗಿ ಪ್ರಾಸಕ್ಕೆ 'ರಸರಂಗಿ' ಮೀಸೆಗಳ ಪ್ರಾಸಕ್ಕೆ ಮೂಷಿಕ. ಇವು rather too clever ಅನಿಸುತ್ತವೆ. ಹಾಗೆಯೇ ವನಚರ, ಶಾಶ್ವತ, ಪಂಕ್ತಿ, ನೂತನ, ಸಂತುಷ್ಟಿ, ಈಶ, ನಮನ, ಬೊಮ್ಮ, ಸೊಂಪು, ಜಳಕ, ದೊರಕು, ನಾಚಿಸು, ಐಕ್ಯ। ಸಾಕ್ಯ(ಇ) ಅರೈಕೆ, ಎನಿತು ಇತ್ಯಾದಿ. ಅದೇ ರೀತಿ ಬರೋಣವೆ, ಬಿಡೋಣವೆ, ನೃತ್ಯವಕುಣಿವುದು, ವಳದಿ। ಕೆಳದಿ. 'ನಿತ್ಯವು ಇಡ್ಲಿಗೆ ಸಾಂಬಾರ'–ಇದರ ಅರ್ಥ ಮಕ್ಕಳಿಗೆ ಗೊತ್ತಾಗುತ್ತದೆ. 'ನಿತ್ಯತೆ ಪಡೆಯಿರಿ'–ಇದು ಅವರಿಗೆ ಅರ್ಥವಾಗುವದೇ ? ಈ ಮುಂತಾದ ಪ್ರಯೋಗಗಳನ್ನು ತಪ್ಪಿಸಲು ಸಾಧ್ಯವಿತ್ತು.

ದಿನಕರರ ಪದ್ಯಗಳ ಲಯ (rhythm) ಬಲಿಷ್ಠವಿರುತ್ತದೆ. ಈ ಪದ್ಯಗಳ ಒಂದು ಸೋಜಿಗವೆಂದರೆ 'ಮಕ್ಕಳ ಪದ್ಯ' ಸಂಕಲನದ ೫೨ ಪದ್ಯಗಳಲ್ಲಿ ಒಂದೆರಡು ಬಿಟ್ಟರೆ–ಅಲ್ಲಿ ಬಹುಶಃ ಒಂದೇ 'ಅಕ್ಕನ ಬಂಡಿ'. ಉಳಿದೆಲ್ಲ ಪದ್ಯಗಳ ಒಂದೊಂದು ಪಾದಕ್ಕೆ ಗಣ ಸಂಖ್ಯೆ ತುಸು ಹೆಚ್ಚು ಕಡಿಮೆ ಆದರೂ ಗಣ ಒಂದೇ ೪ ಮಾತ್ರೆಯ ಒಂದುಗಣ. ಇಂಥವು ನಾಲ್ಕು। ಮೂರು ಇಲ್ಲವೆ ಮೂರು। ಎರಡು ಅದಲುಬದಲಾಗಿ ಬಂದು ವೃತ್ತವೈವಿಧ್ಯವನ್ನು ಕಲ್ಪಿಸಿವೆ. ಅವುಗಳಲ್ಲಿ ಪವಣಿಸಿದ ಶಬ್ದಗಳ ಲಘು ಗುರುಗಳ ಸ್ಥಿತಿಗತಿಗಳಿಂದಲೇ ಈ ವೈವಿಧ್ಯಕ್ಕೆ ಜೀಕುತೂಕ ಕೊಡುವ ಒತ್ತು (stress) ಗತ್ತು (movement) ಕವಿ ಸಾಧಿಸಿದ್ದಾರೆ. ಇದಕ್ಕೆ ಕೆಲವು ಉದಾಹರಣೆ :

೧ ಚೆಕ್ಕೀ। ಚೆಕ್ಕೀ। ಮುದ್ದಿನ। ಸೊಕ್ಕೀ
ಎಲ್ಲಿಗೆ। ಹೋಗಿದ್ದೆ

೨ ಗುರು ಗುರು । ಗುರು ಗುರು
ನಗೆಯುತ । ಬಂದು

೩ ಒಂದು । ಎರಡು
ಆಕಳು । ಬರಡು

೪ ಬಾರೋ । ಬಾರೋ । ಮಳೆರಾ । ಯಾಽಽ

೫ ತಿಪ್ಪಾ । ಭಟ್ಟರ । ಚಂದ ಕೊ । ಡೆ
ಸಾವಿರ । ತೂತು ಗ । ಳೆಲ್ಲ ಕ । ಡೆ

೬ ಈಚೆಗೆ ಇಣಕಿ । ಆಚೆಗೆ ಹಣಕಿ
ಕುಣಿಯುವೆ ನಾಲ್ಕೂಕಡೆಯಲ್ಲಿ
ಕೆಳಗೂ ಮೇಲೂ ಬುಡವಲ್ಲಿ

೭ ಕೋಳಿಯು । ತತ್ತಿ
ಬೆಳ್ಳಗೆ । ಹತ್ತಿ
ದುಂಡಗೆ । ಸುತ್ತಿದ । ನೀರುಳ್ಳಿ

೮ ಎಲ್ಲಾ । ಕಡೆಯಲಿ ।
ಬೆಳೆದರು । ಕಳ್ಳಿ ।
ಧರೆಯಲಿ । ನಮ್ಮದೇ ।
ಸುಂದರ । ಹಳ್ಳಿ

೯ ಜೋ ಜೋ । ಜೋ ಜೋ ನನ । ತಂಗಿ
ಜೋಗುಳ ! ಹಾಡುವೆ । ರಸರಂ । ಗಿ

೧೦ ಕುಣಿವುದು । ನಾನು ।
ಮಣಿವುದು । ನೀನು ।
ಬಾರೇ । ಅಕ್ಕಾ । ತಾ ಧಿಮಿ । ಥೈ

೧೧ ಶರಣೂ । ಶರಣೂ । ಕೋಲೇ । ನಾ
ಧರಣಿಗೆ । ನಮನಾ । ಬೆನಾ ಬೆ । ನಾ

೧೨ ಮೈಸೂ । ರಿನ ಟೀ । ಕಾಫೀ । ಕ್ಲಬ್ಬು
ಎಲ್ಲಾ । ತಿಂಡಿಗ । ಳಾಗರ । ಸುಬ್ಬು

ಹೀಗೆ ನಾಲ್ಕುಮಾತ್ರೆಯ ಗಣ ಈ ಮಕ್ಕಳ ಪದ್ಯಗಳ ವಿವಿಧ ಕಟ್ಟೋಣದ

ಇಟ್ಟಿಗೆ. ' ಅಕ್ಕನ ಬಂಡಿ ' ಒಂದೇ ಮೂರು ಮಾತ್ರೆಯ ಗಣದ ಆಕೃತಿ ' ನಮ್ಮ । ಅಕ್ಕ । ಪುಟ್ಟ । ಬಂಡಿ ಕಟ್ಟಿ । ಕೊಂಡ । ಳು–'

' ಮೈಸೂರಿನ ಟೀ ಕಾಫೀ ಕ್ಲಬ್ಬಿ ' ನಂತೆಯೇ ಡಾ. ದಿನಕರ ದೇಸಾಯಿಯವರ ' ಮಕ್ಕಳ ಪದ್ಯ 'ಗಳು ಸುಬ್ಬು 'ಗೆ ಎಲ್ಲಾ ತಿಂಡಿಗಳಾಗರ : ಇಲ್ಲಿಯ ತುಪ್ಪದ ದೋಸೆ ಎಲ್ಲ ಮಕ್ಕಳಿಗೂ–ಅವರ ತಂದೆ ತಾಯಿಗಳಿಗೂ ತಿನ್ನುವ ಆಸೆ. ದೋಸೆಗೆ ತೂತು ಏನೇ ಇದ್ದರೂ ಅದರ ರುಚಿಗೆ ಯಾವ ಕುಂದೂ ಇಲ್ಲ. ದೋಸೆಗಳು ಚಿಕ್ಕ ದೊಡ್ಡ ; ಆದರೆ ಅವುಗಳ ಆಕಾರ ಒಂದೇ ' ಗೋಲಾಕಾರ '. ಅಂದಮಾತ್ರಕ್ಕೆ ಅವುಗಳ ಸ್ವಾದ ಸ್ವಾಹಾಕಾರಕ್ಕೇನು ಕಡಿಮೆ ? ನಮ್ಮ ಕನ್ನಡ ಮಕ್ಕಳು ಮಕ್ಕಳಾಗಿರುವ ತನಕವೂ ಕನ್ನಡ ಕಲಿತಿರುವತನಕವೂ ಈ ಪದ್ಯಗಳಿಗೆ ಮನ ಸೋತು ದನಿಗೂಡಿಸಿ ಕೈತಟ್ಟಿ ಹೆಜ್ಜೆ ಹಾಕುವದೇ ಸೈ ' ತಾಧಿಮಿ ತಾ ಧಿಮಿ ಥೈ । '

ಕರ್ನಾಟಕ ವಿಶ್ವವಿದ್ಯಾಲಯದ ' ಕರ್ನಾಟಕ ಭಾರತಿ 'ಯಲ್ಲಿ ಪ್ರಕಟವಾದ ಲೇಖನ (೧೯೭೯)

ಭಾವಗೀತಗಳು

ತಿಳಿನೀರು ಸಿಡಿದರೆ ಹನಿ. ಹರಿದರೆ ಹಳ್ಳ, ಹೊಳೆ, ನದಿ. ಧುಮುಕಿದರೆ ತಡಸಲು. ನಿಂತರೆ ಕೊಳೆ. ಊದಿದರೆ ಪುಟ್ಟಗುಳ್ಳೆ. ಆದರೆ ಒಂದು ಪುಟ್ಟ ಗುಳ್ಳೆಯೂ ನೀರಿನ ಎಲ್ಲ ಗುಣವುಳ್ಳದ್ದು. ಅದು ಪುಟ್ಟದಾದರೂ ಸಮಗ್ರ ಆಕಾಶವನ್ನೇ ಒಡಮೂಡಿಸುವದು ತನ್ನ ಆಕಾರದಲ್ಲಿ !

ಕಾವ್ಯವಾಗಲಿ, ಕವನವಾಗಲಿ, ಗೀತವಾಗಲಿ ಹಾಗೆಯೇ. ಮಹಾಕಾವ್ಯವೇನು, ಖಂಡಕಾವ್ಯವೇನು, ನೀಳ್ಗವನವೇನು, ಸೀಸಪದ್ಯವೇನು, ಚೌಪದಿ–ಚುಟಕವೇನು,– ಎಲ್ಲವೂ ಭಾವಕವನವೇ.

ಆದರೂ ಭಾವಗೀತವೆಂಬ ಪ್ರಕಾರವೂ ಅಂಥ ಒಂದು ವಿಶಿಷ್ಟ ರಚನೆ. ಇದರಲ್ಲಿ ಭಾವದಷ್ಟೇ ಗೀತಕ್ಕೂ ಪ್ರಾಧಾನ್ಯವಿದೆ. ಗೀತವೆಂದೊಡನೆ ಅದರ ವ್ಯಾಪ್ತಿ ಲಘು. ಅದರ ವ್ಯಾಖ್ಯೆ ಒಂದು ಇಡಿಯ ಭಾವದ ಆವಿಷ್ಕಾರ. ನಿಜವಾಗಿ ನೋಡಿದರೆ ಕಾವ್ಯವು ಮೂಲತಃ ಒಂದು ಭಾವಾಭಿವ್ಯಕ್ತಿಯೇ. ' ರಸಾತ್ಮಕಂ ವಾಕ್ಯಂ ಕಾವ್ಯಂ ' ' ರಮಣೀಯಾರ್ಥ ಪ್ರತಿಪಾದಕಃ ಶಬ್ದಃ '–ಮುಂತಾದ ಮಾತುಗಳು ಕಾವ್ಯ ವೆಂಬ ಕೃತಿಯ ವಿಸ್ತಾರವನ್ನು ಸೂಚಿಸುವದಿಲ್ಲ. ರಾಮಾಯಣ ಪ್ರದೀರ್ಘ ಕಾವ್ಯ. ಆದರೆ ಅದರ ಮೂಲ ವಾಲ್ಮೀಕಿಯ ಒಂದು ಶ್ಲೋಕದಿಂದ ಹೊಮ್ಮಿತು ! ಒಂದು ಅರ್ಥದಲ್ಲಿ ತತ್ವತಃ ಎಂಥ ಕಾವ್ಯವೂ ಒಂದಕ್ಕಿಂತ ಹೆಚ್ಚು ಭಾವಗೀತಗಳ ಗುಚ್ಛ ಅಥವಾ ಮಾಲೆ. ಅಲ್ಲಲ್ಲಿಯ ಒಂದೊಂದು ಉತ್ಕಟ ಸರಸ ಸನ್ನಿವೇಶವೂ ಒಂದೊಂದು ಭಾವೋದ್ಗಾರ, –ಭಾವಗೀತ. ರಘು ವಂಶದಲ್ಲಿ ' ಅಜವಿಲಾಪ ' ಭಾಗವತದಲ್ಲಿ ' ಗೋಪೀಗೀತ ', ಮಹಾಭಾರತದಲ್ಲಿ ಶಿಶುಕರ್ಣನನ್ನು ತೇಲಿಬಿಡುವ ಕುಂತಿಯ ಪ್ರಲಾಪ. ತಿರುಕೊಳುವಿನಾಕೆಯ ಪ್ರಲಾಪ. ಹೆಮ್ಲೆಟನ ಸ್ವಗತ– ಇತ್ಯಾದಿ ಇತ್ಯಾದಿ ತಮ್ಮ ಮಟ್ಟಿಗೆ ಒಂದೊಂದೂ ಭಾವಾಭಿವ್ಯಕ್ತಿಯ ಉದ್ದೇಶದ ಆವೇಗದ ಉದ್ಗಾರವೇ–ಅದು ಉದ್ದವಿರಲಿ, ವೇಗದ್ದಾಗಿರಲಿ.

ಇಲ್ಲಿ ಭಾವಕ್ಕೆ ತಕ್ಕದಾಗಿ ' ಗೀತ 'ವಾಗಬೇಕು,–ಆ ಕವನ. ಅಂದರೆ ಅದಕ್ಕೆ ಗೇಯತೆ ತುಂಬಬೇಕು. ಲವಕುಶರು ಶ್ರೀ ರಾಮನನ್ನು ಕಂಡಾಗ ರಾಮಾಯಣ ವನ್ನು ಹಾಡಿತೋರಿಸಿದರಂತೆ. ಅದನ್ನು ಕೇಳುತ್ತ, ಭಾವಪರವಶನಾಗಿ ಶ್ರೀ ರಾಮನು ಸಿಂಹಾಸನದಿಂದ ಎದ್ದು ಇಳಿದು ಬಂದು ಮೆಲ್ಲಗೆ ಸಭಿಕರ ನಡುವೆಯೇ

ಕುಳಿತನಂತೆ-ತನ್ಮಯನಾಗಿ ಕೇಳಲಿಕ್ಕೆ ! ಅವನ ಪಾಲಿಗೆ ಅವರು ಹಾಡುವ ಆಯ್ದ ಕವನ ಪ್ರಸಂಗಗಳು ಭಾವಗೀತಗಳೇ ಆದವು.

ಈ ಗೀತವಾಗುವ ಗುಣವುಳ್ಳ ಕವನ ಭಾವಗೀತ. ಗೀತವಾಗಲು ಗತ್ತು ಬೇಕು. ಸ್ವರ-ಲಯ-ಪ್ರಾಸ-ತರಂಗೀತತೆ ಇವೆಲ್ಲ ಗು ಣ ಗ ಳಿ ೦ ದ ಕೂಡಿದ ಕವನವು ಅದಾಗಿರಬೇಕು. ಲವಕುಶರು ವೀಣೆ ನುಡಿಸಿ ಶುದ್ಧ ಸಾಳಂಗ ರಾಗದಲ್ಲಿ ಹಾಡಿದ ರಂತೆ. ಭಾವಗೀತ ವೈಣಿಕ ಕಾವ್ಯ. ಇಂಗ್ಲಿಷಿನಲ್ಲಿ ಈ ಪ್ರಕಾರಕ್ಕೆ Lyric ಅನ್ನುತ್ತಾರೆ. Lyre ಅಂದರೆ ಹಾಡಿಗೆ ಹಿನ್ನೆಲೆಯಾಗಿ ನುಡಿಸುವ ಹಳೆಯ ತಂತುವಾದ್ಯ. ಅದಕ್ಕಾಗಿ ದೀರ್ಘವಲ್ಲದ ಕೆಲವು ಚರಣಗಳ ರಚನೆ ಇದು ಭಾವಾ ವೇಶದಿಂದ ಮಿಡಿಯುವಂತಹದು. ಆದ್ದರಿಂದ ಭಾವಗೀತವನ್ನು ವೈಣಿಕ ಕವನ ವೆಂದೂ ಕರೆಯಬಹುದು. ಆಗ ಅದರ ಆಶಯಕ್ಕಿಂತ ರೀತಿಗೆ ಪ್ರಾಧಾನ್ಯ ಬರುತ್ತದೆ.

'ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ '-ಎಂದಿದ್ದಾರೆ ನಮ್ಮ ವರ ಕವಿ ಬೇಂದ್ರೆ. ಅಂದರೆ ಈ ಬಗೆಯ ಕವನದಲ್ಲಿ ಭಾವಾವಿಷ್ಕಾರವೇ ಮುಖ್ಯ. ಇಲ್ಲಿ Expression ಮುಖ್ಯ. Communication ಗೌಣ. ಇದು ತಾನೇ ತಾನಾಗಿ ಹಾಡುವದು,-ಉದ್ಗಾರ. ಆದ್ದರಿಂದ ಇದರಲ್ಲಿ ಬೇರೆ ಸ್ವಾರ್ಥವಿಲ್ಲ. ಹೇಳತಕ್ಕದ್ದು ಇಲ್ಲ. ಅದಕ್ಕೇ ಅ ರ್ಥ ವಿ ಲ್ಲ. ಕವಿ ತನ್ನ Repturеನ್ನು Recapture ಮಾಡುವದು ಬ್ರೌನಿಂಗ ಕವಿಯು Thrush ಹಕ್ಕಿಯ ಬಗೆಗೆ ಹೇಳಿದಂತೆ. (' ಸುಗ್ಗಿ ಹಿಗ್ಗುತ್ತಲಿರೆ ಬಣ್ಣಿಸದೆ ಕೋಗಿಲೆಯು ? '-ಬೇಂದ್ರೆ.)

ಆದರೆ ನಮ್ಮ ಜ ನ ಪ ರ ಕವಿ ದಿನಕರ ದೇಸಾಯರಿಗೆ ಈ ಅ ಭಿ ವ್ಯ ಕ್ತಿ (Expression) ಮುಖ್ಯವಲ್ಲ. ಅವರಿಗೆ ಸಂವಹನ Communication ನಿವೇದನೆ ಮುಖ್ಯ. ಅವರಿಗೆ ' ಸ್ವಾರ್ಥ ' ಗೌಣ. ಅರ್ಥವೇ ಮುಖ್ಯ. (' ಮುಖ 'ದಿಂದಲೇ ' ಮುಖ್ಯ ' !) ಅವರಲ್ಲಿ ' ಕವಿಯ ಏಕತಾನ ಕವನ ದಂತೆ ನಾದಲೀನವಲ್ಲ ', ಆದಾಗ್ಯೂ ಈ ಕವಿಯ ಕಾವ್ಯನಾದ ಮಧುರ. ನಾದಲೀನ ಆದರೆ ನಾದಲೋಲವಲ್ಲ. ಇಲ್ಲಿ ಕವಿಯ ಏಕತಾನ ನಾದಲೀನವಲ್ಲ, ಬೋಧಲೀನ. ಅವರಿಗೆ ಹಾಡು ನಾಡಿನ ಹಾಡು. ನಾಡಿನ ಕಬ್ಬ ಆಗಬೇಕು. ಆಗಲೆ ದಸರೆಯ ಸೀಮೋಲ್ಲಂಘನ. ತನ್ನ ಕವನ ' ಭಾವಸ್ವಪ್ನದಲ್ಲಿ ನೆಯ್ದ ಕಾಣಿಕೆ ' ಎಂದರೂ ಕವಿ ಅದನ್ನು ಜಾಗೃತವಾಗಿಯೇ ನೆಯ್ದಿದ್ದಾನೆ. ಕವಿಗೆ ದಿನಕರ ದೃಷ್ಟಿ. ಅದಕ್ಕೆ ತಕ್ಕ ದರ್ಶನ, ಇವರ ಭಾವ Sentiment ಆಗಿ ಮೇಲಾಡುವದಿಲ್ಲ. ಅದು ಬಲವಾದ ದುರ್ದಮ್ಯವಾದ Emotion ಆಗಿ

ಭಾವಗೀತಗಳಲ್ಲಿ ಉಕ್ಕಿ ಹರಿಯುತ್ತದೆ. ' ಕವಿಗೆ ಮಣ್ಣು ಬೇಡ । ಎಲ್ಲವೂ ದೃಷ್ಟಿ ' ಎನ್ನುವಾಗಲೂ ' ಮಣ್ಣಿನಿಂದಲೇ ಬ್ರಹ್ಮ ರಚಿಸಿದನು ಸೃಷ್ಟಿ '-ಎಂಬ ಹಂಬಲ ಕವಿಗೆ ಪೂರ್ತಿ ಇದೆ !

ದಿನಕರರ ಕಾವ್ಯ ಕೃಷಿಯಲ್ಲಿ ಭಾವಗೀತಗಳ ಫಸಲೇ ಹುಲುಸಾಗಿ ಬೆಳೆದಿದೆ. ಇದಕ್ಕೆ ಒಂದು ಕಾರಣ, ಡಾ. ಗೋಕಾಕರೇ ಗುರುತಿಸಿದಂತೆ ಕವಿಯ ಭಾವ ನಿರ್ಭರತೆ. ಕವಿಗೆ ತನ್ನ ಅನಿಸಿಕೆ ಕಾವ್ಯಮಯವಹುದೋ ಅಲ್ಲವೋ ಎಂಬ ಶಂಕೆಯೇ ಇಲ್ಲ. ' ಭಾವದ ಉತ್ಕಟತೆಯಲ್ಲಿಯೇ ಅವರ ಕಾವ್ಯಮಯತೆಯ ಉಗಮವಿದೆ. ಒಂದೊಂದು ಭಾವನೆಯೂ ವ್ಯಕ್ತಿತ್ವದ ಆಳದೊಳಗೆ ಮಿಂದು ಬರುತ್ತದೆ ' ಅನ್ನುತ್ತಾರೆ ಡಾ. ಗೋಕಾಕರು. ಇಲ್ಲಿ ' ಕಲಿ ಕಪ್ಪು ಎಲ್ಲಿಸೂ ಇಲ್ಲ '-ಎಲ್ಲವೂ ನುಣುಪು ಅಲ್ಲವಾದರೂ ! ಕವಿ ವಾಸ್ತವವಾದಿ ಇದ್ದಷ್ಟೇ ಯಥಾರ್ಥವಾದಿ. ಆದ್ದರಿಂದ ಇದು ' ಹಾಲುಗಡಲಿನಾ ಸೀಮಿ ' ಅಲ್ಲ. ಇದು ಮುನ್ನೀರ ಕಡಲು. ಇಲ್ಲಿ ಹಿತಮಿತವಾದ ಶೈಲಿ-ಛಂದಗಳನ್ನು ಮರೆಯುವುದು ಸಾಧ್ಯವೇ ಇಲ್ಲ. ಹಾಗೆಯೇ ಭಾವ-ಭಾಷೆಗಳ ಅನುಬಂಧವೂ ಲಯ ಬದ್ಧ ವಾಗಿದೆ. ಪ್ರಾಸಬದ್ಧವಾಗಿದೆ. ಇವೆಲ್ಲ ' ಭಾವಗೀತ 'ಕ್ಕೆ ತೀರ ಅನುಕೂಲ. ಎಷ್ಟೋ ಸಲ ಪದ ಪವಣಿಕೆ-ಪಾದಚಾರಿಯಾಗಿ ಕಾಣಿಸುತ್ತದೆ. ಆದರೆ ಕವಿಯ ಪ್ರವೃತ್ತಿ ತತ್ವತಃ ಜನಪರ. ಅವರು ವಿದಗ್ಧ ವಿದ್ವಾಂಸರಿಗಾಗಿ ಅಥವಾ ' ವಿಮರ್ಶಕ ವೈದ್ಯ 'ರಿಗಾಗಿ ಬರೆಯುವುದೇ ಇಲ್ಲ. ಡಾ. ಗೋಕಾಕರು ಇದನ್ನೂ ಗುರುತಿಸಿದ್ದಾರೆ. ' ಅವರ ಕಾವ್ಯದ ವಿವಿಧ ಲಹರಿಗಳಲ್ಲಿ ಅನನ್ಯತಮವಾದ (ತಳಗೆರೆ ನನ್ನದು) ಒಂದು ಲಹರಿಯೆಂದರೆ ಶಿಶುಗೀತಗಳಂತೆ ಕಾಣುವ ಪ್ರಕಾರ. ಆದರೆ ಅವು ಶಿಶುಗೀತೆಗಳಲ್ಲ. ಶಿಶುಗೀತೆಗಳಂತೆ ಸಹಜವಾಗಿ ರೂಪವನ್ನು ಪಡೆದ ಸುಂದರ ಕವಿತೆಗಳು ', ಹಿಂದೆ ಹೇಳಿದಂತೆ ಕವಿಗೆ ಕೇವಲ ಉದ್ಗಾರ ಅಭಿವ್ಯಕ್ತಿ ಗಳಿಗಿಂತ ನಿವೇದನೆಯೇ ಗಮ್ಯ. ಅದನ್ನು ಅಭಿವ್ಯಕ್ತಿಯ ಶೈಲಿ ರಮ್ಯ ಗೊಳಿಸುತ್ತದೆ. ಆದ್ದರಿಂದ ಹೆಚ್ಚಾಗಿ ಕಾವ್ಯದ ಒಟ್ಟೂ ಸ್ವರೂಪ (statement) ಮಾದರಿ. ಅದರ ದನಿ (Tone) ಬೋಧನೆ (Didactic). ಆದರೆ ಇಲ್ಲಿಯೂ ಅದೇನೂ ಗುರುಗಾಂಭೀರ್ಯದ ಉಪದೇಶ ಆವೇಶವಲ್ಲ. ಮಿತ್ರನ ಅಥವಾ ಮನೆಯ ಹಿರಿಯನ ಮಮತೆಯ ಕಿವಿ ಮಾತು. ಆದರೂ ಅಲ್ಲಿ ಅಧ್ಯತೆ ಆಡಂಬರವಿಲ್ಲ. ಕಳಕಳಿ ಇದೆ. ' ಕೈ ಹಿಡಿದು ನಡೆಯಿಸುವ ' ತತ್ಪರತೆ ಇದೆ-' ಕರಣಾಳು ಬೆಳಕಿ 'ನಂತೆ. ಇದಕ್ಕೇ ಕವಿಗೆ ಸಹಜವಾಗಿ ಕರಗತವಾದ ಪ್ರಾಸದ, ಛಂದ-ಲಯದ ಬಂಧ ಕವನದ ಓಟವನ್ನೂ, ಓಘವನ್ನೂ ನಯವಾಗಿ ಓದಿಸಿಕೊಳ್ಳಲು ನೆರವಾಗುತ್ತದೆ. ಮತ್ತೆ ಇವೆಲ್ಲವೂ ' ಭಾವಗೀತಕ್ಕೆ ಅಗತ್ಯವಾದ

ಬಹಳ ಅಪ್ಯಾಯಮಾನವಾದ ಲಕ್ಷವೇ ಸರಿ. ಈ ಲಕ್ಷಣವು ಎಂಥ ಗಡಸು ರಚನೆಯನ್ನೂ, 'ಗೀತ'ವಾಗಿಸಬಲ್ಲದು. ಉದಾಹರಣೆ ನೋಡಿರಿ :

'ಸ್ವರ್ಗದೊಳಯ್ಯಾ ಹೂವಿನ ಹಾಸಿಗೆ
ಕಂಬಳಿಯಿಲ್ಲಂತೆ !

ಇಂದ್ರನ ಸೂಳೆಗೆ ರಂಭೆಗೆ ಸ್ವರ್ಗಾ
ಉಂಬಳಿ ಆಯ್ತಂತೆ !'

ಹಾಗೆಯೇ, 'ಯಾರವ್ವನ ಯಾರಪ್ಪನ ಹಂಗು ?
ಕಾಸಿದ ಕಬ್ಬಿಣಕೆಲ್ಲಿಯ ಜಂಗು ?'

ಇಂಥಲ್ಲಿ ಅರ್ಥದ ಮರ್ಮ ತಿಳಿದಷ್ಟು ಆಳ !

ಭಾವಗೀತಕ್ಕೆ ಅಲಂಕಾರ ಪ್ರಾಯವಾದದ್ದು ಅದರ ಲಯಗಾರಿಕೆ. ಈ ಕವಿಗೆ ಕವನಗಳನ್ನು ವಿವಿಧ ಛಂದೋವೃತ್ತಗಳಲ್ಲಿ ಪವಣಿಸುವುದರಲ್ಲಿ ಲಯದ ಹಿಡಿತ, ಬಂಧದ ಬಂಧುರತೆ ಬೆಡಗಿನದಿದೆ. ಇದರಿಂದ ಭಾವಗೀತದ ಒಂದೊಂದು ರೂಪಕ್ಕೂ ಮಾಧುರ್ಯ ಮತ್ತು ಚಾತುರ್ಯಗಳ ಮನೋಹರ ಹೊಂದಾಣಿಕೆ ಆಗಿದೆ. ಕವಿ ಲೀಲಾಜಾಲವಾಗಿ ತೂಗಿಸಿ ಮಾತಿನಲ್ಲಿ ಜೀಕು ಮತ್ತು ಜೋಕು (ಡೌಲು) ಭಾರಿಜೋಕೆಯಿಂದ ಸಾಧಿಸಿದ್ದಾರೆ. ಈ ಕುರಿತು ಚರ್ಚಿಸಲು ಒಂದು ಬೇರೆ ಪ್ರಬಂಧವು ಬೇಕು. ಜನನಾಯಕರು ಉತ್ತಮ ವಿಧಾಯಕ ಕಾರ್ಯಕರ್ತರೂ ಉನ್ನತ ವೈಚಾರಿಕರೂ ಅಷ್ಟೇ ಜನಪ್ರಿಯ ಒಡನಾಡಿಗಳೂ ಆದ ಡಾ। ದಿನಕರರ ಮಾನಸಿಕ ಶಿಸ್ತು ಮತ್ತು ಅಚ್ಚುಕಟ್ಟು ಇದರಿಂದ ವ್ಯಕ್ತವಾಗುತ್ತದೆ. ದಿನಕರರ ಯಾವ ಕವನವನ್ನು ಓದಿದಾಗಲೂ ಅಚ್ಚುಕಟ್ಟಾದ ಪ್ರಮಾಣಬದ್ಧವಾದ ಇಟ್ಟಿಗೆಯ ಕಟ್ಟೆ ಕಟ್ಟಡದ ಪ್ರತಿಮೆ ಕಣ್ಣಿಗೆ ಕಟ್ಟುತ್ತದೆ. ಯಾವ ಇಟ್ಟಿಗೆಯೂ ಅಲ್ಲಿ ಪೂರ್ವಿದಗ್ಧ (Halfbaked) ಇಲ್ಲ ! ಇದರಿಂದ ಭಾವಗೀತದ ಆಯ, ಆಕಾರ ಮತ್ತು ಅಂದಕ್ಕೆ ವಿಶಿಷ್ಟ ಕಳೆಯೇರಿದಂತಿದೆ. ಇಲ್ಲಿ ಈ ಪ್ರೌಢಪ್ರಗಲ್ಭ ಕವಿಯ ಯಾವ ಪಾಂಡಿತ್ಯ ಪ್ರದರ್ಶನವೂ ಇಲ್ಲ. ಎಲ್ಲೆಡೆಗೂ ವಿನಯ ಓತಪ್ರೋತ ! ಜನರ ನಡುವೆ ನಿಂತು ಜನರ ಕೊರಗಿಗೆ ಕೊರಳಾಗಿ, ಅವರ ಹಿಗ್ಗಿಗೆ ಕೊಳಲಾಗಿ ಈ ಕವಿ ಕಟುಮಧುರವಾಗಿ, ಕರ್ಕಶಕೋಮಲವಾಗಿ ಕೀಸರ ಬಂದರೂ ಬೇಸರ ಬರದೆ ಎದೆಮುಂಬಿ ಹಾಡುತ್ತಾರೆ ! ಆದರೆ ಈ ಮುಚ್ಚಿಗೂ ಒಂದು ಅಚ್ಚು ಇದೆ. ಅದು ಅಪ್ಪಟ ಮಾನವತೆಯ ಅಚ್ಚು. ಅದರ

ಸ್ವರೂಪ ಸಮತಾವಾದ. ‘ ಸಮತಾವಾದದಿ ವಿಶ್ವಕೆ ಶಾಂತಿ ’ ಇದು ಇವರೆತ್ತಿದ ಕೆಂಪು ಬಾವುಟದ ಅಂಕಿತ.

ಈ ಭಾವಗೀತಗಳ ದನಿಯ ಹಿಂದೆ ಇವರ ಆದಿಗುರುಗಳಾದ ಬಿ. ಎಂ. ಶ್ರೀ ಯವರ ಓಜಸ್ವಿಯಾದ ಕವಿತಾ ಸ್ಫೂರ್ತಿ ಓಕುಳಿ ಆಡಿದೆ. ಎಂಥ ವೃತ್ತವೇ ಇರಲಿ, ಬಿ. ಎಂ. ಶ್ರೀ ಯವರ ಇಂಗ್ಲಿಷ ಕವನಗಳ ಶೈಲಿಯು ಆ ಶಯ್ಯೆ ಅವುಗಳ ಬೆನ್ನುರಿಯಾಗಿದೆ. ಕಂಡೂ ಕಾಣದಂತೆ ಹಿನ್ನಲೆಯಲ್ಲಿದೆ. ಇದು ವೀರ್ಯವತ್ತಾದ ಕನ್ನಡ. ಇಲ್ಲಿ ವಾಗ್ವೈಭವದ ವಿಜೃಂಭಣೆ ಇಲ್ಲ. ‘ ಅವಸರ ಪಠಿತಾವಾಣೀ ಗುಣಗಣ ರಹಿತಾಪಿ ಭೂಷಣಂ ಭವತಿ ’ ಇಲ್ಲಿ ದಿನಕರರದು ‘ ಹೊತ್ತಿಗಾಡಿದ ಮಾತು ಸತ್ತವನು ಎದ್ದಂತೆ. ’ ಕವಿ ಕಣವಿಯವರು ಕಂಡಂತೆ ಇದು, ‘ ಹಸಿಗೋಡೆಯಲ್ಲಿ ಹರಳು ಒತ್ತಿದಂತೆ ’ ಮನಸ್ಸಿನಲ್ಲಿ ನೆಲೆಯೂರಿ ನಿಲ್ಲುತ್ತದೆ. ಅವರೇ ಅಂದಂತೆ, ‘ ರಸಾರ್ದ್ರತೆಯನ್ನು ಕೈ ಬಿಡದೆ, ವಿಡಂಬನೆಯ ತೀಕ್ಷ್ಣತೆಯನ್ನು ಸಹ್ಯಗೊಳಿಸಿದುದು ಕನ್ನಡ ಕಾವ್ಯ ಪ್ರಪಂಚದಲ್ಲಿಯೇ ಅಸ್ವಾದೃಶ. ’

ಕನ್ನಡದ ಜಾಜ್ವಲ್ಯ ಅಭಿಮಾನ, ಉತ್ತರ ಕನ್ನಡದ ನಿಸ್ಸೀಮ ಪ್ರೀತಿ, ದೀನದಲಿತ ವರ್ಗಗಳಲ್ಲಿ ಅಪಾರ ಹಾಗೂ ಜಾಗೃತ ಕಳಕಳಿ ಮತ್ತು ಸಾಮಾಜಿಕ ಕಾರ್ಯದ ಸತತ ಸೇವಾಭಾವ ಇವುಗಳ ಭದ್ರವಾದ ಚೌಕಟ್ಟು ದೇಸಾಯರ ಚೌಪದಿಗಳಷ್ಟೇ ಇತರ ಎಲ್ಲ ಕಾವ್ಯ ಸಂಕಲನಗಳಿಗೂ ಇದೆ. ಇವೇ ಅವರ ಕಾವ್ಯದ ಜೀವ ಸ್ವರಗಳು. ಈ ನಿಷ್ಠೆಗಳಿಂದ ಅವರ ಭಾಷೆ ಮತ್ತು ಭಾವ ಹುರಿಗೊಂಡು ಕೃತಿಗಳು ಓಜಸ್ವಿಯಾಗಿವೆ. ಅವುಗಳ ಮಾತಿನ ಮೈಕಟ್ಟು, ಶೈಲಿಯ ಶಿಸ್ತು ಒನಪು ನೇರ್ಪು ನೋಡಿದಾಗಲೆಲ್ಲ ನನಗೆ ನೆನಪಾಗುವುದು ಆಂಗ್ಲ ಕವಿ ರಡ್ಯಾರ್ಡ ಕಿಪ್ಲಿಂಗ್,–ಅವನ White man's burdan ಬಿಟ್ಟು.

ಆದರೆ ದಿನಕರರ ಈ ಕವನಗಳಿಗೆ ನನಗೆ ಅನಿಸಿದ ಒಂದು ಕೊರತೆಯೆಂದರೆ, ಅವುಗಳಿಗೆ ಆಯಾ ರಚನೆಗೆ ನಿಮಿತ್ತವಾದ, ನೆಲೆಯಾದ ಸಂದರ್ಭದ .ಸೂಚನೆ ಏಕೆಂದರೆ ದಿನಕರರು ಕೇವಲ ಕವಿಗಳಾಗಿದ್ದಿಲ್ಲ. ಅವರ ವ್ಯಕ್ತಿತ್ವಕ್ಕೆ, ಅದರಿಂದ ಒಡಮೂಡಿದ ಕರ್ತೃತ್ವಕ್ಕೆ ಮತ್ತು ಅದರಲ್ಲಿ ವ್ಯಕ್ತವಾದ ನೇತೃತ್ವಕ್ಕೆ ಹಲವು ಆಯಾಮಗಳು ಅಷ್ಟೇ ಮಹತ್ವದವು ಕೊನೆತನಕವೂ ಊರ್ಜಿತವಾಗಿದ್ದವು. ಈ ಎಲ್ಲ ಸಂಭ್ರಮದ ನಡುವೆ ಈ ಕವಿಯು ಕಾವ್ಯದೇವಿಯ ಆರಾಧನೆ, ಉಪಾಸನೆ ಮಾಡುವ ಆಸಕ್ತಿ ಹೇಗೆ ಕಾಪಾಡಿಕೊಂಡು ಬಂದನು ?–ಇದೂ ಒಂದು ಚೋದ್ಯವೇ ಸರಿ. ‘ ಮುಂಬಯಿಯ ಮನೆಯ ಕೋಣೆಯೂ (ಆರು ಅಡಿ ಅಗಲ ಮೂರು

ಅಡಿ ಉದ್ದ ?) ಕವಿಗೆ 'ಬಾಳಮಿಡಿಸುವ ವೀಣೆ' ಆಗುತ್ತದೆ. ಅಲ್ಲಿ ಕೂತು ಆತ 'ಅಲಗೇರಿಯ ಸಿದ್ಧ'ನನ್ನು ನೆನೆಯುತ್ತಾನೆ. 'ತೆರಿಗೆ ಅಧಿಕಾರಿಗಳಿಗೆ ಕವಿಗಳ ಮನವಿ'ಯನ್ನು ಬರೆಯುತ್ತಾನೆ! 'ಮುಂಬಯಿ ನಗರ'ದ ಇತ್ಯರ್ಥ ಇವರಿಗೆ ಚೆನ್ನಾಗಿಯೇ ಗೊತ್ತು–

'ಅಸ್ಥಿಪಂಜರದೊಳಗೆ ಕಟ್ಟಡ–ಬುನಾದಿ
ರಕ್ತನಾಳಗಳಲ್ಲಿ ಕುದಿಯುತಿದೆ ಬೀದಿ
ಒಳಚರಂಡಿಯ ಮೇಲೆ ನುಣುಪಾದ ರಸ್ತೆ
ನರಕವನು ಮುಚ್ಚಿಡಲು ನೂತನ ವ್ಯವಸ್ಥೆ!'

ಎಂಥ ಚಾಣಕೆತ್ತಿದ ನುಡಿ ಇದು!

'ಲಕ್ಷ ಜನ ಇದ್ದರೂ ಪಟ್ಟಣದ ಬೀದಿ
ಏಕಾಂತದಲಿ ಸಾಯಲಿಕೆ–ಒಳ್ಳೆ ಹಾದಿ.'

ಈ ನಗರ ಸಿಂಗರಿಸಿದವನು ನರನೆಂಬ ನರಿಯು! ಅಂದಾಗ ಕವಿಗೆ ಉತ್ತರ ಕನ್ನಡದ ಹಳ್ಳಿ, ಹಕ್ಕಲು ಆಗೇರು, ಒಕ್ಕಲು ನೆನಪಾಗುತ್ತಾರೆ. ಇದು ಬರೆ ಹಳೆ ಹಂಬಲದ (Nastalgia) ಹಳವಂಡವಲ್ಲ. ಇದು ಜಾನಪದದಲ್ಲಿ, ಗ್ರಾಮಾಯಣದಲ್ಲಿ, ಬಡಜನ ಸಮೂದಾಯದಲ್ಲಿ ಅವರ ಬೆಟ್ಟ–ಬಯಲು ಹಳ್ಳ ಬಾನುಗಳಲ್ಲಿ ಕವಿಗೆ ಇದ್ದ ಆಳವಾದ ಅನುರಕ್ತಿ. ಇಂಥ ಉದಾಹರಣೆಗಳನ್ನು ನೂರಾರು ಎತ್ತಿಕೊಡಬಹುದು.

ಆದಾಗ್ಯೂ ಅಲ್ಲಲ್ಲಿ ಬರುವ ಸಾರ್ವತ್ರೀಕರಣದ ನಾಡಿನ ನಾಗರಿಕತೆಯ ಹಿತ–ಮಿತಗಳ ಕುರಿತ ಉದ್ಗಾರಗಳ ಹೊರತಾಗಿ ದೇಶಭಕ್ತಿ, ಭಾಷಾಭಿಮಾನ, ಆತ್ಮೀಯ ಬಂಧು ಮಿತ್ರರು ಮುಂತಾದವುಗಳ ಬಗೆಗೆ ಹೊಮ್ಮಿದ ಹೃತ್ಪೂರ್ವಕ ಹಿಗ್ಗಿನ ಹಾಡುಗಳಿಗೆ ಹೊರತಾಗಿ ಅನೇಕ ಇತರ ವಿಶಿಷ್ಟ ಅಥವಾ ನಿರ್ದಿಷ್ಟ ಕೃತಿಗಳ ಪ್ರೇರಣೆಗಳಾದ ಸಂದರ್ಭಗಳ ಅರಿವು ನೀಡಿದ್ದರೆ,–ಅದು ಆ ಕವನಗಳ ಇಂಗಿತಜ್ಞತೆಗೆ ಇನ್ನಿಷ್ಟು ಸಹಾಯಕವಾಗುತ್ತಿತ್ತು. ಇನ್ನೂ ಒಂದು ಮಾತನ್ನು ಒಪ್ಪಬೇಕು. ಇಂಥ ಪ್ರತ್ಯೇಕ ಸಂದರ್ಭಗಳನ್ನು ಕೊಡದಿದ್ದರಿಂದ ಇವೆಲ್ಲ ಕವನಗಳು ಹೆಚ್ಚಿನ ಸಾಮಾನ್ಯೀಕರಣವನ್ನೂ ದೇಶ ಕಾಲಗಳ ಆಚೆಯ ಸಾಮಂಜಸ್ಯವನ್ನೂ ಹೊಂದು ವಂತೆಯೂ ಆಗಿದೆ, ಇರಲಿ.

ಸಂದರ್ಭದ ತಿಳುವಳಿಕೆ ಉಪಯುಕ್ತವೆಂದು ಹೇಳುವುದೇಕೆಂದರೆ ಕೆಲಸಲ ಒಂದೇ ಪರಿಕಲ್ಪನೆಯ ಕುರಿತು ಹೊಮ್ಮಿದ ಒಂದಕ್ಕಿಂತ ಹೆಚ್ಚು ಕವನಗಳಲ್ಲಿ ಆಶಯದ

ಒಂದೇ ದನಿ ಇಲ್ಲವೆ ಬನಿ ಮೂಡುವದಿಲ್ಲ. ಏಕೆಂದರೆ ಆಯಾ ಸಮಯದಲ್ಲಿ ಕವಿಯ ಮನೋವೃತ್ತಿ (Mood) ಬೇರೆಯಾಗಿ ಅಭಿವ್ಯಕ್ತಿಯ ರೀತಿ (Mode) ಬೇರೆ ಮಾರ್ಪಾಟುಗೊಳ್ಳಬಹುದು.

ಒಂದು ಉದಾಹರಣೆಯಾಗಿ 'ದೇವರ' ಕುರಿತ ಕವಿಯ ಕೆಲವು ಕವನಗಳನ್ನು ಒಟ್ಟಾಗಿ ಪರಿಶೀಲಿಸೋಣ. ಪ್ರಥಮ ಸಂಕಲನದಿಂದ ಆಯ್ದ ಪ್ರಥಮ ಕವನ 'ಕಾಣಿಕೆ'ಯನ್ನೇ ಓದಿರಿ. ಇದೊಂದು ಭಾವನಿರ್ಭರವಾದ, ಭಕ್ತಿ ಪರವಶವಾದ 'ಭಾವಪೂಜೆ'–ಕವನದಾರತಿ. ಇಲ್ಲಿ ಮಾಲೆ ಮಾಲೆಯಾಗಿ ಪೋಣಿಸಿಟ್ಟ ಅನೇಕ ಭವ್ಯ (Cosmic) ಉತ್ಪ್ರೇಕ್ಷೆಗಳು ಒಂದು ಶ್ರದ್ಧಾಪೂರ್ಣ ಆತ್ಮ ನಿವೇದನೆಯ ಅಹಂಕಾರವಿಲ್ಲದ ನಿರಭಿಮಾನದ ಕಾಣಿಕೆಯಾಗಿ ಬಂದಿವೆ. ಕೊನೆಗೂ ತಾನೊಬ್ಬ ಮರುಳ–

'ಮರುಳ ನಾನು ನಿಜವ ಮರೆತೆ; ಕ್ಷಮಿಸು ದೇವನೆ,
ನಿನ್ನ ಒಡವೆಗಳನೆ ನನ್ನವೆಂದು ಕೊಡುವೆನೆ!'

ಎಂದು ಕವಿ ತೋಡಿಕೊಳ್ಳುತ್ತಾನೆ.

'ದೇವರ ಅವತಾರ'ದಲ್ಲಿಯೂ ಇದೇ ಭಾವ ದೃಢವಾಗಿದೆ. ಹಲವಾರು ಉಪಮೆಗಳನ್ನೂ ಉದಾಹರಿಸಿ ಕೊನೆಗೆ, 'ಎಲ್ಲಾ ಜೀವಿಗಳೊಂದೆ ಜಗದಲಿ! ದೇವರ ಅವತಾರವು ಮಗನೆ.' ಆದರೆ ಇಲ್ಲಿ ಸೂಕ್ಷ್ಮವಾಗಿ ದೇವತ್ವಕ್ಕಿಂತ ಜೀವ ಜೀವಿಗಳ ಮಾನವತ್ವದ ಮೇಲೆ ಹೆಚ್ಚು ಒತ್ತು ಇದೆ.

ಆದರೆ ಮುಂದಿನ ಸಂಕಲನದಲ್ಲಿ ದೇವರ ಕುರಿತಾದ ಕವನ ದೇವರಿಗೇ ಒಂದು ಪ್ರಶ್ನೆ ಒಡ್ಡಿದೆ. ಅದೊಂದು ನೇರ ಆಹ್ವಾನವೇ ಆಗಿದೆ–'ದೇವನೀನು ಸತ್ತರೇನು?' ಅಂದರೆ ಈಗಾಗಲೆ ದೇವನು ಸತ್ತಂತೆಯೋ–ಎಂದು ಭಾವನೆ ಬೇರೂರಿದೆ. ಅದಕ್ಕೆ ಕವಿಯ ತೀವ್ರ ಪ್ರತಿಕ್ರಿಯೆ ಇದು. ಅದು ಏಕೆ? ಕವನದ ಮೊದಲ ನುಡಿಯಲ್ಲಿಯೇ ಉತ್ತರ ಮೊಳಗಿದೆ. 'ನೀನು ಬದುಕಿದರೂ ವ್ಯರ್ಥ' ಏಕೆಂದರೆ ಲೋಕದಲ್ಲಿ ಬಲು ಅನರ್ಥ. ದೇವರಲ್ಲಿ ಲೋಕವಿಟ್ಟ ನಂಬಿಕೆ ಹುಸಿಯಾಗಿದೆ. (ನಂಬಿಕೆಟ್ಟವರುಂಟೇ? ಎಂದು ದಾಸರು ಕೇಳಿದ್ದರು!) ಕವಿಯು ಲೋಕದ ಘೋರ ದಾರಿದ್ರ್ಯ, ದುಃಖ, ಕಲಹ ವ್ಯಾಜ್ಯ, ಕ್ರೂರ ಕರ್ಮ, ಯುದ್ಧ ಧರ್ಮ (?) 'ಶುದ್ಧರೆಂದು ಹದ್ದಿನಂತೆ ಕೊಳಕು ತಿಂದು' ಬದುಕುವ ರೀತಿ.–ಇಂದಿನ ನರನ ಈ ಬಾಳುವೆ. ಆ ದೇವನೇ ಆಳುವವನಲ್ಲ! ಅಂದಾಗ ಆತ ಇದ್ದು ಏನು ಪ್ರಯೋಜನ?

ಬಾಯಿಗಿಲ್ಲವೆಂದು ತುತ್ತು
ನಿನ್ನ ಕಣ್ಣ ಮುಂದೆ ಅತ್ತು
ಹೋದರೆನಿತೊ ಮಂದಿ ಸತ್ತು

(ಅಂದಾಗ) ನೀನು ಸತ್ತರೇನು ಕುತ್ತು ?–ಕವಿಯ ಈ ಸವಾಲು ಅವನ ನೈತಿಕ ಧೈರ್ಯದ ಫಲ. ತೀಕ್ಷ್ಣ ಬುದ್ಧಿಯ ಮತ್ತು ಆತ್ಮ ಶುದ್ಧಿಯ ಉದ್ಗಾರ. 'ಎಲ್ಲಿ ಹೋಗಲಿ ನಾನು ?' ಎಂಬ ಅಸಹಾಯಕ ಪ್ರಶ್ನೆಯೂ ಇದನ್ನೇ ಪಲ್ಲವಿಸುವಂತಿದೆ. ಎಲ್ಲಿ ಹೋದರೂ ಸರಿ, ಆದರೆ ಬೇಡ ದೇವರ ಗುಡಿಗೆ, ಇಲ್ಲಿ ಧ್ವನಿಸುವ ವಿಚಾರವೇನು ? ಕವಿಯ ತಲ್ಲಣಗೊಂಡ ಹೃದಯಕ್ಕೆ ಇನ್ನೆಲ್ಲೂ ಆಸರೆಯಿಲ್ಲ. ಗತಿಯಿಲ್ಲದವರಿಗೆ ದೇವರೇ ಗತಿ. ಆತ 'ಅಶರಣ ಜನ ಶರಣ' ಆದರೆ ಅವನಲ್ಲಿಗೂ ಕವಿ ಹೋಗಲು ಸುತರಾಂ ಒಪ್ಪುವದಿಲ್ಲ. 'ಭಕ್ತನೆಂಬುವ ಬಿರುದ ಧರಿಸಲಾರೆ' ಎನ್ನುತ್ತಾನೆ.

ಇಲ್ಲಿ ಕವಿಯ ಭೂಮಿಕೆ ನಾಸ್ತಿಕನದಲ್ಲ. ಎಡ ಪಂಥದವನದಲ್ಲ. (ಆ ಪಂಥಕ್ಕೆ ಈ ಕವಿ ಎಂದೂ ಪೂರ್ತಿ ಮುಟ್ಟಲಿಲ್ಲ !) ಆತ ಸುಧಾರಣಾವಾದಿ. ನಿಜವಾದ ದೇವಭಕ್ತಿ ಮತ್ತು ಒಣಡಂಭಾಚಾರ, ಧರ್ಮಾಡಂಬರ ಇವುಗಳ ಭೇದವನ್ನು ಕವಿ ಅರಿತಿದ್ದಾನೆ. ಧರ್ಮದ ಹೆಸರಿನಲ್ಲಿ ನಡೆಯುವ ಅನಾಚಾರ, ಮಿಥ್ಯಾಚಾರಗಳಿಗೆ ಕವಿ ರೋಸಿದ್ದಾನೆ. ಲಂಚ ವಂಚನೆಗಳ ಪ್ರಪಂಚಕ್ಕೆ ಹೇಸಿದ್ದಾನೆ. ಕವಿ ಟೆನಿಸನ್ ಅಂದಂತೆ, 'Faith uufaithful made them falsely true !' ಇಂದಿನ ಧನ ಕನಕಗಳ ಹರಕೆಯ ಬಲಿ ಪೂಜೆ, ಕವಿ ಕೆಚ್ಚು 'ಆತ್ಮ ವಿಶ್ವಾಸ' ಸತ್ತರೂ ಬದುಕಿರಲಿ ಆತ್ಮ ವಿಶ್ವಾಸ' ಇದುವೆ ಕವಿಯ ನಿತ್ಯ ಸಂದೇಶ.

ದೇವರ ಕುರಿತು ಕವಿಯ ಈ ಪ್ರಗತಿವಾದಿಯಾದ ವೈಚಾರಿಕ ನಿಲುವು ಅವರ ಪ್ರಸಿದ್ಧ ಕವನ ಒಂದರಲ್ಲಿ ವ್ಯಕ್ತವಾಗಿದೆ. 'ದೀನಗಿಂತ ದೇವ ಬಡವ' ಇದು ತುಂಬ ಹಳೆಯ ಕವನ. ಆಗ ಕವಿಯು ನವೋದಯದ ಉಷಃ ಕಾಲದಲ್ಲಿ ಉಸಿರಾಡಿಸುತ್ತಿದ್ದ. ಆಗ ಇದೇ ಶೀರ್ಷಿಕೆಯ ಒಂದು ಕವನ ಶ್ರೀ ಪು.ತಿ.ನ. ಅವರದೂ ಪ್ರಕಟವಾಗಿತ್ತು. ಬಹುಶಃ ಇವೆರಡೂ ಕ್ರಿಯೆ–ಪ್ರತಿಕ್ರಿಯೆಗಳಾಗಿರಬಹುದು. ವಿರಾಟರೂಪಿಯೂ ವಿಶ್ವವ್ಯಾಪಿಯೂ ಆದ ದೇವರೆಂಬ ಶಕ್ತಿಗೆ ಬಡ–ಮೂಢಮಾನವ ಗುಡಿಕಟ್ಟುವದನ್ನು ಕಂಡು ಕವಿಯಲ್ಲಿ ಉಮ್ಮಳಿಸಿದ ಖಿನ್ನವಿನೋದವಿಲ್ಲಿದೆ. ಒಂದು ನಮ್ರವಾದ ವ್ಯಂಗ್ಯವಿದೆ. 'ಜಗಕೆ ಗೋಡೆ ಹಾಕಿ ಗುಡಿಯ ಕಟ್ಟಬಲ್ಲೆಯಾ ?'–ಎಂಥ ಮಾರ್ಮಿಕ ಪ್ರಶ್ನೆ ! 'ರಾಯರು ಮತ್ತು

ದೇವರು ' ಈ ಕವನದಲ್ಲಿ ಈ ವ್ಯಂಗ್ಯ ಇನ್ನೂ ಪ್ರಕರವಾಗಿದೆ.

' ನಮಗೇತಕೆ ಆ ದೇವರ ಸುದ್ದಿ ?

ನಿಮ್ಮ ಅನುಗ್ರಹವಿದ್ದರೆ ಬುದ್ಧಿ !' ಎಂದು ಆರಂಭವಾಗುತ್ತದೆ ಈ ಕವನ. ' ರಾಯರ ಪತ್ತರ ಎಲ್ಲಾ ಉಂಟು : ದೇವರ ಕೈಯೊಳಗಿದೆಯೇ ಗಂಟು ?'– ಇದು ಎರಡನೆಯ ಸವಾಲು ! ಅರ್ಥಾತ್ ' ರಾಯರ ಖ್ಯಾತಿಯೂ ಅಷ್ಟಿಷ್ಟಲ್ಲ ! ದೇವರದೇನೂ ನಡೆಯುವದಿಲ್ಲ ! ' ದೇವರು ಕೊಟ್ಟರೂ ಪೂಜಾರಿ ಕೊಡ–ಎಂಬ ಗಾದೆಗೆ ಇದು ಹೊಸ ಪುರವಣಿ. ಈ ಪೂಜಾರಿಯೂ ರಾಯರ ಜೇಬಿನಲ್ಲಿ ! ಬಡವರ ಪಾಲಿಗೆ ರಾಯರೇ ದೇವರು. (' ರಾಜಾ ಪ್ರತ್ಯಕ್ಷ ದೇವತಾ ! ')

ದಿನಕರರ ಕಾವ್ಯಶಕ್ತಿ ಇರುವುದೇ ಇಂಥ ಮಾತಿನಲ್ಲಿ. ದೇವ । ಸಾವು, ರಾಯ । ದೇವ ಇಂಥ ಗಟ್ಟಿ ಶಬ್ದಗಳ ನೇರವಾದ ಮುಖಾಮುಖಿಗಳಿಂದ (Juxta position) ಮಾತಿಗೆ ವಿಲಕ್ಷಣ ಶಕ್ತಿ ಮಿಂಚುತ್ತದೆ–ಕಲ್ಲಿಗೆ ಕಲ್ಲು ಬಡಿದಾಗ ಕಿಡಿ ಹಾರಿದಂತೆ ! ಈ ಕವಿಯ ಶಬ್ದ ಸಂಗ್ರಹ ಹಾಗೇನು ವಿಪುಲವಿಲ್ಲ. ಆದರೆ ಅದು ' ಅವಸರ ಪರಿತಾವಾಣಿ ' ಹೊತ್ತಿಗಾಡಿದ ಮಾತು. ಇದು ಸರ್ವಜ್ಞನ ದೀಕ್ಷೆ ! ' ಬಹುರೂಪಿ ' (ಕೆಲಿಡೊಸ್ಕೋಪ) ನಳಿಕೆಯಲ್ಲಿ ಕೆಲವೇ ಬಣ್ಣದ ಚೂರು ಗಳಿರುತ್ತವೆ. ಆದರೆ ನಳಿಕೆಯನ್ನು ತಿರುಗಿಸಿದಂತ ಅವೇ ಬಳೆಯ ಓಡುಗಳು ವಿವಿಧ ರಮ್ಯ ರೂಪ ರಚನೆಗಳನ್ನು ಮೂಡಿಸುತ್ತವೆ. ಈ ಕವಿಯ ಕರ್ಮ ಕೌಶಲ್ಯವೂ ಹಾಗೆಯೇ ! ಇವನ್ನು ಇವರ ಕವನ ಸಂಕಲನಗಳ ಪ್ರತಿ ಪುಟದಲ್ಲಿ ಕಾಣಬಹುದು. ಶಬ್ದಗಳ ಇಂಥ ಗುಂಫನವು ಹೊಸ ವ್ಯಂಗ್ಯ, ಹೊಸ ಧ್ವನಿ ಹೊರಡಿಸುತ್ತಿರುತ್ತದೆ. ' ಪ್ರಗತಿಪರ ಮಾನವ ' ' ನವ್ಯತಾರೆ ' ' ಒಕ್ಕಲಿಗನ ಸುರಲೋಕ ' ' ಹೊಸ ಬೂದಿ ' ' ಮಂತ್ರಿಯ ನಿಧನ ' ಇತ್ಯಾದಿ ಇತ್ಯಾದಿ ಕವನಗಳು ಈ ವಿದೂಷಕ ಸಮ್ಮತಿಗೆ ಧಾರಾಳವಾದ ನಿದರ್ಶನಗಳು.

ಕವಿಯು ಕೆಲವು ಆತ್ಮಪರ ಕೃತಿಗಳನ್ನೂ ರಚಿಸಿದ್ದುಂಟು. ಆದರೆ ಇವು ಕಟ್ಟು ನಿಟ್ಟಾದ ಆತ್ಮ ನಿವೇದನೆಗಳಲ್ಲ. ಇವು Confessional ಕವನಗಳಲ್ಲ. ಇವು ಗಳಲ್ಲಿ ಕವಿಯ ಅಂತರಂಗದ ತುಡಿತ, ತಳಮಳ ಅಷ್ಟು ವ್ಯಕ್ತವಾಗುವದಿಲ್ಲ. ಕವಿಯ ಖಾಸಗಿಯ ಆಳದ ಭಾವ ವಿಕಾರಗಳಾಗಲಿ, ದುಃಖ ದೌರ್ಬಲ್ಯಗಳಾಗಲಿ ಯಾವ ಕವನದಲ್ಲಿಯೂ ಕಾಣಸಿಗುವದಿಲ್ಲ ! ಕವಿಯು ಲಾಕ್ಷಣಿಕವಾಗಿ ದಿನಕರನು ಹೌದು. ಆದರೆ ದೇಸಾಯಿ ?... ಅಲ್ಲಿ ಇಲ್ಲಿ ಅವನ ವಿಶ್ವತೋಮುಖ ಸಾಮಾಜಿಕ ಸಾರ್ವಜನಿಕ ಪ್ರಜ್ಞೆ ಪ್ರಕಟವಾಗಿದೆ–ವಿವಿಧ ಹಾಂಗುಗಳಲ್ಲಿ. ಇಲ್ಲಿ Personality

ಇದೆ. Individuality ಇಲ್ಲ ! ಹೇಳುವದೆಲ್ಲ ಒಂದು ವಿಧದ ಅನ್ಯೋಕ್ತಿ. ತನ್ನ ಕುರಿತು ಬರೆಯುವಾಗಲೂ ಕವಿಯು ತನ್ನ ಸಾರ್ವಜನಿಕ ಮುಖವನ್ನೇ ಮುಂದಿಡುತ್ತಾನೆ. ತನ್ನ ಅರಿವಿನಾಳದ, ಎದೆಯಾಳದ ಒಡಲುರಿಯ ಕಾವು ಅಷ್ಟೊ ತೋರಿಸುವದಿಲ್ಲ. ಹೀಗೆಂದು ಇದು ಮುಖವಾಡವಲ್ಲ. ಆದರೆ ಇಲ್ಲಿ ಕವಿ ಮುಖದ ಕೆಲವು ಚರ್ಯೆ ಒಡಮೂಡುತ್ತದೆ ಮತ್ತು ಅವೆಲ್ಲ ಹೃದ್ಯವೇ ಇವೆ. ಕೆಲವು ಉದಾಹರಣೆಗಳನ್ನು ನೋಡಬಹುದು :

ಮೊದಲನೆಯದಾಗಿ, 'ನನ್ನ ಪರಿಚಯ.' ಕವಿಯು ತನ್ನ ಅಂಗಾಂಗಗಳನ್ನು ವಿವರವಾಗಿ ನ ಮೂ ದಿ ಸು ತ್ತ ಹೋಗುತ್ತಾನೆ. ಆದರೆ ಪ್ರತಿಯೊಂದಕ್ಕೂ ಒಂದು ವಕ್ರೋಕ್ತಿಯ ತಿರುವು ಕೊಡಲು ತಪ್ಪುವದಿಲ್ಲ.

'ನನ್ನ ತಲೆಯುಲಿ ಹುಚ್ಚು ! ಮತ್ತೆ ಹೊಸ ಬೂದಿ
ಆ ಬೂದಿಯಿಂದಲೇ ಬೆಳಗುವದು ಗೋದಿ'

ಆದರೆ ಇದು ಹೊಸ ಬಗೆಯ ಬೂದಿ. ಹೊಸ ನಿರ್ಮಿತಿಗೆ ಹೊಸ ಗೊಬ್ಬರ. (ಮರಾಠಿಯಲ್ಲಿ ಹುಚ್ಚಾಪಟ್ಟೆ ವಿಚಾರಗಳಿಗೆ 'ಡೋಕ್ಯಾಂತ ರಾಖ') ಎನ್ನುತ್ತಾರೆ. ತಲೆ ತುಂಬ ಬೂದಿ ಎಂದರೆ ನಿರುಪಯೋಗಿ ಕಲ್ಪನೆಗಳು. ಆದರೆ ದಿನಕರರ ಕಲ್ಪನಾ ವಿಚಾರಗಳು ರಸಗೊಬ್ಬರ ! ಖಾಲಿ ಹರಟೆ ಗೊಡ್ಡು ಮಾತುಗಳಲ್ಲ. (ಆದರೆ ದಿನಕರ ದೇಸಾಯಿರ ವಿದುಳಿನಲ್ಲಿ ಇದಕ್ಕೂ ಹೆಚ್ಚಿನದು ಬಹಳ ಇದೆ !)

'ಅತ್ಯಂತ ಹಿರಿದಾಗಿದೆ ನನ್ನ ಹಲ್ಲು : ಹೀಗಾಗಿ ನಾನು ತಿನ್ನುವುದಿಲ್ಲ ಹುಲ್ಲು' ಈ ವಕ್ರದಂತ ವಕ್ರೋಕ್ತಿಗಾಗಿಯೇ ಮೀಸಲು. ಇದು ಜಗಿಯುವುದು ಕಬ್ಬಿಣದ ಕಡಲೆ. ಬರಿ ಹುಲ್ಲು ಅಲ್ಲ !

'ನನಗೆ ಹಿಡಿದಿದೆ ಚುಟಕ ರಚನೆಗಳ ರೋಗ : ನನ್ನ ಬಾಯಿಗೆ ಬೀಳಬೇಕಂತೆ ಬೀಗ !' ಆದರೆ ಬೀಗ ಹಾಕುವ ಬಂಟ ಯಾರು ? ಕವಿ ಸಾವಿರ ಚುಟುಕುಗಳ ಸರದಾರ ! ಒಂದು ಕಂಕುಳದಲ್ಲಿ ಕಬ್ಬೆಕ್ಕು ('ಮುದ್ದಿನ ಸೊಕ್ಕು ಮೈಸೂರರ ಮನೆಗೆ ಹೋಗಿ ಬಂದದ್ದು'.) ಇನ್ನೊಂದರಲ್ಲಿ ಕರಿ ನಾಯಿ. ಆದರೆ ಇದಕ್ಕೆ ಕಡಿಯುವ ಚಟವಿಲ್ಲ. ಬರಿ ದೊಡ್ಡ ಬಾಯಿ ! (ಈ ಮಾತು ಜನಸೇವಕ ವಿಧಾಯಕ ಕಾರ್ಯಕರ್ತ ದಿನಕರ ದೇಸಾಯಿಯವರಿಗೆ ಇಡಿಯಾಗಿ ಒಪ್ಪುವಂತಿದೆ. (His bark is worse than his bite) ಇವನಿಗೆ 'ಭಾವನೆಯ ಗಿಡ ಹುಟ್ಟಿ ತಲೆಯೊಳಗೆ ಬವನೆ.' ಈ ಕವಿಗೆ 'ಬವನೆ'ಯೊಂದು ಪ್ರೀತಿಯ

ಪ್ರತಿಮೆ. ಹಿಂದೊಮ್ಮೆ ಪೂಜ್ಯ ವೀಸಿಯವರ ಕುರಿತು, ' ಅವರ ಹೊಟ್ಟೆಯಲ್ಲಿ ಬೆಳೆದಿದೆ ಒಂದು ಬದನೆ ' ಎಂದು ಇವರು ಬರೆದರು. ಇದರಿಂದ ಸಾಮಾನ್ಯವಾಗಿ ಮೂಡುವ ಅರ್ಥ ಹೊಟ್ಟೆಯಲ್ಲಿ ಏನೂ ಪ್ರಯೋಜನವಿಲ್ಲದ ಒಂದು ಗಡ್ಡೆ ಬೆಳೆದಿದೆ. ಏನೋ ಒಂದು ಒಳಕುತ್ತಿನ ಕೊರಗು ಎಂದು. ದಿ. ವೀಸಿಯವರಿಗೂ ಹಾಗೇ ಅನಿಸಿತು. ಅವರು ತನ್ನ ಅಸಮಾಧಾನ ನನ್ನಲ್ಲಿ ತೋಡಿಕೊಂಡರು. ಅವ ರೆಂದರು, ' ದಿನಕರರು ಹೀಗೆ ಬರೆಯಬೇಕೆ ? ಇರಲಿ ನಾನು ಈ ' ಬದನೆ 'ಯ ಕುರಿತೇ ಒಂದು ಲೇಖನ ಬರೆಯುವೆ. ಹಾಗೆಯೇ ಅವರು ಒಂದು ಸೊಗಸಾದ ಹರಟೆಯನ್ನು ಬರೆದರು. ನಾನು ಈ ಕುರಿತು ದಿನಕರರಿಗೆ ಹೇಳಿದೆ. ಅವರಿಗೆ ಆಶ್ಚರ್ಯವಾಯಿತು. ನೋವೂ ಅನಿಸಿತು. ' ಅರೆ ! ಬದನೆಯನ್ನು ಒಂದು ಪ್ರತೀಕವಾಗಿ ಬಳಸಿದ್ದೆ. ಅದು ನಿಂದೆ ಅಲ್ಲ. ವೀಸಿ ನನ್ನ ಪ್ರೀತಿಯ ಗುರುಗಳು ' ಅಂದರು. ಅವರು ' ಬದನೆ 'ಯನ್ನು ಒಂದು ' ಗೀಳು ' ತಲೆ ತಿನ್ನುವ ವ್ಯಗ್ರತೆ ' A bee in the bonnet ' ಎಂಬ ಅರ್ಥದಲ್ಲಿ ಪ್ರಯೋಗಿ ಸಿದ್ದರು. ಆದರೆ ಈ bee ವೀಸಿಯವರ ಸೂಕ್ಷ್ಮ ಕರುಳನ್ನು ಕಡಿಯಿತು. (ಈ ವಿಷಯಾಂತರವನ್ನು ಕ್ಷಮಿಸಿರಿ.)

ಕೊನೆಗೂ ' ನನ್ನ ಪರಿಚಯ 'ವನ್ನು ಮುಗಿಸುವಾಗ ದಿನಕರರು ಹೇಳುತ್ತಾರೆ :

' ನನ್ನ ಹೆಂಡತಿ ಕವಿತೆ, ನಾನವಳ ಗಂಡ
ನನ್ನ ವನಿತೆಯ ಹೆಸರು ಅಖಿಲ ಬ್ರಹ್ಮಾಂಡ ! '

(ಇಲ್ಲಿ ಗಂಡ; ಬ್ರಹ್ಮಾಂಡ ಕೇವಲ ಪ್ರಾಸಕ್ಕೆ ಬಂದಂತಿದೆ. ಹೆಂಡತಿಯ ಬೆನ್ನಿಗೆ ಗಂಡ ಬರಲೇ ಬೇಕಂತ ಇಲ್ಲ. ಹೆಂಡತಿಯನ್ನು ವನಿತೆಯೆಂದು ಗುರುತಿಸುವುದೂ ತುಸು ದುರ್ಬಲ !)

ಅಂದರೇನು ? ಇದು ಕವಿಯಾದ ದಿನಕರರ ಪರಿಚಯ. ಅವರ ವ್ಯಕ್ತಿತ್ವದ ಅಂತರಂಗವಲ್ಲ. ' ಬಾಲ್ಯದ ಲೀಲೆ ' ಹೆಚ್ಚು ಆತ್ಮೀಯವೆನಿಸುತ್ತದೆ. ಆದರೆ ಇಲ್ಲಿಯೂ ಕವಿಯು ತನ್ನ ಬಾಲ್ಯದ ತೀರ ಆತ್ಮೀಯ ಸಲಿಗೆಯ ನೆನಪುಗಳ ಪುಟವನ್ನು ತೆರೆದಿಲ್ಲ. ಹಲವಾರು ಎಲ್ಲ ಬಾಲಕರ ಸಾಮಾನ್ಯ ಅನುಭವದ ಮಿಣುಕುಗಳೇ ಮಿನುಗಿವೆ,—ಕಾಗದದ ದೋಣಿ, ಬಿಸಿಲಿನ ಓಣಿ, ಹುಲ್ಲು ಬಣವೆಯ ಮೇಲೆ ಹಾರಿ ಜಾರುವುದು. ಹಕ್ಕಿ ಕಟ್ಟಿದ ಗೂಡಿನ ಹುಡುಕಾಟ, ಇತ್ಯಾದಿ. ಆದರೆ ಒಂದೆರಡು ಖಾ ಸ ಗಿ ೀ ಸ್ವಾರಸ್ಯವೂ ಬಂದಿವೆ. ' ಹಕ್ಕಿಯ ಗೂಡನು ಹುಡುಕಿ; ಅದರೊಳಗೆ ಬಿಳಿ ಡಾಂಬರ ಗುಳಿಗೆ ಹಾಕಿ; ತೋರಿಸಲು, ತತ್ತಿ ನೋಡಿದಳೆಂದು ತಾನು ; ಅಜ್ಜಿ ನಂಬಲು ನಾವು ನಗಲಿಲ್ಲವೇನು ? ಹಾಗೆಯೇ,

ಕೋಲು ನಿಲ್ಲಿಸಿ ಅದಕ್ಕೆ ಬುಟ್ಟಿಚಾಚಿ ಹಗ್ಗ ಕಟ್ಟಿ ಒಳಗೆ ಬತ್ತಪ ಬೀರಿ ಮಾಡಿದ ಆ ಮಾಟ-ಕೋಳಿ ಹಿಡಿಯುವ ಆಟ. ಕಣಜದಲಿ ರಬ್ಬರಿನ ಹಾವು ಇಟ್ಟು ನಾಗಮ್ಮನನ್ನು ಅಂಜಿಸಿ ಆಕೆ ಚೀರಿದ್ದು.-ಹೀಗೆ ನಕ್ಕು ನಲಿದಾಡಿದ ಏನೇನೊ ಆಟ- 'ಎಷ್ಟೆಂದು ಲೆಕ್ಕವಿಟ್ಟುವರು ಯಾರಿಲ್ಲ: ಲೆಕ್ಕವರಿಯದ ಬಾಲ್ಯವೇ ಮಧುರ ಜೆಲ್ಲ' ಎಂಬುದೇ ಇದಕ್ಕೆ ಮುಗಿತಾಯ. ಇಲ್ಲಿ ಸ್ವಲ್ಪ ಮಟ್ಟಿಗೆ ದಿನಕರರ ಚಿಕ್ಕಂದು ಇಣುಕಿದೆ.

ಕವಿಯು ತನ್ನ ತಂದೆಯು ಕುರಿತು ತುಂಬಿದೆದೆಯು ಓದುಗನ ಎದೆದುಂಬಿಸುವ ಭಾವಗೀತವನ್ನೊಂದು ರೂಪಿಸಿದ್ದಾರೆ. ಅದರಲ್ಲಿ ತನ್ನ ಬಗೆಗೆ ಹೇಳಿದ್ದೇನು ? ತಂದೆಯುನ್ನು ಅವರು 'ದತ್ತಣ್ಣ'ನೆಂದು ಕರೆಯುತ್ತಾರೆ. ದತ್ತಣ್ಣ ಕವಿಗೆ ಚಿಕ್ಕಂದಿನಲ್ಲಿ ಕಲಿಸಿದ ಕಾಗುಣಿತವಿಷ್ಟೇ,-'ಶೀಲವೆಂಬುದು ಮಗನೆ ಜೀವನದ ಜೇನು.' ಕವಿಗೆ 'ನೀ ಕಲಿಸಿದ ವರ್ಣಮಾಲೆ ಸುವರ್ಣ : ಬಂಗಾರಕ್ಕಿಂತಲೂ ಅದು ಶ್ರೇಷ್ಠ' 'ನಾನು ತೀರಿಸಲಾರ ನೀನಿತ್ತ ಸಾಲ; ದತ್ತಣ್ಣ, ನಿನ್ನ ಹೃದಯದ ಹಣೆ ವಿಶಾಲ!'

ಈ ಕವಿಗೆ ತನ್ನ ಮನೆ ಪರಿವಾರ, ಬಾಂಧವ ಋಣಾನುಬಂಧ ಇವು ಯಾವವೂ ತನ್ನ ಕಾವ್ಯಕ್ಕೆ ವಸ್ತು ಎನಿಸಲೇ ಇಲ್ಲ. ಈ ಕವಿಗೆ 'ಒಂದೇ ಮನೆ.' 'ಎಲ್ಲರಿಗೊಂದೇ; ಭೂತಲವೆಂದೆ: ಎಲ್ಲರಿಗೂ ಭಗವಂತನು ತಂದೆ.' ಆದ್ದರಿಂದ 'ಏತಕೆ ಯುದ್ಧ ? ಏತಕೆ ಮದ್ದು ? ಒಂದೇ ಮನೆಯೊಳಗೆಲ್ಲರೂ ಇದ್ದು ?'

ಕವಿಯು ತನ್ನ ಸಾವಿನ ಬಗೆಗೆ ಎರಡು ಕವನಗಳನ್ನು ಬರೆದಿದ್ದಾನೆ. ಅದರೆ ಅಲ್ಲಿಯೂ ಸಾವಿನ ಬಗೆಗೆ ನೇರವಾದ ತನ್ನ ಅನಿಸಿಕೆಗಳಿಲ್ಲ, ಇದೂ ಬಹಿರ್ಮುಖ ಅಭಿವ್ಯಕ್ತಿ. 'ನಾನು ಸಾಯಲು' ಈ ಕಿರಿಗವನದಲ್ಲಿ ಎರಡೇ ನುಡಿ. ಇಲ್ಲಿ ಗಡುಸಾಗಿ ವ್ಯಕ್ತವಾದದ್ದು ತನ್ನ ಕಾವ್ಯದ ಬಗೆಗೆ ತೀವ್ರ ವೈಫಲ್ಯದ ಭಾವನೆ. ಇದಕ್ಕೆ ಈ ಕಾವ್ಯದ ಲೋಪದೋಷ ಕಾರಣವಲ್ಲ. ಕಾರಣ ಕವಿಯು ಅಂದಿನ ಬೇಸರಿಕೆ ಭ್ರಾಂತಿ. 'ಹಾಳು ಕವನವು ಬೇಡ, ಇನ್ನು ಜನನವು ಬೇಡ, ನಾನು ಸಾಯಲು ನನ್ನ ಕವನಗಳ ಮರೆತು ಬಿಡಿ: ಸತ್ತ ಮೇಲವು ಮತ್ತೆ ಯಾಕೆ ಬೇಕು ?... ಈ ಕವನ ಆ ಕವನ ಹೇಗಿತ್ತು ಕವಿಯ ಮನ। ಎಂಬ ಚರ್ಚೆಯು ಮಾತು ಮುಗಿಯಬೇಕು.'

ಇಲ್ಲಿಯ ಮನೋವೃತ್ತಿ ವೇದ್ಯವಾಗಿದೆ ಆದರೆ ಈ ನಿಲುಮೆ ವ್ಯರ್ಥ. ಕವಿ ಸತ್ತರೆ ಕವನ ಸಾಯಬೇಕೆಂದಿಲ್ಲ. ಇಂಥ ಒಂದು ಆಕಾಂಕ್ಷೆ ಈ ಕವಿಗೂ ಇಲ್ಲ. ಇದೊಂದು

ಮತಿ ವಿಕಾರ. ಬೇಂದ್ರೆಯವರೂ ಒಂದು ಕೆರಳಿದ ಮನೋವೃತ್ತಿಯಲ್ಲಿ ಕೂಗಿದ್ದುಂಟು. 'ಯಾರಿಗೆ ಬೇಕೈತಿ ನಿನ್ ಕವಿತಾ? ಬ್ರೆಡ್ ತಾ, ಬೆಣ್ಣೆ ತಾ, ಎಣ್ಣೆ ತಾ'– ಇತ್ಯಾದಿಯಾಗಿ ಆ ಕವನ ಸಾಗುತ್ತದೆ. ಆದರೆ ಇಲ್ಲಿಯ ನಿಲುಮೆ ಓದುಗನದು. ಕವಿಗೆ ಸಹನೆ ತಪ್ಪಿಲ್ಲ. ಆದರೆ ದಿನಕರರು ಇಲ್ಲಿ ತಾವೇ ತಾಳ್ಮೆಗೆಟ್ಟು ಮಾತಾಡುತ್ತಿದ್ದಾರೆ. ಕವಿಗೆ ಶಾಂತಿ ಬೇಕು. ಅದಕ್ಕೆ ಕವನ 'ಹಾಳು'! ಇಂದೆಂಥ ಭ್ರಾಂತಿ! ತನ್ನ ಕವನದ ಕುರಿತು ಈ ಕವಿಯ ನಿಜವಾದ ಭಾವ ಅವನ 'ಹಿನ್ನುಡಿ' ಕವಿತೆಯಲ್ಲಿ ಒಡಮೂಡಿದೆ.

'ನನ್ನ ಭಾವದ ಕವನ! ನನ್ನ ಗಾನದ ತನನ
ನನ್ನದೆಂಬುವ ಜಂಬ ಸಾಕು, ದೇವಾ।
ನಿನ್ನ ಕೃಪೆಯಿಂದಲೇ। ಬನ್ನಿ ಗಿಡ ಹೂ ಬಿಡಲು
ನಿನ್ನ ಸೇವೆಗೆ ನೀನೆ ತಂದೆ ಹೂವ!'

ಇದು ಕವಿಯ ಎಂದೆಂದಿನ ವಿನಮ್ರ, ಭಾವಿಕ ಭೂಮಿಕೆ. ತನ್ನ ಕಾವ್ಯ ತನ್ನದೇ ಅಲ್ಲವೆಂದು, ನನ್ನದೆಂಬುವ ಗೀತ। ನಿನ್ನದೇ ಸಂಗೀತ। ಎಲ್ಲೆಲ್ಲಿಯೂ ನಿನ್ನ ಭಾವ ಪವನ. ಇದಕ್ಕೂ ನಿಖರವಾಗಿ ಕವಿ ಈ ಕವನವನ್ನು ಹೀಗೆ ಮುಗಿಸುತ್ತಾನೆ. 'ನನ್ನ ಕನ್ನಡ ನುಡಿಗೆ। ನಿನ್ನ ಹಿನ್ನುಡಿಯಿರಲು। ನನ್ನದೆಂಬುದು ತಾನೆ ಕನ್ನಡಿಯ ಬಿಂಬ। ಪೊಡವಿಯಲಿ ನಾಲ್ದೆಸೆಗೆ। ನೀನೇ ಹಾಡುತಲಿರಲು। ನಿನ್ನ ಭಾವವೇ ನನ್ನ ನುಡಿಗುಡಿಯ ಕಂಬ'–ಇದೊಂದು ಭಾವ ಪರವಶ ಪ್ರಾಂಜಲ ಆರ್ತತೆಯ ಉತ್ತಮ ಭಾವಗೀತ. ಇಂಥ ಕವನಗಳನ್ನು ಲೀಲಾಜಾಲವಾಗಿ ಬರೆಯಬಲ್ಲ ಈ ಕವಿಯು ತನ್ನ ಚುಟುಕಗಳ ಬಗೆಗೆ ಹೆಚ್ಚಿನ ಒಲವು ತೋರಿಸುತ್ತಾನೆ. ಅದಕ್ಕೆ ಒಂದು ಕಾರಣ ಅವರ ಮೂಲಭೂತವಾದ ಸಾಮಾಜಿಕ ಪ್ರವೃತ್ತಿ ಮತ್ತು ಸಾರ್ವಜನಿಕ ಸೇವೆಯ ಅನನ್ಯ ಆಸಕ್ತಿ. ಲೋಕದ ಡೊಂಕನ್ನು ತಿದ್ದಲು ಅದರ ತಿರುವು ತರುಪನ್ನು ಪರೀಕ್ಷಿಸಲು ಅವರು ಯಾವಾಗಲೂ ಆತುರ ಉಳ್ಳವರು. ಇದರ ತ್ವರೆಯಲ್ಲಿ ತಾಳ್ಮೆ ಕಡಿಮೆ. ಆದ್ದರಿಂದ ಚೌಪದಿಗಳನ್ನೇ ಅವರು ವಿಪುಲವಾಗಿ ಬರೆದರು. ಆದರೆ ಅವರು ಏನು ಗೀರಿದರೂ ಅದು ಶ್ರೀಗಂಧ. ಆ ಮಾತೇ ಬೇರೆ.

ಈ 'ಆತ್ಮನೇಪ'ದ' ಕವನದಲ್ಲಿ ಅತಿ ಪ್ರಸಿದ್ಧವಾದದ್ದು 'ನನ್ನ ದೇಹದ ಬೂದಿ.' ಸತ್ತ ಮೇಲೆ ಕವಿ ತನ್ನ ದೇಹದ ಬೂದಿ ಏನಾಗಬೇಕೆಂದು ಅತ್ಯಂತ ಕಳಕಳಿಯಿಂದ ಈ ನಾಲ್ಕು ನುಡಿಗಳ ಕವನದಲ್ಲಿ ಎದೆ ಬಿಚ್ಚಿ ತೋಡಿಕೊಂಡಿದ್ದಾರೆ. ಕವಿಯ ಸಾವಿನ ಗುರಿ ಬಾಳಿಗಿಂತ ಹಿರಿದು.

'ಸಾವಿನಲ್ಲಿ ಹುಟ್ಟು ಧನ್ಯವಾಗಬೇಕು!' ಧನ್ಯವಾಯಿತು ಹುಟ್ಟು ಸಾವಿನಲ್ಲಿ. 'ಹುಟ್ಟಿನ, ಬಾಳಿನ ಸೇವೆಯ ಸಾರ್ಥಕ್ಯ ಇರುವುದೇ ಇಂಥ ಸಾವಿನಲ್ಲಿ. ತನ್ನ ದೇಹದ ಬೂದಿಯಿಂದ ಗದ್ದೆಯಲ್ಲಿ ಬತ್ತ ಬೆಳೆಯಬೇಕು. ಕೊಳದಲ್ಲಿ ತಾವರೆ ಅರಳಬೇಕು. ಹೊಳೆಯಲ್ಲಿ ಮೀನು ಅದನ್ನು ತಿನ್ನಬೇಕು, ಇತ್ಯಾದಿ. ನೆಹರೂಜಿ ಕೂಡ ಹಲವು ವರ್ಷಗಳ ನಂತರ ತಮ್ಮ ಮೃತ್ಯು ಪತ್ರದಲ್ಲಿ ಇದೇ ಅಪೇಕ್ಷೆಯನ್ನು ವ್ಯಕ್ತ ಮಾಡಿದ್ದರು. 'Great minds think alike' ಎಂಬುದು ಹೀಗೆ ನಿಜವಾಯಿತು.

ಜನಸೇವೆಗಾಗಿಯೇ ದೇಹ ಸವೆಸಿ, ಜೀವ ತೇದ ದಿನಕರರಿಗೆ ತೃಪ್ತಿ ಸಾಲದು. ಸತ್ತ ಮೇಲೆ ತನ್ನ ಚಿತಾಭಸ್ಮವು ಕೂಡ ಯಥಾ ಶಕ್ತಿ ಪರರ ಉಪಕಾರಕ್ಕೆ ಜನಹಿತಕ್ಕೆ ಬೀಳಲಿ ಎಂಬುದೊಂದೇ ಅವರ ಉತ್ಕಟ ಉತ್ಕಂಠೆ! ತೀರ ಸರಳ ಸಹಜ ಸರಣಿಯಲ್ಲಿಯೂ ಮೂಡಿ ಬಂದ ಈ ಕವನ ಕನ್ನಡದ ಶ್ರೇಷ್ಠ ಆಧುನಿಕ ಭಾವಗಿತಗಳಲ್ಲಿ ಒಂದು! ಇದರ ಹಿರಿಮೆಯೆಂದರೆ ಈ ಕವಿಗೆ ತಾನು ಜೀವಮಾನವೆಲ್ಲ ದುಡಿದುಡಿದು ದಣಿದು ಸಾಯುವಾಗಲೂ ಜನತೆಗೆ ತನ್ನ ಸೇವೆ ಸಾಲದೆಂಬ ಕೊರಗು! ತನ್ನ ಜೀವಿತ ಕಾರ್ಯದ ಕುರಿತು ತನಗೇ ಅರಿವಿಲ್ಲದ ವಿಭೂತಿ ದಿನಕರ ದೇಸಾಯಿ! He is not aware of his own greatness! ತನ್ನ ಕಲೆಯ ಬೆಲೆ ಕಟ್ಟಲಾರದ, ಕಟ್ಟಲೊಲ್ಲದ ನಿಜವಾದ ಕಲೆಗಾರ ಈ ಕವಿ,– ತನ್ನ ಪರಿಮಳ ತಾನೇ ತನ್ನದೆಂದು ಅರಿಯದ ಕಸ್ತೂರಿ ಮೃಗದಂತೆ! ಅದಕ್ಕೆ ಈ ಕವನದ ಕೊನೆಯ ನುಡಿ ಹೀಗೆ ಬಂದಿದೆ,–' ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ' (ಅಂದರೆ ಬದುಕಿದಾಗ ಅದು ಸೇವೆಗೆ ಸಲ್ಲಲಿಲ್ಲ!) 'ಇಂದಿಗೀ ನರಜನ್ಮ ಸೇವೆಯೆಂದು: ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ, ದೇವ!' ಎಂಥ ಕರ್ಮಕರ್ಕಸ ತಿಳುವಳಿಕೆ ಇದು! ತಾನು ಮಾಡಿದ್ದೇ ಬಲು ದೊಡ್ಡ ಕಾರ್ಯವೆಂದು ಸ್ತೋಮ ಮಾಡಿಕೊಳ್ಳುವ ಜನಸ್ತೋಮಕ್ಕೆ ಇಂದು ಕಡಿಮೆಯಿಲ್ಲ. ಅಂಥಲ್ಲಿ ಕವಿ, ದಿನಕರರು ತಾನು ಮಾಡಿದ್ದು ನಿಜವಾದ ಸೇವೆಯೇ ಆಗಲಿಲ್ಲವೆಂದು ಭಾವಿಸುತ್ತಾರೆ! 'ನಿಜ ಸೇವೆ ಗೈಯಲಿಕೆ ಬರಲಿ ಮುಂದೆ' ಎಂದು ದೇವರಿಗೆ ಮೊರೆಯಿಡುತ್ತಾರೆ ಏಕೆ?... 'ಇಂದಿಗೀ ನರಜನ್ಮ ಸೇವೆ'ಯೆಂದು! 'ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ' ಎಂದು. ತಾನು ಮಾಡಿದ ಜನಸೇವೆಯ ಕಾರ್ಯವೆಲ್ಲ ತನ್ನ ಆತ್ಮ ಸಂತೋಷಕ್ಕೆ. ಅಂದರೆ ಅದೂ ಒಂದು ಬಗೆಯ ಸ್ವಾರ್ಥವೆಂಬಂತೆ–ಎಂದು ಅವರಿಗೆ ಅನಿಸುತ್ತಿದೆ. ಎಂಥ ಅಪ್ಪಟ ನಿಸ್ಪೃಹ ವೃತ್ತಿಯಿದು?... ಮನುಷ್ಯನಿಗೆ ಎಂಥ ಕಾರ್ಯದಲ್ಲಿಯೂ ಜೀವಕ್ಕೆ ಅಂಟದ ಅಹಂಕಾರ ನಷ್ಟವಾಗುವುದಿಲ್ಲ. ಉಪನಿಷತ್ತೇ ಹೇಳಿದಂತೆ, 'ಆತ್ಮನಃ ತು

ಕಾಮಾಯು ' ಎಲ್ಲಿಸೂ ಪ್ರಿಯವಾಗುತ್ತದೆ. ಹಾಗೆ ತನ್ನ ಜೀವಮಾನದ ಜನ ಸೇವೆಯ ಹಿಂದೆ ಇಂಥ ಆತ್ಮಕಾಮನೆ, ಒಂದು ಸೂಕ್ಷ್ಮ ಅಹಂಭಾವನೆಯ ತೃಪ್ತಿ ಇದೆಯೆಂಬ ವಾಸನೆ ಈ ಕರ್ಮವೀರ ಕವಿಗೆ ಬಿಟ್ಟಿಲ್ಲ. ಅಂತೆಯೇ ಈ ಅತೃಪ್ತಿ! ತಾನು ಮಾಡಿದ್ದು ಏನೂ ಅಲ್ಲ. ಮಾಡಬೇಕಾದದ್ದು ಇನ್ನೂ ಇದೆ-ಎಂಬ ವಿನೀತ ಭಾವನೆ ಬೇರೆ. ಇದನ್ನು ಎಷ್ಟೋ ಕಾರ್ಯಕರ್ತರು ಒಂದು ಕೃತಕ ನಮ್ರತೆಯಿಂದ ಒಪ್ಪಿಕೊಂಡು ತಮಗೆ ತಾವೇ ಹಿಗ್ಗುವುದುಂಟು. ಆದರೆ ಇಲ್ಲಿ, ಈ ಅಪ್ರತಿಮ ಕವನದಲ್ಲಿ ಉಕ್ಕಿದ ಆತ್ಮ ನಿವೇದನೆಯಲ್ಲಿ ಕವಿಗೆ ತನ್ನ ಸೇವೆಯಿಂದ ಬಂದ ತೃಪ್ತಿಯ ಕುರಿತೇ, ಸೂಕ್ಷ್ಮ ಆದರೆ ಅಷ್ಟೇ ತೀವ್ರ ಶಂಕೆ ಎದೆಯಾಳದಲ್ಲಿ ಕೊರೆಯುತ್ತದೆ. ಈ ಸೇವೆಯೆಂಬುದು ತನ್ನ ಸ್ವಾರ್ಥದ್ದೇ ಇನ್ನೊಂದು ರೂಪವೆಂದು ಅನಿಸುತ್ತದೆ. ಈ ಅನಿಸಿಕೆ ಎಷ್ಟು ಅಪೂರ್ವವೋ ಅಷ್ಟೇ ಅಮೂಲ್ಯ!

ದಿನಕರರ ಯಾವ ಕವನದಲ್ಲಿಯೂ ಒಂದು ಜನಪರ ಪ್ರವೃತ್ತಿ ಮಿಂಚದೇ ಇರುವುದಿಲ್ಲ. ಅವರ ಪ್ರೇಮಗೀತಗಳು ಪ್ರಣಯಗಂಧಿ ಆಗಿದ್ದರೂ ಅವು ಉನ್ಮತ್ತ ಶೃಂಗಾರದಲ್ಲಿ ಪುಷ್ಪಕದಂತೆ-take off ಮಾಡುವದಿಲ್ಲ. ಈ ವಿಕಾರಕ್ಕೆ ಮದ್ದೊ ಎಂಬಂತೆ ಕವಿಯು ಅಂಥ ಸರಸ ಪ್ರಸಂಗಗಳಲ್ಲಿ ಏನಾದರೂ ಒಂದು ತುಂಟ ತಿರುವು ಒಡ್ಡಿ ವಿಮಾನವು ನೆಲಕ್ಕೆ ಕುಸಿಯುವಂತೆ ಮಾಡುತ್ತಾನೆ. ಅವರ ಅನೇಕ ಅಂಥ ಕವನಗಳು ಸೊಗಸಾಗಿದ್ದರೂ ಪ್ರಣಯೋತ್ಕಟವಾಗಿ ಮೈ ಮರೆಸುವದಿಲ್ಲ. ಕೆಲಸಲ ಅವರು ಅಂಥ ಪ್ರೇಯಸಿಯನ್ನು ' ಲಲಿತೆ ' ಎಂದು ಸಂಬೋಧಿಸುವದುಂಟು. ಆದರೆ ಈ ಲಲಿತೆ ರಕ್ತ ಮಾಂಸದ ಹೆಣ್ಣಲ್ಲ. ಕೇವಲ ಕವಿ ಕಲ್ಪನೆ. ' ಕನಸಿನ ಕಣ್ಣಿಗೆ ನಿನ್ನಾ ತುಟಿಗಳು ತೊಂಡೆಯ ಹಣ್ಣಂತೆ! ಹಣ್ಣಿನ ರಸವನು ಹೀರಲು ಅಣಜಿಯು ನಾ । ಇನ್ನೇತಕೆ ಚಿಂತೆ ? '-ಹೀಗೆ ಓಡುತ್ತದೆ ಈ ಕಲ್ಪನಾ ವಿಲಾಸ. ' ಸವಿ ನೆನಪು ' ಇಂತಹದೇ ವರ್ಣನಾ ಗೀತ. ಮುಖ್ಯ ' ಕಲ್ಪನೆಯಲಿ ಹಾರಾಡುವ ಜೀವಿಗೆ । ಯಾವುದು ಚ್ಯುತಿಯಿಲ್ಲ ! ' ಬೀದಿಯ ಸೂಳೆಯೇನು ? ಕಲ್ಲುಕುಟುಕರೇನು ? ಮುದುಕರೇನು ? ವೈಮಾನಿಕನೇನು ? ಹೂವೇನು ? ವೃಕ್ಷವೇನು ? ' ಹೃದಯದಾಳದ ಚಿಲುಮೆ । ಉಕ್ಕಿ ಹರಿಯಲದು ಮಹಿಮೆ ' ಎಲ್ಲೆಡೆಯಲ್ಲಿಯೂ ಈ ಕವಿ ನವಜೀವನದ ಬೇರನ್ನು ಕಾಣುತ್ತಾನೆ. ಹಗುರಾಗಿ ಹಾಡುತ್ತಲೆ ಕವಿಯು ಪರಾಗವಾಗಿ ಬಾಳ ತತ್ವವನ್ನೇ ಸಾರುತ್ತಾನೆ. ' ಪ್ರೇಮವೇ ಒಲವಾಗೆ ದೈವ ಭಕ್ತಿ ' ಪ್ರೇಮಿಗಳ ಸಂಸಾರ । ಜಗದ ಮೂಲಾಧಾರ; ಬ್ರಹ್ಮ ಹುಟ್ಟಿದನೇನೆ ಗಾಳಿಯಲ್ಲಿ ? ' ಪ್ರೇಮಹೃದಯದ ಜಾಣ । ದೇವರನ್ನೇ ಕಾಣ । ಪ್ರೇಮ ಒಂದೇ ಬದುಕು ಬಾಳಿನಲ್ಲಿ ! ಇಲ್ಲಿ ಕವಿ ಸೂಕ್ಷ್ಮವಾಗಿ

ಪ್ರೇಮ ಮತ್ತು ಜ್ಞಾನ, ಬಾಳು ಮತ್ತು ಬದುಕು ಇವುಗಳ ಭೇದ ರಹಸ್ಯ ಅರುಹ ಹೋಗಿದ್ದಾನೆ.

ಈ ಭಾವ ಗೀತಗಳಲ್ಲಿ ಕವಿಯು ಯಾವ ವಿಷಯವನ್ನೇ ತೆಗೆದುಕೊಳ್ಳಲಿ : ಅದರಲ್ಲಿ ಒಂದಲ್ಲ ಒಂದು 'ಅರ್ಥಾಂತರನ್ಯಾಸ' ಇದ್ದೇ ಇರುತ್ತದೆ. ವಸ್ತುವಿಗೆ ಸತ್ವ ಸತ್ವಕ್ಕೆ ತತ್ವ ತುಂಬುವದು ಇವರ ನಿತ್ಯಶೈಲಿ. ಕವಿಗೆ ಏನು ಹೇಳಬೇಕೆಂಬುದು ಗೊತ್ತು. ಹೇಗೆ ಹೇಳಬೇಕೆಂಬುದೂ ಗೊತ್ತು.

ದಿನಕರರ ಕವನಗಳ ವೀರ್ಯವತ್ತತೆ ಕನ್ನಡ ದೇಶ-ಭಾಷೆಗಳ ಕುರಿತು, ರೈತರ ಗೋಳಿನ ಬಡಜನರ ಬಾಳಿನ ಕುರಿತು, ಮೇಲ್ವರ್ಗದ ಮಹಾಜನಾಂಗಗಳ ವ್ಯಂಗ್ಯ ವಿಡಂಬನೆಗಳ ಪರಿತ ಇರಿತ ತಿವಿತಗಳ ಕುರಿತು ಅತ್ಯಂತ ಪ್ರಭಾವಿಯಾಗಿ ವಿಜೃಂಭಿಸುತ್ತದೆ. ಅವುಗಳ ಉದಾಹರಣೆಗಳನ್ನು ಈ ಪುಟ್ಟ ಪ್ರಬಂಧದಲ್ಲಿ ಎತ್ತಿ ಕೊಡುವುದು ಶಕ್ಯವಿಲ್ಲ. ಈ ಭಾವಗೀತಗಳ ಲಯ, ಅದಕ್ಕೆ ತಕ್ಕದ್ದಾದ ಛಂದೋ ವೈವಿಧ್ಯ ಅನುಪಮವಾಗಿದೆ. ಕವಿ ಕಣವಿಯವರೇ ಹೇಳುವಂತೆ, 'ಕವಿತೆಯ ವಸ್ತು, ರೂಪ ಯಾವುದೇ ಇರಲಿ ಅದನ್ನು ಸರಸವಾಗಿ ಸರಳವಾಗಿ ಮಾನವೀಯ ಭಾವನೆಯೊಂದಿಗೆ ಮುನ್ನಡೆಸುವ ನಿರೂಪಣಾ ಶಕ್ತಿ ದೇಸಾಯರ ಕಾವ್ಯಶೈಲಿಗಿದೆ. ಪ್ರಾಸಮೋಹ ಹೆಚ್ಚು ಎಂದು ಕೆಲವರಿಗೆ ಅನಿಸಬಹುದಾದರೂ ಪ್ರಾಸಗಳು ಇವರ ಕಾವ್ಯದಲ್ಲಿ ಹೇಳಿ ಕಳಿಸಿದ ಹಾಗೆ ಬರುತ್ತವೆ. ಆಡುವ ಮಾತಿನಲ್ಲಿಯೇ ಆಧುನಿಕ ಪ್ರಜ್ಞೆಯನ್ನೂ ಪ್ರಗತಿಶೀಲತೆಯನ್ನೂ ಇವರು ಮೆರೆಯಬಲ್ಲರು.'

ಇಲ್ಲಿ ನಾನು ಕವಿಯ ಕಥನ ಕವನಗಳನ್ನೂ ನೀಳಗವನಗಳನ್ನೂ ಎತ್ತಿಕೊಂಡಿಲ್ಲ. 'ಭೂದೇವಿ ವರದಿ ಮಾಡಿದ್ದು', 'ಸೂರ್ಯ', 'ಪಟ್ಟಣದ ಶ್ರಮ ಜೀವಿ', 'ಬೆಳೆ', 'ಒಂದೇಮನೆ', 'ಬಿ. ಎಂ. ಶ್ರೀಕಂಠಯ್ಯನವರು', 'ಸೇತುವೆ', 'ಮುಂಬಯಿಯ ಮನೆ', 'ನೆಹರೂ ಆಡಳಿತ'–ಇವೆಲ್ಲ ಕವಿಯ ಛಂದೋ ವೈವಿಧ್ಯದ ವೃತ್ತ ಪ್ರಭುತ್ವಕ್ಕೆ ನಿಚ್ಚಳ ಹಾಗೂ ಸಮರ್ಥ ಸಾಕ್ಷಿ. ಇವುಗಳಿಗೆಲ್ಲ ಕಲಶವಿಟ್ಟಂತೆ 'ಡೊಂಬರ ಆಟ', 'ರಕ್ತ ಬಾವುಟ' ಮತ್ತು ತೀಕ್ಷ್ಣ ವ್ಯಂಗ್ಯದ ಕಠಾರಿಯಂತಿದ್ದ 'ದೊಡ್ಡ ಒಡೆದಿರು' ಕವಿಯ ಆವೇಶ ಶಕ್ತಿಯ ಉತ್‌ಸ್ಫೂರ್ತಿ ಪ್ರೇರಣೆಯ ನಿದರ್ಶನಗಳು. ಕವಿಯ ಭಾವಬೋಧಕ ಚಿತ್ರಣದ ಉತ್ತಮ ಮಾದರಿ 'ದಾಸಾಳ'. ಅದೇ ಭಾವಾವೇಶದ ಕಾವ್ಯವು. ನಮ್ಮ ಜಿಲ್ಲೆಯ ವರ್ಣನೆ ಗಳಲ್ಲಿಯೂ, ಗಾಂಧೀಜಿ, ಸಣ್ಣಪ್ಪ ಗಾಂವಕಾರ, ಬಿ. ಎಂ. ಶ್ರೀ, ದತ್ತಣ್ಣ ಇಂಥವರ ಭಾವ ಚಿತ್ರಣದಲ್ಲಿಯೂ ಸ್ಫುಟವಾಗಿ ಒಡಮೂಡಿದೆ. ಯಾವ ವಿಷಯ,

ಆಶಯ, ಸಂದೇಶಗಳಿರಲಿ ಇವರ ರಚನೆಯ ರೀತಿ ಆರಂಭದ ಮಕ್ಕಳ ಪದ್ಯಗಳ ಜಾಡಿನಲ್ಲಿಯೇ ಓಡಿದಂತೆ ಅನಿಸುತ್ತದೆ. ಇದಕ್ಕೆ ಕಾರಣವೆಂದರೆ ಇವರಲ್ಲಿ ಜನಮನದ ಅಳತೆಗೆ ಹೊಂದಿಕೊಂಡೇ ಪರಿಸ್ಪಂದಿಸಬೇಕೆಂಬ ಹಟದ ಹಂಬಲ. ಇದು ಎರಡು ಮೂರು ನುಡಿಗಳ ಗೀತದಿಂದ ಮುನ್ನೂರು ಸಾಲುಗಳ 'ಸ್ವರ್ಗದ ಗೆಳೆಯನಿಗೆ ಬರೆದ ಪತ್ರ'ದವರೆಗೂ ಅನ್ವಯಿಸುವ ಸತ್ಯ. ಈ ನಡುವೆ 'ತೆರಿಗೆ ಅಧಿಕಾರಿಗಳಿಗೆ ಕವಿಗಳ ಮನವಿ'ಯೂ ಸೇರಿದೆ! ಕಥನ ಕವನಗಳ ದೀರ್ಘವು ಅನಿವಾರ್ಯ. ನಿಜವೆಂದರೆ ಈ ಕವಿಗೆ ಕಥನದ ಶೈಲಿ ಹೆಚ್ಚಾಗಿ ಹಿಡಿಸುತ್ತದೆ. ಅದೇ ರೀತಿ ಓದುಗನ ಗಮನವನ್ನೂ ಸೆರೆ ಹಿಡಿಯುವ ಮತ್ತು ಹಿಡಿದು ಇಟ್ಟುಕೊಳ್ಳುವ ಪ್ರಾಸ ಹಾಗೂ ಲಯಬಂಧ ವಿಶೇಷವೆನಿಸುತ್ತದೆ. ಈ ಮೂರಕ್ಕೂ ಮೂಲ ಅವರಲ್ಲಿಯ ಸಂವಹನ ಪ್ರವೃತ್ತಿಯ ಪ್ರಾಬಲ್ಯವೆನ್ನಬೇಕು. ಕೇವಲ, ತನ್ನ ತಾನೇ ಪ್ರೀತನಾಗಿ ಹಾಡಿಕೊಳ್ಳುವ ಭಾವ ಗೀತದ ಭಾವಾಭಿವ್ಯಕ್ತಿಯ ಆತ್ಮ ಸಂತೋಷವಿದಲ್ಲ. ಕವಿಯ ಎಲ್ಲ ಕವನಗಳೂ ಸುಬೋಧ ಮತ್ತು ಸರಳವಾಗಲಿಕ್ಕೆ ಈ 'ಪರಸ್ಮೈ ಪದ'ದ ಒಂದೇ ಪ್ರೇರಣೆ ಎಂದರೆ ತಪ್ಪಾಗಲಾರದು.

ಕವಿಯು ನಿಸರ್ಗ ಪ್ರಜ್ಞೆಯ ಪ್ರವೃತ್ತಿಯವನಲ್ಲ. ಗಿಡ, ಮರ, ಹೂ, ಬಾನು, ಬೆಟ್ಟಗಳ ಉಲ್ಲೇಖ ಅಲ್ಲಲ್ಲಿ ಬಂದರೂ ಅದೊಂದು ಸಾಂಪ್ರದಾಯಿಕ ಸಮಯದಂತೆ. ಇದು ತುಸು ವಿಶದವಾಗಿ ರೇಖಾಕೃತಿ ಪಡೆದಲ್ಲಿ ಕವಿಯು ಒಂದಲ್ಲ ಒಂದು ರೀತಿ ತನ್ನ ಭಾವಾನುಬಂಧದೊಂದಿಗೆ ಸ್ಪಂದಿಸುತ್ತಾನೆ. ಇದರ ಉತ್ಕೃಷ್ಟ ಉದಾಹರಣೆ 'ದಾಸಾಳ' ಇಲ್ಲಿ ದಾಸಾಳದ ಸಮಗ್ರ ತದ್ರೂಪದಂಥ ಚಿತ್ರಣ ಇದೆ. ಆದರೆ ಇದು ಹೃದ್ಯವಾದದ್ದು, ಕವಿಯೊಂದಿಗೆ ತಾದಾತ್ಮ್ಯ ಹೊಂದುವವರಿಂದ. ಕವಿಗೆ 'ದಾಸಾಳ'. ತನ್ನ ಬಾಳಿನ ಧ್ಯೇಯ-ಧೋರಣೆ-ಧಾರಣೆಗಳ ಪ್ರತಿಮೆಯಾಗಿ ತೋರುತ್ತದೆ. 'ಸಾಮಾನ್ಯ ಹೂ ಜಾತಿ। ಬೇಕಿಲ್ಲ ಪ್ರಖ್ಯಾತಿ। ದಾಸಾಳ ನನ್ನ ಜೀವನದ ರೀತಿ' 'ದಾಸಾಳವೊಳಗುಂಟು ನನ್ನ ಜೀವದ ಗುಟ್ಟು। ಹನ್ನರಡು ತಿಂಗಳೂ ಬಿರಿದು ಬಿರಿದೂ। ಇವಕ್ಕೆ ಬೇಕಾಗಿಲ್ಲ ಯಾವ ಬಿರುದೂ'- ಹೀಗೆ 'ಕೆಂಪು ದಾಸಾಳ' ಕವಿಗೆ 'ರಕ್ತದೊಳಗಿನ ನೋವು। ಸಂವೇದನೆಯ ಹೂವು।'

ಆದರೆ ಕನ್ನಡಕ್ಕಾಗಿ ಕರ್ನಾಟಕಕ್ಕಾಗಿ ಈ ನಾಡಿನ ಒಂದು ಹೆಸರಿಗಾಗಿ ಕವಿಯ ಕರುಳು ಹೇಗೆಲ್ಲ ತುಡಿಯುತ್ತದೆ; ಏನೆಲ್ಲ ನುಡಿಯುತ್ತದೆ. ಈ ಭಾವಗೀತಗಳಲ್ಲಿ ಭಾವವು ನೊರೆಯಾರದೆ ಉಕ್ಕಿ ಹರಿಯುತ್ತದೆ. ಕವಿಯ ವಾಗ್ಮಿತೆಯ ಹರಿತಧಾರೆ ಮಿರಿ ಮಿರಿ ಮಿಂಚುತ್ತದೆ! ಈ ಕೆಲವು ಸೊಲ್ಲು-ಸಾಲು ನೋಡಿರಿ,-

'ಇಡಿಯಾಗಿ ಮಡಿಯಾಗಿ ಕನ್ನಡದ ಬಾಳು,
ಭಾರತದ ಅಡಿಯಾಗಿ ಮುಡಿಯಾಗಿ ಏಳು

ಭಾವನೆಯು ಕುಡಿಯಾಗಿ
ಸೇವನೆಯು ಗುಡಿಯಾಗಿ

ಜನಮನದ ನುಡಿಯಾಗಿ ಬಾಳು ತಾಯಿ,
ಮೂಕಜನರಿಗು ಕೂಡ ಬರಲಿ ಬಾಯಿ'

'ಅರೆಯಲ್ಲಿ ಮಣ್ಣಾಗಿ
ಮರೆಯಲ್ಲಿ ಕಣ್ಣಾಗಿ
ಮರದಲ್ಲಿ ಹಣ್ಣಾಗಿ ಇಡಿಯ ನಾಡು।
ಹಿಡಿ ತುಂಬಿ ಉಡಿ ತುಂಬಿ ಬೆಳೆಯು ನೋಡು.'

'ಹರಿಜನರ ಜಡೆಯಾಗಿ
ಕರಿಜನರ ಕೊಡೆಯಾಗಿ
ಪುರಜನರ ಪಡೆಯಾಗಿ ನವ್ಯರಾಜ್ಯ
ಕಾಡೊಳಗು ಬೀಡಾಗೆ ಸಕಲ ಭಾಗ್ಯ'

'ಮುನ್ನೀರ ನೊರೆಯಂಚು
ಕೆನ್ನೀರನಲಿ ಮಿಂಚು,
ಪೊನ್ನೀರಿನಲಿ ಕುಂಚು ನಿನಗೆ ಅಮ್ಮಾ:
ಮುಂಗಾರಿ ಹಿಂಗಾರಿಯೇ ಮೈಯಬಣ್ಣ.' ('ಕನ್ನಡ ಒಂದಾಯ್ತು')

ಈ ಸಾಲುಗಳಲ್ಲಿ ಕಿಕ್ಕಿರಿದ ಪ್ರತಿ ಮಾತು ಪ್ರತಿ ಪ್ರಾಸ ಪೂರ್ತಿ ಸಾರ್ಥಕ ಮತ್ತು ಸಮರ್ಥ.

'ಕನ್ನಡಾಂಬೆಯ ಹೆಸರ' ಕುರಿತು ಕವಿಯು ಈ ಉದ್ಗಾರ ಹೇಗೆ ಉಗ್ಗಡಿಸಿದೆ ನೋಡಿ,-

ನೋಡವ್ವ ನೋಡವ್ವ
ನೀನಾದೆ ಹೊಸದೆವ್ವ!
ನಿನ್ನ ಹೆಸರೇ ನಮಗೆ ಬೇಡವಂತೆ!

ಗತವೈಭವದ ತಾಯಿ
ಹಿತತತ್ವಗಳ ಮಾಯಿ
ನಿನಗಿಲ್ಲವೇ ಬಾಯಿ ? ಏನು ಕಂತೆ ! '

' ನಿಜವನ್ನೇ ಮರೆಮಾಚಿ
ತಾಯಿ ಹೆಸರಿಗೆ ನಾಚಿ
ರಾಜ್ಯಕಟ್ಟುವುದೇಕೆ ನಾವು ತಾಯಿ ?
ನಮಗೆ ಶಾಪವಿದೇಕೆ ?
ವಿಧಿಯ ಕೋಪವಿದೇಕೆ ?
ಮುಂದೆ ಕೇಳಲು ನನಗೆ ಬರದು ಬಾಯಿ '

ಈ ಆವೇಶ ಈ ಚೈತನ್ಯದ ಉನ್ಮೇಷ ನೈಜ ಕಾವ್ಯಕ್ಕೆ ಅಲಂಕಾರ ! ಏಕೀಕೃತ ಕರ್ನಾಟಕದ ಬಗ್ಗೆ ಈ ವಾಗ್ಮಿತೆ ಕೇಳಿರಿ !–

' ಬರಿಯ ಬಣ್ಣಗಳ ನಕ್ಷೆಯಲ್ಲಪೊ
ನಮ್ಮ ಭವ್ಯ ನಾಡು
ಎರಡು ಕೋಟಿಗಳ ಹೃದಯದಲ್ಲಿಯೇ
ಉದಯವಾಯ್ತು ನೋಡು '.

ಅಂದರೆ ಇಲ್ಲಿ ಜನ ಎರಡು ಕೋಟಿ, ಆದರೆ ಹೃದಯ ಮಾತ್ರ ಒಂದೇ. ಕವನದ ಮೊನೆಯ (ಕೊನೆಯ) ಸೊಲ್ಲು ಕೇಳಿ,–

ಕರಿಯ ಕಲ್ಲುಗಳು ಕೂಡ ಕೂಡಿದವು
ಗುಡಿಯ ಕಳಸಕಾಗಿ
ನರನ ಹೃದಯಗಳು ಒಂದು ಗೂಡವೇ
ಮಾತೃ ಭೂಮಿಗಾಗಿ

ಇಂಥ ಕವನಗಳಲ್ಲಿಯ ಸಮರ್ಪಕ ಶಬ್ದಗಳ ಪ್ರಯೋಗವು ತುಂಬ ಔಚಿತ್ಯ ಪೂರ್ಣವಾಗಿವೆ. ಗುಡಿಯ ಕಳಸಕಟ್ಟಲು ಕರಿಯ ಕಲ್ಲುಗಳೂ ಕೂಡುತ್ತವೆ. ಅಂದಾಗ ನಮ್ಮ ಜನಮನಗಳೆಂಬ ಕಲ್ಲೆದೆಗಳು ಕೂಡಲಾರವೇ ? ಎಂಬುದು ಕವಿಯ ಆ ವೇಗದ ಉದ್ಗಾರ !

ಕವಿಯ ಪ್ರಖರ ವ್ಯಂಗ್ಯೋಕ್ತಿಗೆ ' ದೊಡ್ಡ ಒಡೆದಿರು ' ಒಂದು ಕುಶಾಗ್ರ, ಏಕಾಗ್ರ ಉದಾಹರಣೆ ಮಾತ್ರವಲ್ಲ, ಇದೊಂದು ಜೀವಂತ ಅಲಗಿನಂಥ ಸಮಗ್ರ ವ್ಯಕ್ತಿ ಚಿತ್ರ. ಈ ಕವನ ಮೊದಲು ಪ್ರಕಟವಾದದ್ದು ಹಾಲಕ್ಕಿ ಒಕ್ಕಲ ಗುಮಟೆಯ ಅಬ್ಬರದ ದನಿಯೊಂದಿಗೆ. ನೂರು ಭಾಷಣಗಳಿಗಿಂತ ಈ ಉದ್ದ ಹರಿತ ಕತ್ತಿಯಲಗಿನಂಥ ಕವನ ಕೇಳಿದ ಮಾತ್ರಕ್ಕೆ ಯಾರನ್ನೂ ತಿವಿದು ಎಬ್ಬಿಸುವಂತಿತ್ತು. ದಿನಬೆಳಗಾಗುವುದರಲ್ಲಿ ಇದು ಕಿವಿಯಿಂದ ಬಾಯಿಗೆ, ಬಾಯಿಂದ ಕಿವಿಗೆ ಲಾವಾರಸದಂತೆ ಹರಿದು ಮುಂದೆ ಅಂಕೋಲೆಯೇ (ರೈತರ ಚಳವಳಿಯೇ) ಜಾಗೃತವಾಯಿತು. ' ಕೆಂಪು ಬಾವುಟ 'ದ ಅಬ್ಬರಕ್ಕೆ ಸಂವಾದಿಯಾಗಿ ಈ ' ಕೇಶವ ಕಾಮ್ತಿ 'ಯ ಕರ್ಮಕಥೆ ಒಕ್ಕಲ, ಕೂಲಿ ಕೆಲಸಗಾರರ ಮೈ ನಿಮಿರಿಸಿ ಅವರನ್ನು ಒಡಿದೆಬ್ಬಿಸಿತು. ಇದು ಐತಿಹಾಸಿಕ ಸತ್ಯ, ನೊಂದ ಎದೆಗಳಿಗೆ ಬಾಯಿಕೊಟ್ಟು ಮಿಡಿಯಬಲ್ಲ ಈ ಕವಿ ಏನು ಪವಾಡ ಮಾಡಬಲ್ಲನೆಂಬುದಕ್ಕೆ ಇದೊಂದು ಮಹಾಮಾದರಿಯೇ ಆಯಿತು.

ಇಲ್ಲಿ ಒಂದು ಪ್ರಸಂಗ ನೆನಪಾಗುತ್ತದೆ. ವ್ಹಿಕ್ಟರ್ ಹ್ಯೂಗೋ ಫ್ರೆಂಚ್‌ರಾಜ. ಕ್ರಾಂತಿಯ ನಂತರವೇ ಹುಟ್ಟಿ ಪ್ರಸಿದ್ಧನಾದ ಮಹಾ ಲೇಖಕ; ಕವಿ ಮತ್ತು ಕಾದಂಬರಿಕಾರ. ಅವನನ್ನು ಒಬ್ಬ ಮಿತ್ರನೋ ಟೀಕಾಕಾರನೊ ಮೂದಲಿಸಿ ಹೇಳಿದ : ' ನೀವು ಕವಿಗಳು ಬರಿ ಮೋಡಗಳಲ್ಲಿ ತೇಲಾಡುವವರು ! ' ಅದಕ್ಕೆ ಹ್ಯೂಗೋ ಉತ್ತರ ಕೊಟ್ಟ : ' ಹೌದು ಸಿಡಿಲೂ ಮೋಡಗಳಲ್ಲಿಯೇ ತೇಲಾಡುತ್ತದೆ ! ' ದಿನಕರರ ಇಂಥ ಕವನ ಈ ಪರಿಯ ಪರಿಣಾಮ ಉಂಟು ಮಾಡಿತು. ಈ ದೊಡ್ಡ ಒಡೆದಿರರ ತುಸು ಪರಿಚಯ ಹೀಗೆ–

' ಕೇಶವ ಕಾಮ್ತಿ । ಕೇಳೋಸಂಗ್ತಿ । ಊರಿಗೆ ದೊಡ್ಡ ಒಡೆಯ । ದೆವ್ವಕ್ಕಿಂತಲೂ ಕಡೆಯಾ । '–ಈ ಪಲ್ಲದ ಒಂದು ಏಟೇ ಕೊನೆಯ ಕೊಂಡಿಯಲ್ಲಿ ಬೀಳುತ್ತದೆ. ಹಾಗೆಯೇ ಎರಡನೆಯ ಸೊಲ್ಲಿನ ಕೊನೆ, ಇನ್ನೊಂದು ' ಕೂಪಿ 'ನ ವರಸೆ,– ' ರೈತರ ತಲೆಯಮ ಬೋಳ್ಸಿ । ಕಾಮ್ತಿಯು ಆದನು ಕೆಲ್ಸಿ ' (ನಮ್ಮಲ್ಲಿ ' ಕೆಲ್ಸಿ ' ಅಂದರೆ ಹಜಾಮ. ಇದು ಅಪ್ಪಟ ಆಡು ಮಾತಿನ ಹೆಸರು. ಇಂಥ ಆಡು ನುಡಿಯಲ್ಲಿ ನಡೆಯುವ ನಾಣ್ಯಗಳನ್ನು ಎತ್ತಿ ಚಲಾಯಿಸುವದರಲ್ಲಿ ಈ ಜನಸೇವಕ ಕವಿ ನಿಸ್ಸೀಮ !)

ಈ ಕಾಮ್ತಿಯ ಅಂಗಡಿ ಹೇಗೆ ?... ' ಕೇಶವ ಕಾಮ್ತಿಯ ಅಂಗ್ಡಿ । ಯಾರಿಗೂ ಮೊರೆಯದ ಚಂಗ್ಡಿ । ರಕ್ಕಡಿ ತೂಕಾ ಸುಳ್ಳು । ಮಾರುವ ಭತ್ತ ಪೊಳ್ಳು. '

ಈತ ಹೊಟ್ಟೆ ಹೊರೆಯುವುದಾದರೂ ಹೇಗೆ?... 'ತುಟ್ಟಿ ಮೀನಿಗೆ ನಂಬಾ। ಶೆಟ್ಲೀಪುಡಿಯನೆ ತಿಂಬಾ। ಪಾಯ್ಸಕೆ ಇಲ್ಲಾ ಬೆಲ್ಲಾ। ಉಪ್ಪಿಗೂ ಮೂರ್ ಕಾಸ್ ಕಳ್ಳ।' ಹೇಗಿದೆ ಆ ಜಿಪುಣಾಗ್ರೇಸರನ ಈ ನಖ ಚಿತ್ರ! (Thumbnail impression) ಇದು ಕಾವ್ಯದ ತಿಳಿ ಮುಗಿಲುಗಳಲ್ಲಿ ತೇಲಾಡುವ ಕವಿಯು ಪಳಗಿಸುವ ಕೋಲ್ಮಿಂಚು. ಕವಿಯು 'ಕೌದಿ'ಯನ್ನು ಪ್ರದೀರ್ಘವಾಗಿ ಬಣ್ಣಿಸಿದ್ದಾರೆ. ಕೌದಿ ಯಾರಿಗೆ ಗೊತ್ತಿಲ್ಲ? ಯಾರೂ ಹೊಗಳುವುದಿಲ್ಲ. ಆದರೆ ಯಾರೂ ಹೊದ್ದವೆ ಬಿಡುವುದಿಲ್ಲ. ಆದರೆ ನಮ್ಮ ಯಾವ ಕವಿಗೂ ಅದು ಕಾವ್ಯಕ್ಕೆ ಸ್ಫೂರ್ತಿ ನೀಡಿಲ್ಲ. ರವಿ ಕಾಣದಿದ್ದನ್ನು ಕವಿ ಕಾಣುವನಂತೆ. ಆದರೆ ಕವಿ ಯಾರೂ ಕೌದಿಯನ್ನು ಕಾವ್ಯದ ಕಣ್ಣಿಂದ ಕಂಡಿಲ್ಲ. ಹಾಗೆ ನೋಡಿದರೆ, ದಶಕಗಳ ಹಿಂದೆ ನಾನು ಅಧ್ಯಾಪಕನಾಗಿದ್ದ ಬಂಕಿಕೊಡ್ಲಿನ ಆನಂದಾಶ್ರಮ ಹೈಸ್ಕೂಲಿನ ಒಂದು ವಾರ್ಷಿಕೋತ್ಸವಕ್ಕೆ–ಆಗತಾನೆ ಉದಯಕ್ಕೆ ಬಂದ ನವ್ಯಕಾವ್ಯದ ಹೊಸ ತಾರೆ ಎಂ. ಗೋಪಾಲಕೃಷ್ಣ ಅಡಿಗರನ್ನು ಮುಖ್ಯ ಅತಿಥಿಯಾಗಿ ಕರೆದಿದ್ದೆವು. ಆಗ ಅವರಿಗೆ ನಮ್ಮಲಿಯ, ಶುದ್ಧ ಗಾಂಧೀವಾದಿ ಸ್ವಾತಂತ್ರ್ಯ ಯೋಧರಾಗಿದ್ದ ಶಿಕ್ಷಕ ಶ್ರೀ ಗೋಪಾಲಕೃಷ್ಣ ಹೆಗಡೆಯವರು ತಾವೇ ತಯಾರಿಸಿದ ಒಂದು ಒಳ್ಳೆಯ 'ಕೌದಿ'ಯನ್ನು ಅರ್ಪಿಸಿ, ದಿನಕರರ ಈ ಕವಿತೆಯನ್ನು ಓದಿದರು. ಆದರೆ ಕವಿವರ್ಯ ಅಡಿಗರು ಈ ಕಾಣಿಕೆಯಿಂದ ವಿಶೇಷ ಸಂತುಷ್ಟರಾದಂತೆ ತೋರಲಿಲ್ಲ. ಅವರ ಮಾತುಗಳಲ್ಲಿ ಅಸಂತೋಷವೂ ವ್ಯಕ್ತವಾಯಿತು.

'ಚಿಂದಿಗಳಿಷ್ಟೇ। ಹೊಟ್ಟೆಯ ಒಳಗೆ। ಒಕ್ಕಟ್ಟಿನ ಶ। ಕ್ತಿಯು ಮೈಯೊಳಗೆ ಚಿಂದಿಗೆ-ಚಿಂದಿಯು ಜೋಡಿಸೆ ನಿನ್ನಾ। ಆಕೃತಿಯಾಯಿತು। ಸುಕೃತದ ಹುಟ್ಟು' (ಇಲ್ಲಿ ಕವಿ ಸುಕೃತದ ವ್ಯಾಖ್ಯೆಯನ್ನು ತನ್ನದೇ ಆದ ಅರ್ಥದಲ್ಲಿ ನೀಡಿದ್ದಾನೆ. 'ಪರೋಪಕಾರಂ ಪುಣ್ಯಾಯ!') 'ಧರೆಯಲಿ ನೀ। ನುಪಕರಾದ ಗುಟ್ಟು.' 'ಜೀವನ ನಿನ್ನದು ಪಾವನವಾಯ್ತು। ಸೇವಾಧರ್ಮಕೆ। ಅರ್ಪಣವಾಯ್ತು.' ಆದ್ದರಿಂದ ಕೌದಿಯಿಂದ ಕವಿ ನೀಡುವ ಸಂದೇಶ–'ನಿನ್ನಗೀತವು; ನನ್ನಾವೇಶ। ಮಾನವ ಜಾತಿಗೆ। ನವಸಂದೇಶ!'

ಕವಿ ಜನ ಸೇವಕ. ಆಜೀವ ಭಾರತ ಸೇವಕನಾಗಿ ಬದುಕಿ ದುಡಿದ ಕರ್ಮಯೋಗಿ. ಹಾಲಕ್ಕಿ ಒಕ್ಕಲ ಕಚ್ಚೆಯಂತೆ ಈ ಕೌದಿಯೂ ಕವಿಯ ಪತಾಕೆ ಅನಿಸಿದರೆ ಸೋಜಿಗವಿಲ್ಲ. 'ಹೊಟ್ಟೆಯೊಳಗಿಂ। ದೇನೋ ಒಂದು। ಚಿಂದಿ ಪತಾಕೆಯು। ಹೊರಗೇ ಬಂದು। ಕರುಳಿನ ಪರಿಯಲಿ। ಕಾಣುವುದುಂಟು। ಮುಪ್ಪಿನ ಕಾಲದ ಭಾಗ್ಯದ ಗಂಟು!'

ಹೀಗೆ ದಿನಕರರ ಪ್ರತಿಯೊಂದು ಕವನವೂ ದಿನಕರನ ಕಿರಣದಂತೆ. ಅದಕ್ಕೆ ಬೆಡಗಿದೆ, ಬಣ್ಣ ಇದೆ, ಶಕ್ತಿಯಿದೆ. ಒಂದೊಂದು 'ಭಾವಬೋಧಕಾವ್ಯಾಯು' ಬಾಳಿನ ವ್ಯಾಕರಣದ ಒಂದು ಅವಿಭಾಜ್ಯ ಅಂಗ ! ಸಾಮಾಜಿಕ ಪ್ರಜ್ಞೆ ವರ್ತಮಾನದ ದುರ್ದಶೆಯ ಬಗೆಗೆ ತೀವ್ರ ಉದ್ವೇಗ, ಭವಿಷ್ಯದ ಬಗೆಗೆ ಉಜ್ವಲ ಆಶಾವಾದ. ಸಹನೆ, ಸಾಹಸ, ಸಹಕಾರಗಳಿಂದ ಸಾಮ್ಯ-ಸಮಾಜವಾದಗಳನ್ನು ಸ್ಥಾಪಿಸುವ ದುರ್ದಮ್ಯ ಅಭೀಪ್ಸೆ. ಇದನ್ನೂ ಅವಗುಂಠನಗೊಳಿಸಿದ ಒಪ್ಪು, ಒನಪು-ಇವು ಈ ಜನಪರ ಕವಿಯ ಜನಪದ ದನಿಯ ಅಂತರ್ವಾಣಿ, ಅಂತಃಪ್ರೇರಣೆ. ಈ ಕಾವ್ಯ ಒಂದು ಉತ್ತೇಜಕ ಸಂಸ್ಕಾರ. ಉನ್ಮಾದದ ಆಸವವಲ್ಲ. ಹಿಮನದಿಯಲ್ಲಿ ಅಭ್ಯಂಗ ಸ್ನಾನ ಮಾಡಿದಂತೆ !

ಕವಿ ದಿನಕರರು ವ್ಯಾಪಸಾಯಿಕ ಅಥವಾ ಶುದ್ಧ ಕಲಾಪಾಸಕ ಕವಿಗಳಲ್ಲ. ಕಾವ್ಯ ಅವರ ಕರ್ತೃತ್ವದ ಒಂದು ಅಲಂಕಾರ. ವ್ಯಕ್ತಿತ್ವದ ಒಂದು ಸಿಂಗಾರ. ಅದು ಅವರಿಗೆ ಒಂದು ಆಯುಧ. ಸಮ್ಮೋಹನಾಸ್ತ್ರ. ಆದರೆ ಮೋಹಿಸಿ ಮೈಮರೆಯಿಸುವ ಮೆಚ್ಚುಮದ್ದಲ್ಲ. ಮನಗಾಣಿಸುವ, ತಿಳಿಗೊಳಿಸುವ, ತಿಳುವಳಿಕೆ ತುಂಬುವ ಮಿತ್ರ ಸಮ್ಮಿತಿ. ಕವನಗಾರಿಕೆ ಅವರ ಕಾರ್ಯದ ಕೈಗಾರಿಕೆಯ ಕೀಲಗಳನ್ನು ಸಡಿಲಿಸುವ ಸುಗಮಗೊಳಿಸುವ ಕೀಲೆಣ್ಣೆ (Lubrication). ಈ ಮಿತಿಯನ್ನು ನಾವು ಮರೆಯಬಾರದು.

ಆದರೆ ಹೀಗಿದ್ದು ಅವರ ನಿಷ್ಕಪಟ ಕವಿತ್ವದ ಅನೇಕ ಮಿಂಚಿದ ಕಿಡಿಗಳನ್ನು ಸೆಳಕುಗಳನ್ನು ನಾವು ಎತ್ತಿತೋರಿಸಬಹುದು. ಅಂಥ ಕೆಲವನ್ನು ಇಲ್ಲಿ ಮಾದರಿಗೆ ಕೊಡಬೇಕೆನಿಸುತ್ತದೆ,- ಟೀಕೆ ಟಿಪ್ಪಣಿಗಳಿಲ್ಲದೆ. ಏಕೆಂದರೆ Like a jok poetry is to be caught and not taught, you see !

ಮೋಡದಲ್ಲಿ ಮಾಯವಾದ
ಮುಗಿಲ ಮೂವನು
ಮಿಂಚುಗೋಲಿನಿಂದ ಮುಡುಕಿ
ನಿನ್ನಲಿಡುವೆನು ! (ಕಾಣಿಕೆ)

ಚಿಕ್ಕದಾದರು ಬೆರಳು
ಮುಂಜಾವದಲಿ ನೆರಳು
ಬೆರಳಿಗಿಂತಲು ಬಹಳ ದೀರ್ಘವಂತೆ ! (ನೆರಳು)

ಲೋಪ ಮಾರ್ಗವೇ ದೇಶದ ನಾಡಿ,
ನಾಡಿಯೊಳಗೆ ನೀ ಚಲಿಸುವ ಗಾಡಿ
ನಲಿವೆನು ತವ ಕವನವ ಹಾಡಿ (ಉಗಿಬಂಡಿ)

ಪುಣ್ಯ ಗಂಗಾ ನದಿಯು ಕೊಳಕು ನೀರನು ಸೋಸಿ
ಮೇಲೆ ನಂದಾದೀಪ ತೇಲಿಸಿಟ್ಟೆ.
ನಿನ್ನ ನಂದಾದೀಪ ಇಂದಿಗೂ ತೇಲುತಿದೆ
ಆಕಾಶದಲಿ ತಾನು ತಾರೆಯಾಗಿ
(ರಾಜಾರಾಮ ಮೋಹನರಾಯನಿಗೆ)

ಕೆರವೇ, ನಾವ್ ನೆಲತಾಯಲಿ ಹುಟ್ಟಿ
ಆಕೆಯು ಚಲುವಾದೊಡಲನೆ ಮುಟ್ಟಿ
ಹೊಲಸಿನ ಸ್ಥಳದಲಿ ನಿನ್ನನು ಮೆಟ್ಟಿ
ಕೆಟ್ಟೆವು ನರರಾಗಿ ! (ಕಾಲಿನ ಜೋಡು)

ಹುಟ್ಟುವುದಾದರೆ
ಇನ್ನೂ ಇನ್ನೂ
'ಉತ್ತರ ಕನ್ನಡ
ದಲ್ಲೆ' ಅನ್ನು ! (ಉತ್ತರ ಕನ್ನಡ)

ಕಸಗುಡಿಸುವ ಚಂಡಾಲನು ಭ್ರಷ್ಟ,
ಮುಟ್ಟಲು, ಗಳಿಸಿದ ಪುಣ್ಯವು ನಷ್ಟ,
ಅನ್ನುವ ಧರ್ಮಶಿರೋಮಣಿ ಕೇಳ್ಗೆ,
ಮುಟ್ಟದೆ ಇರುವ ಜಗವೇ ಭ್ರಷ್ಟ !

ಲೋಕಪಾಲಕರು ಯಾರಿವರು ?
ಯಲ್ಲಮ್ಮನ ಪರಿಪೂಜಕರು,
ಕಸಬರಿಗೆಯು ವರ ಪಂಚಮರು
ಪುಣ್ಯಪುರಾತನ ಪೂರ್ವಜರು. (ಕಸಗುಡಿಸುವ ಪಂಚಮರು)

'ಬಡತನವೆಂಬುದು ಬಡವರ ಮುಕ್ತಿ' (ಭಿಕ್ಷುಕರು)

ಕವಿಗಳಿಗೆಲ್ಲಾ ಹಿಡಿದಿದೆ ಹುಚ್ಚು,
ಅವರಿಗೆ ನಿನ್ನಲಿ ಎಲ್ಲಿಯ ಮೆಚ್ಚು ?
ಬೆಳಂದಿಗಳಲೇ ಅವರಿಗೆ ನಚ್ಚು
ಬುರುಬುರು ಬುರುಬುರು ನೊರೆಯಣ್ಣಾ,
ಕವಿಗಳ ಕಣ್ಣಿಗೆ ನೀ ಸಣ್ಣ (ಸಾಬೂನು)

ತಾಯಿಯು ದೇವರಿಗಿಂತಲೂ ಮೇಲು
ದೇವರ ಮೊಲೆಯಲಿ ದೊರೆವುದೆ ಹಾಲು ? (ತಾಯಿ)

ಬಡವರ ಉರದಲಿ ಹಸಿವೆಯು ಸುಣ್ಣ,
ಉರಿದೂ ಉರಿದೂ ಉರಿದೂ ಹುಣ್ಣ;
ಹುಣ್ಣಿನ ನೆತ್ತರು ಧ್ವಜಕದು ಬಣ್ಣ !
ಕೆಂಪು ಬಾವುಟವು ರೈತನದೋ (ಕೆಂಪು ಬಾವುಟ)

ದೇಹವೆಂಬುದು ನೋಡು ಕುತ್ತಗಳ ಗಾಯ
ಬರಿಯ * ತುತ್ತಿನ ಚೀಲವಲ್ಲ ಮಾರಾಯಾ
ಹಗಲಿರುಳು ನೋಯುವುದು ಮೈ ಬೆನ್ನುಮೂಳೆ,
ಬಡತನದ ಸೂಳೆ ನಾ ಕಡೆತನಕ ಹಾಳೇ ? (ಬೀದಿಯ ಸೂಳೆ)

ಜೇನ್ನೊಣಕಿದ್ದರು ಸತತೋದ್ಯೋಗವು
ನಮಗೆ ನಿರುದ್ಯೋಗ
ನಿರುದ್ಯೋಗವೇ ನವಶತಮಾನದ
ಪ್ರಗತಿಯೆಂಬ ರೋಗ. (ನಿರುದ್ಯೋಗಿಗಳ ಹಾಡು)

ಒಳಗೂ ಹೊರಗೂ । ಸೆರಗಲಿ ನೆರಗು
ಒಳಗೊಂದಿಲ್ಲಾ । ಹೊರಗೊಂದಿಲ್ಲಾ
ವಂಚನೆಯೆಂಬುದು । ನಿನ್ನೊಳಗಿಲ್ಲ (ನೀರುಳ್ಳಿಗೆ)

ಗಾಳಿಗೆಲ್ಲಿದೆ ಗೂಡು ? ಗಡಿನಾಡು ? ಸುಡುಗಾಡು ?
ಅಖಿಲ ಭೂ ಮಂಡಲವೆ ಅನಿಲ ರಾಜ್ಯ,
ಸೃಷ್ಟಿಕರ್ತನ ಗೀತ ಮಾರುತನ ಸಂಗೀತ,
ಅದಕ್ಕಿಲ್ಲ ನಾಡನುಡಿ, ಹಾಳು ವ್ಯಾಜ್ಯ.

---

* ಇದು ಬೇಂದ್ರೆಯವರ 'ತುತ್ತಿನ ಚೀಲ'ದ ಮೇಲೆ ಟಿಪ್ಪಣೆ !

ಮಾರುತನ ಸ್ವಾತಂತ್ರ್ಯ, ಸಂತೃಪ್ತಿ, ಸಂಪ್ರೀತಿ
ಮಾನವನಿಗೂ ಇರಲಿ ಕೊನೆಯುವರೆಗೂ,
ಗಾಳಿ ಮಕ್ಕಳು ನಾವು ಅಳು ಮಕ್ಕಳು ಅಲ್ಲ;
ಬಾಳುವೆವು ಚಿರಕಾಲ ಮರಣದೊಳಗೂ (ಗಾಳಿ)

ದಿನಕರರ ಕಾವ್ಯದ ಗೆರೆಬಣ್ಣ ಒರೆಗೆ ಹಚ್ಚಿ ನೋಡಲು ಇಷ್ಟು ಸ್ಯಾಂಪಲ್ಲುಗಳು ಸಾಕು. ಅವರೇ ತಮ್ಮ ಪ್ರಸ್ತಾವನೆಯಲ್ಲಿ ಹೇಳಿದಂತೆ ಅಧುನಿಕ ಕವಿಗೆ ಮುಖ್ಯ ಗಂಡಾಂತರ ಇರುವದು ಕಾವ್ಯದ ರೂಪದ ಬಗೆಗೆ ತೋರುವ ಉಪೇಕ್ಷೆ ಅಲ್ಲ, ಅದು ಕಾವ್ಯದ ವಾಗ್ಧೋರಣೆಯನ್ನು ಆಯುವ, ಬಳಸುವದರ ಕುರಿತು ಗುರುತ್ವ ಇವುಗಳ ಸರಸ ಸಮನ್ವಯವೂ ಕವಿಗೆ ಸಾಧಿಸಿದೆ. ತಿಳಿಯಾದ ವಿನೋದ ಅದನ್ನು ಹೊದ್ದುಕೊಂಡ ಹರಿತವಾದ ವ್ಯಂಗ್ಯ ದಿನಕರರ ಕಾವ್ಯದ ಪ್ರಖರತೆಯನ್ನು ಶಮನಗೊಳಿಸುತ್ತದೆ. ಈ ಕವಿ ಪರಿಚಿತ ವಸ್ತು ವಿಷಯುಗಳನ್ನೇ ಹೊಸ ಕೋನ ದಿಂದ ನೋಡಿ ಕೌತುಕ ಪಡುವಂತೆ ನಮ್ಮನ್ನು ಪ್ರೇರಿಸುತ್ತಾನೆ. ಇದರಿಂದ ನಮಗೆ ಹೊಸ ಅರ್ಥವೇ ಬೋಧವಾಗುತ್ತದೆ.

ಇಲ್ಲಿ ನೆನಪಿಡಬೇಕಾದ ಅಂಶವೆಂದರೆ ಕವಿಯ ಭಾಷೆ ನಾಡಿ ನುಣ್ಣಗಿದ್ದರೂ ಅದು ವಿನೇನೂ ಕೃತ್ರಿಮ ಕಸಬಿನದಲ್ಲ. ಇದು ಪಾರದರ್ಶಕ ಭಾಷೆ. ಕವನ ಓದುವಾಗ ವಸ್ತುವಿಷಯುಗಳದೇ ನೇರ ಬೋಧವಾಗುತ್ತದೆ. ಅದನ್ನು ತೋರಿಸುವ ಭಾಷೆಯ ಬೆಳಕು ಕಣ್ಣು ಕುಕ್ಕುವದಿಲ್ಲ.

ಬೆಳಕು ಎಷ್ಟೇ ಪ್ರಖರವಿದ್ದರೂ ತಾನು ಸ್ವತಃ ಅದೃಶ್ಯ. ಅದು ಬಿದ್ದಲ್ಲಿ ವಸ್ತು ಗಳನ್ನು ಬೆಳಗಿಸಿ ಕಾಣಿಸುತ್ತದೆ. ಹಾಗೇ ತನ್ನ ಶಕ್ತಿಯನ್ನೂ ವ್ಯಕ್ತ ಮಾಡುತ್ತದೆ. ಈ ಕವಿಯ ಕಾವ್ಯದ ಭಾಷೆಯೂ ಹಾಗೆಯೇ. ತಾನು ತೀರ ಪಾರದರ್ಶಕ. ತನ್ನ ಬೆಡಗಿನಿಂದ ಸಂಭ್ರಮ ವಿಭ್ರಮಗಳಿಂದ ಓದುಗರ ಚಿತ್ತಹರಣ ಮಾಡುವುದಿಲ್ಲ. ಅದು ನೇರ ಕಾವ್ಯ ವಸ್ತುವಿನ ಮೇಲೆ ಭಾವ ದ್ರವ್ಯದ ಮೇಲೆ ತನ್ನ ಕಿರಣಗಳನ್ನು ಚೆಲ್ಲಿ ಅವನ್ನು ಕಂಗೊಳಿಸುವಂತೆ ದೀಪಿಸುತ್ತದೆ. ಟಿ. ಎಸ್. ಇಲಿಯಟ್ ಅನ್ನುವಂತೆ ‘ Poetry is so transparant that we should not see the poetry but that which we are meant to see through the poetry. Poetry is so transparant that in reading it we are intent on what the poem points at and not on poetry. That seems to me to be the thing

to tr for.' ಮತ್ತು ನಮ್ಮ ಕವಿ ದಿನಕರರು ಈ ಯತ್ನದಲ್ಲಿ ಯಶಸ್ಸು ಪಡೆದಿದ್ದಾರೆ. ಇದುವೆ ಕಾಲಿದಾಸ ಬೇಡಿದ 'ವಾಗರ್ಥ ಪ್ರತಿಪತ್ತಿ'

ಇಂಥ ಕಾವ್ಯದ ಕೆಲವು ಸಲ್ಲಕ್ಷಣಗಳು ಇಂತಿವೆ: ಕಟುತ್ವ, ಖಾರತನ (Astriegency) ಪರಿತಕ್ಕಿಂತ ಭಾರದ ಒತ್ತಡ (Bluntness), ಹೊಸ ರೀತಿಯ ವ್ಯಂಗ್ಯ (Irony), ಮಾತಿನ ಗ್ರಾಮೀಣತೆ, ಜನರ ಭಾಷೆ (Vernacularquality) ಮತ್ತು ಚೆದರಿದ ಭಾವಮಯತೆ. (Emotion at large) ಇದೆಲ್ಲ ಶಿಷ್ಟವಾಗಿ ಈ ಕವನಗಳಲ್ಲಿ ಕಾಣಿಸಿಕೊಂಡಿದೆ. ಶಬ್ದಗಳ ಪದಸಂಯೋಜನೆಗಳ ಆಯ್ಕೆಯಲ್ಲಿ ಸಂಕ್ಷೇಪದ ಮಿತವ್ಯಯ ಕಾಣುತ್ತದೆ. ಪದ್ಯಗಳ ಲಯಗಾರಿಕೆಯೂ ಓದುಗನಿಗೆ ಎದೆಬಿಸಿ ಮಾಡುವಂತಿದೆ. ಕಚ್ಚೆ, ಕುಂಡೆ, ರಂಡೆ, ಕೆಲ್ಸಿ, ಚುಂಗ್ಡಿ, ಕೊರಸಕ್ಕಿ, ಪಳದಿ–ಇಂಥ ಅನೇಕ ಜನರ ನಾಲಿಗೆಯಿಂದ ಹೆಕ್ಕಿದ ಶಬ್ದಗಳು. ಮತ್ತು ಮೆಣಸು ಕೋದಿಂತೆ ಕವಿಯ ಸಾಲುಗಳಲ್ಲಿ ಹವಣವಾಗಿಯೇ ಸೇರಿಕೊಂಡು ಒಂದು ಹದವಾಗಿ ಮಿಡಿಯುತ್ತವೆ. ಇಂಥ ಶಬ್ದ ಸಂಕರದಿಂದ ಶೈಲಿಗೆ ವಿಲಕ್ಷಣ ಸೊಬಗಿನ ಸೊಗಡು ಸೂಸುತ್ತದೆ.

ವರ್ಣನೆಗಳಲ್ಲಿ ಕವಿಯು ವೀಕ್ಷಣೀಯ ವಾಸ್ತವತೆಯ (Visual reality) ಹೊಳಪು ಕುಗ್ಗಿಸುವದಿಲ್ಲ. –'ಹೊಳೆಯುವ ಕರಿಕಂತ್ರಾಟುಗಳು' 'ಬಾಳ ಕಂಬಿಯ ಮೇಲೆ ಗರಗರ ಟ್ರಾಮು' 'ಶುಭ್ರ ಕೀರ್ತಿಯ ನೂಲು। ನಿನ್ನ ತಲೆಯ ರುಮಾಲು' 'ಮಣ ಮಣ ಮಂತ್ರಾ, ದೇವರ ತಂತ್ರಾ' 'ಕಾರಿನಲಿ ಬಾಟ್ಲಿ ಕೂಜೆ' 'ದೇವಪಾನದ ಜತೆಗೆ ನೆಲಗಡ್ಲೆ' 'ಬೂಟು ಚಪ್ಪಲಿಗಳನು ಸ್ವರ್ಗದೊಳಗೊಯ್ಯಲಿಕೆ। ಪರ್ಮಿಟ್ಟು ಸಿಗಲಾರದೆ' 'ಕುರಿಗಳ ಕಾಯುವ ಕುರುಬನ ಕಾಣಲು। ಕಂಗಳಿಗವನೇ ಗೋಪಿಯ ಕಂದ' ಇಂಥ ಚಿತ್ರಮಯ ಬಣ್ಣನೆಗಳು ನೂರಾರು ಇದಕ್ಕೆ ನಿದರ್ಶನ.

ಯೇಟ್ಸ ಕವಿಯ ಒಂದು ಮಾತು ಇದೆ: 'The poet and peasant could come together. But the grocer and politician were in another world'

ಆದರೆ ದಿನಕರರ ದಾವಣಿಯಲ್ಲಿ ಈ ನಾಲ್ವರೂ ಸಹಜೀವನ ಪಡೆಯುತ್ತಾರೆ! ಒಂದು ರೀತಿಯಲ್ಲಿ ನಮ್ಮ ಈ ಕವಿಯ ಸ್ಥಾನವನ್ನು ಕವಿ ಟೆನಿಸನ್‌ನ ಮಾತಿನಿಂದ ಗುರುತಿಸಬಹುದೆ ?–

‘The poet as public figure wrinting for the broad midle class and diluting poetry until that class could take it’

ಇದು ಈ ಕವಿಯ ಕಾವ್ಯ ಸಂದರ್ಭ. ವರ್ಗಕಲಹದ ಪೂರ್ತಿ ಅರಿವಿದ್ದರೂ ವರ್ಗಬೇಧವನ್ನು ಗಮನಿಸಿದೆ. ಸಾಂಸ್ಕೃತಿಕವಾಗಿ ಮಧ್ಯಮ ಶಿಕ್ಷಣದ ಎಲ್ಲ ಮಧ್ಯಮ ವರ್ಗದ ಅನುಪಾಗುವಂತೆ ಒಂದು ಸಾಮಾಜಿಕ ಅಲೆ ಅಳತೆ (Wave Length) ಯನ್ನು ಕಂಡುಕೊಂಡ ಸಾಧನೆ. ಆದ್ದರಿಂದ ಇಲ್ಲಿ ಅಂಥ ಕಲಹದ ಸೂಚನೆ ಇದೆಯೇ ಹೊರತು ಅದರ ಕೋಲಾಹಲವಿಲ್ಲ. ಅದಕ್ಕೆ ಕೆರಳಿದ ಕರೆಯಿಲ್ಲ.

ಕವಿಗೆ ಕ್ರಾಂತಿ ಬೇಕು. ಆದರೆ ಅದರೊಂದಿಗೆ ಶಾಂತಿಯೂ ಬೇಕು.

‘ತೃಪ್ತನಾದರೆದೇವ ರಕ್ತದಾಹುತಿಯಿಂದ: ಭಕ್ತನೆಂಬುವ ಬಿರುದ ಧರಿಸಲಾರೆ!’ ಕವಿಗೆ ರಕ್ತ ಸಿಕ್ತವಾದ ಕ್ರಾಂತಿ-ಬಲಿದಾನ ಬೇಡ. ಇವರ ಬಾಯಿಂದ ಭೂದೇವಿ ಕೂಗುತ್ತಾಳೆ :

‘ಓ ನನ್ನ ಅದೃಷ್ಟ !
ಜಾಣರಿಂದಲೇ ಕಷ್ಟ’

‘ಭೂಪತಿಯು ಕವಿಯಾಗಿ ಕವಿಚಮೂಪತಿಯಾಗಿ’ ಮೆರೆದ ಈ ನಾಡಿನಲ್ಲಿ ಈ ಅಲಗೇರಿ ಸಿದ್ಧ ಸಾಮಾಜಿಕ ಜಾಗೃತಿಯು, ಜನ ಶಕ್ತಿ ಸಂಘಟನೆಯು ಸಿದ್ಧಪುರುಷ ನಾದನು. ಉತ್ತರ ಕನ್ನಡಕ್ಕೆ ಶಿಕ್ಷಣದ ಸಂಸ್ಕಾರದ ಸಾಮ್ರಾಜ್ಯವನ್ನೇ ಹಬ್ಬಿಸಿ ನೆಲೆಸಿದ ಶಕಪುರುಷನಾದನು. ಆದರೆ ಇದರೊಂದಿಗೇ ಇದನ್ನು ಮೀರಿ ಈ ಕೆಚ್ಚೆದೆಯ ಕಡುಗಲಿಯು ಬಿಚ್ಚೆದೆಯ ಕವಿಯಾದನು. ಅಲ್ಲ, ಎಂದೆಂದಿನಿಂದಲೂ ಮಿದು ಹೃದಯದ ತಿಳಿಗನ್ನಡದ ಸದಾ ಸ್ಫೂರ್ತಿಯ ಜನಪರ ಜನಹಿತ ತತ್ಪರ ಕವಿಯಾಗಿಯೇ ಉಳಿದನು. ಹೇಗೆ ? ಏಕೆ ?–

‘ನಿನ್ನ ಹೆಸರೇ ಬಾಳು
ಕನ್ನಡತ್ವದ ಕಾಳು’– ಅನ್ನುತ್ತಾನೆ ಕವಿ.

‘ಹೇಳಮ್ಮ ಹೇಳಮ್ಮ : ನಿನ್ನ ಸವಿ ಹೆಸರನ್ನು,
ನಿನ್ನ ನಾಮಾಮೃತವೆ ನನ್ನ ಜೀವ !

‘ ಕನ್ನಡದ ವಚನವೇ ನನ್ನ ಬಾಯಿ
ನಿನ್ನ ಹೆಸರೇ ಹೆಸರು
ನನ್ನ ಜೀವದ ಉಸಿರು,
ಅದನುಳಿದು ಬಾಳುವೆನೆ ? ಹೇಳು ತಾಯಿ ! ’

ಈ ಮಾತುಗಳು ದಿನಕರರ ಹೃದಯವನ್ನು ನರನಾಡಿಗಳನ್ನು ಮಿಡಿದು ಪಡಿನುಡಿದಿದೆ–ಈ ಭಾವಗೀತಗಳಲ್ಲಿ ಭಾವವಾಗಿ, ಗೀತವಾಗಿ ಇಲ್ಲಿ ಬಂದ ಪ್ರಾಸದ ಶಬ್ದಗಳು ಭಾವದಿಂದ ಗೀತಗೊಂಡು ಧನ್ಯವಾಗಿವೆ.

ಸರಿಯಾಗಿ ಕೆತ್ತಿಟ್ಟ, ಪುಟಿಯುವ ಪುಟ್ಟ ಚೆಂಡುಗಳಂಥ ಗುಣ ಈ ಗೀತಗಳಲ್ಲಿ ತುಳುಕಾಡಿದೆ. ಗಂಭೀರ ಅರ್ಥಗೌರವವು ಸುಶ್ಲಿಷ್ಟವಾಗಿ ಅಷ್ಟೇ ಸುಸ್ಪಷ್ಟವಾಗಿ ಕಟ್ಟುನಿಟ್ಟಿನ ವೈಚಾರಿಕ ಶಿಸ್ತನ್ನು ಬಿಡದೆ, ಕೆಲಸಲ ಆಕಸ್ಮಿಕ, ಅಕುಂಚಿತ ವಿಲಕ್ಷಣ ಪದ ಸಂಯೋಜನೆಗಳೊಂದಿಗೆ ನಮಗೆ ‘ ಎಂದಿಗೂ ನವಶಕ್ತಿ ’ ಯಾಗಿ ನಿಂತಿದೆ. ಕವಿಯ ಗುರುಗಳಾದ ಬಿ. ಎಂ. ಶ್ರೀಯವರ ನುಡಿಯಂತೆ ಈ ಕವನಗಳು ನಮಗೆ ಆಶೀರ್ವಾದಗಳಾಗಿವೆ. ಎಳೆಯ ಕವಿಗಳ ಮೋದ ಹಳೆಯ ಕವಿಗಳ ನಾದ ಕವಿಯು ಉಸುರಿದ ವೇದ ಮಾತ್ರವಲ್ಲ ಇವು ನಮಗೆ ಆಶೀರ್ವಾದವಾಗಿವೆ.

' ಚೌಪದಿ 'ಗಳ ಚೌಕಶಿ

ಡಾ. ದಿನಕರ ದೇಸಾಯಿಯವರ ಚುಟುಕಗಳ ಸಮಗ್ರ ಸಂಕಲನವು ೧೯೭೮ ರಲ್ಲಿ ಪ್ರಕಟವಾಯಿತು–' ದಿನಕರನ ಚೌಪದಿ ' ಎಂಬ ಹೆಸರಿನಲ್ಲಿ. ಈ ಸಂಕಲನದಲ್ಲಿ ಅವರು ತಾನು ಬರೆದ ಚೌಪದಿಗಳಲ್ಲಿ ೨೫೦೦ ಚುಟುಕಗಳನ್ನು ಆರಿಸಿ ಹೊರ ತಂದರು. ಅಂದರೆ ಪುಟ್ಟ ಪದ್ಯಗಳ ಒಟ್ಟು ಮೊತ್ತ ಇದಕ್ಕೂ ಹೆಚ್ಚು ಎಂಬುದು ಸ್ಪಷ್ಟ. ತಮ್ಮ ಎಡಬಿಡದ ಸಾರ್ವಜನಿಕ ಸೇವಾ ವಿಸ್ತಾರದಲ್ಲಿ ಒದಗಿದಷ್ಟು ವಿರಾಮದಲ್ಲಿ ಡಾ. ದೇಸಾಯಿಯವರು ' ಗೀಚಿ 'ದ ಈ ಕಿರಿಗವನಗಳ ಈ ರಾಶಿಯನ್ನು ಕಂಡರೆ ಯಾರಿಗೂ ಆಶ್ಚರ್ಯವಾಗಬಹುದು. ಇಂಥ ಇನ್ನೊಂದು ಅಸಾಮಾನ್ಯ ಉದಾಹರಣೆ ನಮ್ಮ ಇತಿಹಾಸದಲ್ಲಿ ಸಿಗುವದು ಚೀನಾ ಕ್ರಾಂತಿಯ ಕಾರಣ ಪುರುಷ ಮಾವೋತ್ಸೆತುಂಗನ ಬದುಕಿನಲ್ಲಿಯೇ. ಆತನು ಇತ್ತ ಕಮ್ಯುನಿಷ್ಟ ಕ್ರಾಂತಿಯ ರಣಕೋಲಾಹಲದ ಮಹಾ ಸಂಘಟನೆಯ ಸಂಭ್ರಮದಲ್ಲಿ ತೊಡಗಿಯೂ ಅದಕ್ಕೆ ಸ್ಫೂರ್ತಿಯಾದ ಕವನಗಳನ್ನು ವಿಪುಲವಾಗಿ ರಚಿಸುತ್ತಿದ್ದನಂತೆ. ಕವಿಯಾದ ನಮ್ಮ ಕಲಿ ದಿನಕರರ ಕರ್ತೃತ್ವವು ಅದಕ್ಕೆ ಕಡಿಮೆ ಅಲ್ಲ !

ಆದರೆ ಮಾವೋನಲ್ಲಿ ತುಸು ಅಪರೂಪವೆನ್ನಬಹುದಾದ ವಿನಯ ವಿವೇಕಗಳು ದಿನಕರರ ವಿಧಾಯಕ ಪ್ರತಿಭೆಯ ಶೃಂಗಾರವಾಗಿದೆ. ತಮ್ಮ ಈ ಕೃತಿಗಳ ಉತ್ತಮ ಕೃಷಿಯ ಬಗೆಗೆ ಅವರಿಗೆ ಅಪಾರ ಆಸಕ್ತಿ ಮತ್ತು ಆತ್ಮವಿಶ್ವಾಸ ವಿದ್ದರೂ, ಆ ಕುರಿತು ವೃಥಾ ಅಭಿಮಾನವಾಗಲೀ ದರ್ಪವಾಗಲೀ ಎಳ್ಳಷ್ಟೂ ಕಾಣುವದಿಲ್ಲ. ತಮ್ಮ ಈ ಬಹುಪ್ರಸವ ಕೃತುಶಕ್ತಿಯ ಇತಿಮಿತಿಗಳನ್ನು ಅವರು ಪೂರ್ತಿ ಬಲ್ಲರು. ದಿನಕರನ ಕವನ ನಿರ್ಮಿತಿ ಯಾರೂ ಮೂಕ ವಿಸ್ಮಿತರಾಗುವಷ್ಟು ವಿಸ್ತಾರವಾದದ್ದು. ಅದು ಒಬ್ಬ ಏಕಾಂತ ರಸಋಷಿ ಮಹಾಕಾವ್ಯವನ್ನೇ ಏಕಾಗ್ರತೆಯಿಂದ ರಚಿಸಿದ ಜಾಯಮಾನದ್ದು ! ಆದರೂ ಆ ಕುರಿತು ಅವರು ಅನ್ನುವದೇನು ?

> ' ನಾ ಬರೆದ ಚುಟುಕುಗಳ ಸಂಖ್ಯೆ ವಿಪರೀತ
> ಶೇಕಡಾ ತೊಂಬತ್ತು ಹೊಡೆಯುವವು ಗೋತಾ
> ಉಳಿದ ಹತ್ತರ ಪೈಕಿ ಏಳೆಂಟು ಸತ್ತು
> ಒಂದೆರಡು ಬದುಕಿದರೆ ಅವು ಮಾತ್ರ ಮುತ್ತು '

' ಐನೂರು ಪುಟದೊಳಗೆ ಎಲ್ಲವೂ ಹಾಳು
ಕೊನೆಗೆ ಉಳಿದದ್ದು ಬರಿ ಒಂದೆರಡು ಹೋಳು
ಈ ಹೋಳುಗಳು ಮಾತ್ರ ಚೊಕ್ಕ ಬಂಗಾರ
ನಮ್ಮ ಕನ್ನಡ ನುಡಿಗೆ ತಕ್ಕ ಸಿಂಗಾರ '

ಇದು ಅಕ್ಷರಶಃ ಯಥಾರ್ಥವಾದ ಮಾತು. ಎಷ್ಟೇ ಅವಸರದಲ್ಲಿ ಬರೆದಿರಲಿ, ಅವಕಾಶ ಸಾಲದೇ ಬರೆದಿರಲಿ, ದಿನಕರರ ಚುಟಕಗಳು ಚೈತನ್ಯದ ಚಿಲುಮೆ. ಅವುಗಳಲ್ಲಿ ಜಡಿದು ತುಂಬಿದೆ ಚಿಂತನದ ಚೆಲುವು ! ಅವರೆನ್ನುತ್ತಾರೆ–

' ಐಶ್ವರ್ಯ ವೆನಗಿಲ್ಲ, ಒಂದಿಷ್ಟು ಭೂಮಿ
ನನಗಿಂತ ಶ್ರೀಮಂತರಾರಿಲ್ಲ ಸ್ವಾಮಿ
ಧನವಿಲ್ಲವಿದ್ದರೂ ಇದೆ ಹವಳ ಮುತ್ತು
ಕವನಗಳ ಪದಕಸರ ನನ್ನ ಸಂಪತ್ತು '

ಈ ಸಂಪತ್ತಿನ ಅಲ್ಪ ಪರಿಚಯ ಆದಷ್ಟು ಅವರದೇ ಮಾತಿನಲ್ಲಿ ಮಾಡಿಕೊಡುವ ಸಾಹಸ ನನ್ನದು.

ದಿನಕರರ ಚುಟಕಗಳಲ್ಲಿ ಭಾವಗೀತದ ಲಹರಿ ವ್ಯಂಗ್ಯವಿಡಂಬನೆ ವಿನೋದ ಗಳೊಡನೆಯೇ ಒಡಮೂಡಿದೆ ಎನ್ನುತ್ತಾರೆ ಈ ಕವಿವರ್ಯರು. ಇದು ಸರಿ. ಆದರೆ ಈ ಚೌಪದಿಗಳ ಸಮೃದ್ಧಿ, ವಿಸ್ತಾರ, ವೈವಿಧ್ಯ, ವೈಪುಲ್ಯಗಳನ್ನು ಒಮ್ಮೆ ದಿಟ್ಟಿಸಿದರೂ ಒಡೆದೆದ್ದು ಕಾಣುವುದು, ಈಚಿಗಿನ ಅವರ ಭಾವಗೀತಗಳ ಕೊರತೆ ಅಥವಾ ವಿರಳತೆ ! ತರತರಂಗವಾಗಿ ಉರುಳಿ ನುಗ್ಗಿ ಬಂದ ಚುಟಕಗಳ ಲಹರಿಗೆ,

' ಒಂದು ಸಾವಿರ ಚುಟಕ ಬರೆದೊಡನೆ ಅವ್ವಾ
ಬಿಟ್ಟು ಹೋಗುವದೆಂದು ತಿಳಿದಿದ್ದೆ ದೆವ್ವ
ಆದರೂ ಬಿಟ್ಟು ಹೋಗಿಲ್ಲ ಆ ಭೂತ
ಅದಕಂಜಿ ಓಡಿ ಹೋಯಿತು ಭಾವ ಗೀತ ! '

ಅಂದರೆ ಚೌಪದಿಗಳ ಪವಗತಿಗೆ ಹೆಜ್ಜೆ ಹಾಕುವ ಗುಂಗಿನಲ್ಲಿ ಕವಿಯು ಭಾವಗೀತದ ಗೀಳನ್ನು ಮರೆತ !

ಆದರೂ ಇಲ್ಲಿ ನಾವು ಮರೆಯಲಾಗದ ಒಂದು ಅಂಶವೆಂದರೆ ದಿನಕರರ ಭಾವಗೀತಗಳಲ್ಲಿ,ಮಕ್ಕಳ ಪದ್ಯಗಳಲ್ಲಿ ಈ ಚುಟಕಗಳ ಲಯವಿನ್ಯಾಸ ದಟ್ಟವಾಗಿಯೇ

ಕಾಣಿಸಿಕೊಳ್ಳುತ್ತವೆ. ೫ ಮಾತ್ರೆಗಳ ೪ ಗಣಗಳ ಪಂಕ್ತಿ–ಅದರ ಗತ್ತು ಸುಲಭವಾಗಿ ಬಿಟ್ಟು ಹೋಗುವದಿಲ್ಲ. ಇದು ಕವಿಯು ತೀರಾ ಎಳೆವರೆಯದಲ್ಲಿಯೇ ಅಂಟಿಸಿಕೊಂಡ ವಾರ್ಧಿಕ ಷಟ್ಪದಿಯ ಪಾದಪ್ರೋಣಿಕೆಯ ಪಳೆಯುಳಿಕೆ. ಕವಿಗೆ ಚುಟಕಗಳ ಚಾಳಿ ಬಲವಾಗಿಯೇ ಹಿಡಿಯಿತು. ಚುಟಕಗಳ ಕುರಿತೇ ಕವಿಯು ಪರಿಪರಿಯಾಗಿ ವಿವರಿಸಿ ೩೫ಕ್ಕೂ ಮೇಲ್ಪಟ್ಟು ಚುಟಕಗಳನ್ನೇ ಬರೆದಿದ್ದಾನೆ. ! ಉದಾಹರಣೆಗೆ–

‘ ಚುಟಕಗಳ ಗೀಚಿದೆನು ಮನಬಂದ ಹಾಗೆ
ಹುಟ್ಟಿದವು ಗುಬ್ಬಚ್ಚಿ ಗಿಣಿ, ನವಿಲು, ಕಾಗೆ
ಮಕ್ಕಳೆಂದರೂ : ನವಿಲು ಬೇಕು ಕುಣಿತಕ್ಕೆ
ಅಜ್ಜಿ ಅಂದಳು : ಕಾಗೆ ಬೇಕು ಶ್ರಾದ್ಧಕ್ಕೆ ! ’

(ಮಗುವಿನಿಂದ ಮುದುಕಿಯ ತನಕವೂ ಈ ಚುಟಕಗಳ ಔಚಿತ್ಯವಿದೆ !)

‘ ಚುಟಕಗಳ ಛಂದಸ್ಸು ಬಹಳ ಪ್ರಾಚೀನ
ಮಾತನಾಡುವ ಶೈಲಿ ನೂತನ ವಿಧಾನ
ಇದು ಒಂದು ಕಲಬೆರಕೆ ಮಿಶ್ರಣದ ತಿಂಡಿ
ಬಾಯೊಳಗೆ ಹಾಕಿದರೆ ಹೋಗುವದು ಥಂಡಿ ’

ತುಲಸಿದಾಸನ ಚೌಪದಿಯಿಂದ ರತ್ನಾಕರವರ್ಣಿಯ ಸಾಂಗತ್ಯದವರೆಗೂ ಈ ಚುಟಕದ ಹಳೆಯ ಅವತಾರಗಳು ಮೆರೆದಿವೆ. ಅವೆಲ್ಲ ೪ ಪಾದಗಳ ಪದ್ಯಗಳು. ಆದರೆ ಕಂದ, ಶ್ಲೋಕ ಇತ್ಯಾದಿಗಳೆಲ್ಲ ಚತುಷ್ಪಾದಗಳಾಗಿದ್ದರೂ ಚೌಪದಿಗಳಲ್ಲ. ಚತುಷ್ಪಾದ ಪ್ರಾಣಿಗಳೆಲ್ಲ ಒಂದೇ ಜಾತಿಯ ಜಾನುವಾರು ಅಲ್ಲ ! ಆದರೆ ಈ ಚತುಷ್ಪಾದ ರಚನೆಯ ಪೀಳಿಗೆ ಹಳೆಯದು. ದಿನಕರರು ಆ ಮಾರ್ಗೀಯ ಎನಿಸಬಹುದಾದ ಛಂದಸ್ಸಿಗೆ ಒಂದು ಸ್ಥಿರವಾದ ಸ್ಥಾಯಿ ಸ್ವರೂಪ ನೀಡಿದರು.

ದಿನಕರರು ಈ ಪದ್ಯ ಪ್ರಕಾರಕ್ಕೆ ‘ ಚೌಪದಿ ’ಯೆಂದು ಕರೆದರೂ ಅವುಗಳ ಸಂಗ್ರಹದೊಳಗೆಲ್ಲ ‘ ಚುಟಕ ’ ಎಂಬ ಶಬ್ದವೇ ಪ್ರತಿಯೊಂದು ಕಡೆಗೂ ಪದ್ಯದ ಹೆಸರಾಗಿದೆ. ಸರ್ವಜ್ಞನ ತ್ರಿಪದಿಗೆ ಪ್ರತಿಯಾಗಿ ದಿನಕರರು ಚೌಪದಿಯೆಂದು ಚುಟಕವನ್ನು ಕರೆದಂತಿದೆ. ಇನ್ನು ಹಲವು ಚುಟಕಗಳಲ್ಲಿ ಈ ಪದ್ಯ ಪ್ರಕಾರವನ್ನು ಅವರು ‘ ಮುಕ್ತಕ ’ವೆಂದೂ ಉಲ್ಲೇಖಿಸಿದ್ದುಂಟು. ‘ ಮುಕ್ತಕ ’ವೆಂದರೆ ‘ ಸ್ವಯಂಪೂರ್ಣವಾದ ಬಿಡಿ ಪದ್ಯ ’ದ ಒಂದು ಮಾದರಿ. ಅದು ಯಾವದೇ

ಕಥನ, ವರ್ಣನೆಗಳ ಅಧ್ಯಾಯ, ದೀರ್ಘಕಾವ್ಯದ ನುಡಿ ಅಲ್ಲ. ಅದು ಬಿಡಿ ನುಡಿ. ಒಂದು ಸ್ಫುಟ ಕೃತಿ. ಇದು ಒಂದು ಸಾಮಾನ್ಯ ಲಕ್ಷಣ. 'ಚೌಪದಿ'ಗೆ ಒಂದು ಐತಿಹಾಸಿಕ ವಾಸನೆ ಇದೆ. ನೃಪತುಂಗನ ಕಾಲದಿಂದಲೂ ಈ 'ಚೌಪದಿ' (ಚತುಷ್ಪದಿ) ತನ್ನದೇ ವ್ಯಾಖ್ಯೆಯನ್ನು ಹೊಂದಿ ಬಂದಿದೆ. ಇದರ ಆಕಾರ-ಪ್ರಕಾರ ನಮ್ಮ ಕವಿ ದಿನಕರರು ರೂಪಿಸಿದಂತೆ ಹಗುರಾಗಿ ಸವಿರಾಗಿ ಇಲ್ಲ. ಇದು 'ಚುಟಕ': ಚುಟುಕಾಗಿಯೇ ಇದರ ಅಭಿವ್ಯಕ್ತಿ.

ಕವಿಯೇ ಹೇಳುವಂತೆ (ಪ್ರಸ್ತಾವನೆ) ಅವರು ಆರಂಭದಲ್ಲಿ ದ್ವಿಪದಿಗಳನ್ನು ಬರೆಯುತ್ತಿದ್ದರು. ಅದು ಬಹುಶಃ ಆಂಗ್ಲ ಕವಿ ಗ್ಲೇಕಸ ಪ್ರಭಾವದಿಂದ. ಅವರ ರಚನೆ-ರೀತಿಗಳ ಕಟ್ಟು ನಮ್ಮ ಸರ್ವಜ್ಞನ ತ್ರಿಪದಿಗಳಿಂದ ಬಂದವು. ಸರ್ವಜ್ಞ ಕವಿಯ ಬಗೆಗೆ ದಿನಕರರಿಗೆ ಅಪಾರ ಭಕ್ತಿ. ತಾನು ಅವನಿಗೆ ಸರಿಸಮಾನ ಆಗಲಾರೆನೆಂಬ ನಂಬಿಕೆ ಅವರದು. ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟ. ಅದೇಂದರೆ, 'ದ್ವಿಪದಿ'ಯ ಪ್ರಭಾವ ಅವರ 'ಚೌಪದಿ'ಯ ಮೇಲೆಯೂ ಆಗಿದೆ. ನಿಜವಾಗಿಯೂ ಯಾವದೇ ಒಂದು 'ಚುಟಕ' 'ಚೌಪದಿ'ಯಲ್ಲ. ೪ ಪಾದಗಳಿದ್ದ ಮಾತ್ರಕ್ಕೆ ಅದು 'ಚೌಪದಿ' ಆಗದು. ಅದಕ್ಕೆ 'ಚೌಪದಿ' ಯಾಗುವಂತೆ ಒಂದು ಒಳಕಟ್ಟು ಅಗತ್ಯ. ಈ ಕಟ್ಟಿನ ಭಾವ ಹುಟ್ಟುವದು ನಾಲ್ಕೂ ಪಾದಗಳನ್ನು ಪೋಣಿಸಿ ಹಿಡಿದಿರುವ ಪ್ರಾಸಗಳ ಏಕರೂಪತೆಯಲ್ಲಿ. 'ದ್ವಿಪದಿ'ಯ ಸ್ವರೂಪವೂ ಸ್ಫುಟವಾಗುವದು ಇಂಥ ಪ್ರಾಸದ ಏಕರೂಪ ದಿಂದಲೇ. ಈ ಒಂದು ದೃಷ್ಟಿಯಿಂದ ನೋಡಿದರೆ ದಿನಕರರ ಪ್ರತಿಯೊಂದು 'ಚುಟಕ'ವು ಎರಡು 'ದ್ವಿಪದಿ'ಗಳ ಜೋಡಣೆಯೇ ಆಗಿದೆ. ನಾಲ್ಕೂ ಪಾದಗಳಿಗೆ ಅಖಂಡವಾಗಿ ಒಂದೇ ಪ್ರಾಸದ ಬಂಧವಿಲ್ಲ. : ಅ-ಬ, ಅ-ಬ ಎಂಬ ರಚನೆಯೂ ಇಲ್ಲ. ಅ-ಅ, ಅ-ಅ ಎಂಬ ರೂಪವೂ ಇಲ್ಲ. ಇಲ್ಲಿ ಬರುವ ಮಾದರಿ ಅ-ಅ ಮತ್ತು ಬ-ಬ ! ಅಂದರೆ ಎರಡು ದ್ವಿಪದಿಗಳು. ಅಲ್ಲದೆ ಅನೇಕ ಸಲ ಒಂದು ದ್ವಿಪದಿಯಿಂದ ಇನ್ನೊಂದಕ್ಕೆ ಹೊರಳುವಾಗ ಭಾವದ ವೃತ್ತಿ ಸ್ವಲ್ಪ ವಾದರೂ ಭಿನ್ನವಾಗುತ್ತದೆ. : ಅಲ್ಲಿ ಪ್ರಶ್ನೆ ಆದರೆ ಇಲ್ಲಿ ಉತ್ತರ, ಅಲ್ಲಿ ಬಾಂಬು ಬಂದರೆ ಇಲ್ಲಿ ಚಂಬು ! ಅಲ್ಲಿ ಚುಟಕಗಳ ಛಂದಸ್ಸು. ಇಲ್ಲಿ ಅದು ಒಂದು ಕಲಬೆರಕೆ. ಇಂಥ ನೂರಾರು ಉದಾಹರಣೆಗಳನ್ನು ಕೊಡಬಹುದು. ಅದಕ್ಕೇ ಕವಿ ಹೇಳಿದ್ದು :

'ಚುಟಕಗಳ ಛಂದಸ್ಸು ಬಹಳ ಪ್ರಾಚೀನ
ಮಾತನಾಡುವ ಶೈಲಿ ನೂತನ ವಿಧಾನ'

ಇದು ಒಂದು ಕಲರಬೆಕೆ ಮಿಶ್ರಣದ ತಿಂಡಿ. ದಿನಕರರು ಚುಟಕದ ಆರಂಭದಲ್ಲಿ ದ್ವಿತೀಯಾಕ್ಷರ ಪ್ರಾಸವನ್ನು ಸಾಧಿಸಿದರೆ ಆಯಾ ಪದ್ಯಕ್ಕೆ 'ಚೌಪದಿ'ಯ ಕಟ್ಟು ಇನ್ನೂ ಬಿಗು ಆಗುತ್ತಿತ್ತು. ಆದರೆ ಕವಿಗೆ ಕೃತಿಯ ಆಕಾರಕ್ಕಿಂತ ಆಶಯ, ಅದರ ಬೆನ್ನಿನ ಆವೇಶ ಮುಖ್ಯ. ಈ ನಿಟ್ಟಿನಲ್ಲಿ ಶ್ರೀ ಗೋಪಾಲಕೃಷ್ಣ ನಾಯಕರು ತಮ್ಮ 'ಚುಟಕ–ಗುಟುಕ'ಗಳಲ್ಲಿ ಈ ಆದಿಪ್ರಾಸವನ್ನು ಸುಸೂತ್ರವಾಗಿ ಸಾಧಿಸಿದ್ದಾರೆ.

ಆದರೆ ಈ ಕವಿಗೆ ಕಲಾಕುಸುರಿನ ಅಂಥ ನಾಜೂಕು ಇಲ್ಲ. ಇವರದು ಕಲೆಗಾಗಿ ಕಲೆಯಲ್ಲ. ಹಾಗೆಂದು ಇವರು 'ಕವಿಕುಲ ಕುಠಾರ'ರೂ ಅಲ್ಲ. ಕವಿಕಾವ್ಯ, ಚುಟಕಗಳ ಬಗೆಗೆ ಈ ಕವಿಗೆ ಜಾಗೃತವಾದ ಪ್ರಜ್ಞೆವುಂಟು. ಬೇರೆ ಯಾವ ಕವಿಯೂ ತನ್ನ ಕವನಗಾರಿಕೆಯ ಬಗೆಗೆ ದಿನಕರರಷ್ಟು ವ್ಯಾಪಕವಾಗಿ ಚಿಂತನೆ–ಇಷ್ಟು ಪ್ರಕಟವಾಗಿಯೇ ಮಾಡಿರಲಿಕ್ಕಿಲ್ಲ. ಈ ಕುರಿತು ಒಂದು ಸ್ಥೂಲವಾದ ವಿಶ್ಲೇಷಣೆ ಇಲ್ಲಿ ನೀಡಬಹುದು. ಆರಿಸಿಕೊಂಡ ೨೫೦೦ ಚುಟಕಗಳಲ್ಲಿ ರಾಜಕೀಯದ ಕುರಿತ ಕವನಗಳು ೧೮೦, ಚುಟಕಗಳ ಕುರಿತು ೧೦೦, ಭಾಷೆಯ ಬಗೆಗೆ ೨೮, ಮಾತಿನ ಕುರಿತು ೩೨, ಕಾವ್ಯದವು ೭೨, ಶೈಲಿಗೆ ೪೪, ಸರ್ವಜ್ಞನ ಕುರಿತು ೮, ಲಂಚ–೬೦, ಪುಢಾರಿ–೨೪ ಪ್ರಣಯ–ಪ್ರೀತಿಯ ಕುರಿತು ೬೫–೭೦ ಇತ್ಯಾದಿ. (ಮಿಕ್ಕ ವಿಷಯ ವಿವರ ಬಿಟ್ಟಿದ್ದೇನೆ.)

ಒಂದು 'ಚುಟಕ'ದಲ್ಲಿ ದಿನಕರರು ಹೀಗೆ ಕವನಿಸಿದ್ದಾರೆ,–

'ಚುಟಕಗಳ ಬರೆದು ಹುಡುಕಿದೆನು ಹೊಸ ದಾರಿ
ಹಿಂದೆಯೇ ಬಂದು ಬಿಟ್ಟರು ಇವರು ಹಾರಿ
ಈ ರೀತಿ ಬೇಲಿ ಹಾರಿದರೆ ಫಲವೇನು ?
ಲೋಕಾನುಭವ ಹಿಂಡಿದರೆ ಮಾತ್ರ ಜೇನು.'

ಈ ಉದ್ಗಾರದಿಂದ ಒಂದು ಹೊಸ ಸಂಗತಿ ಸ್ಪಷ್ಟವಾಗುತ್ತದೆ. ಇಂದು ಈ ಚುಟಕ ಪದ್ಧತಿ ನಮ್ಮ ಹೊಸ ಕವಿಗಳಲ್ಲಿ ತುಂಬಾ ಪ್ರಿಯವಾಗಿದೆ. ಮಾತಿನ ಕನ್ನಡದಲ್ಲಿ ಅದೂ ಹಳ್ಳಿಗಳಲ್ಲಿ, 'ಪ್ರಿಯ' 'ಪಿರಿಯ'ವಾಗಿ ತುಟ್ಟಿ ಎಂಬ ಅರ್ಥ ತಾಳಿದೆ ! ಬಹುಶಃ 'ಪಿರಿಯ'=ಹಿರಿಯ ಎಂಬ ಅರ್ಥದಿಂದ ಈ ಹೊಸ ಛಾಯೆ ಹೊಳೆದು ಬಂದಿರಬೇಕು. ಆದರೆ ಇಂದು ನಮ್ಮ ಚುಟಕ 'ಪ್ರಿಯ'ವೆಂದರೆ ಅದು ತುಂಬ ಅಗ್ಗವಾಗಿದೆ !

ದಿನಕರರ ಈ 'ಚುಟುಕ' ಗೋತ್ರದಲ್ಲಿ ಒಳ್ಳೆಯ ಕವಿಗಳೂ ಪಳಗಿದ್ದಾರೆ. ವಿಡಂಬಾರಿ, ನಾರಾಯಣ ಕಾಗಲ, ಎನ್. ಬಿ. ಕಾಮತ, ಜಿ. ಎಸ್. ಅಸ್ನಥಾನಿ, ಗೋಪಾಲಕೃಷ್ಣ ನಾಯಕ ಮುಂತಾದವರು ಇದ್ದಾರೆ. ಚುಟಕದ ತಂತ್ರ ಇವರಿಗೆ ಸಾಧಿಸಿದೆ. ಆದರೆ ಈ ತಂತ್ರದ ಬೆನ್ನಿಗೆ ಮಂತ್ರ ಬೇಕು. ಇಲ್ಲವಾದರೆ ಇದು ಬರಿ ಯಂತ್ರವಾಗಿ ಬಿಡುತ್ತದೆ! ಬೀದಿಯಲ್ಲಿ ೪ ಗುಂಡಿ ಸಿಕ್ಕರೆ ಅವುಗಳಿಗೆ ಒಂದು ಪ್ಯಾಂಟು ಹೊಲಿದಂತೆ, ೪ ಪ್ರಾಸದ ಶಬ್ದಗಳು ತೋಚಿದರೆ ಕೂಡಲೇ ಅದಕ್ಕೆ ೪ ಸಾಲು ಹಚ್ಚಿ ಒಂದು ಚುಟುಕ ಹುಟ್ಟಿಸುವ ವಾಡಿಕೆ ವೃದ್ಧಿಯಾದಂತಿದೆ! ಇಂಥ ಚುಟುಕಗಳಲ್ಲಿ ಅನುಭವದ ಅಭಾವ. ಅವುಗಳ ತಂತ್ರ ಮನ ಮುಟ್ಟುವದಿಲ್ಲ. ಭಾವ-ಬುದ್ಧಿ-ಗುಣಗಳ ಉತ್ಕಟತೆ, ಮಾತಿನ ಜಾಣ್ಮೆ, ವಿಮರ್ಶಾ ಪ್ರವೃತ್ತಿ, ಬದುಕಿನ ಅವಲೋಕನೆಯ ಮರ್ಮಜ್ಞತೆ-ಇವೆಲ್ಲ ಗುಣಲಕ್ಷಣಗಳು ಯಾವದೇ ಚುಟುಕದಲ್ಲಿ ಕಾಣಬೇಕು. ಇದಕ್ಕೆ ತಕ್ಕ ಜಾಗ್ರತ ಸಂಯಮ ಅವಶ್ಯ.

ತನ್ನ ಕವನಗಳ ಬಗೆಗೆ, ಶೈಲಿಯ ಬಗೆಗೆ ಇಷ್ಟೊಂದು ವ್ಯವಧಾನದಿಂದ ವಿವೇಚಿಸಿದ ಕವಿ ಕನ್ನಡದಲ್ಲಿ ವಿರಳ. ಈ ವಿವೇಚನೆಯ ಆಳಕ್ಕೆ ಇಳಿದರೆ ಅದೇ ಒಂದು ಪ್ರಬಂಧ ವಾದೀತು. ಒಂದು ಮಾತು ದಿಟ. ಈ ಕವಿಗೆ ಈ ಚುಟುಕ ಬಳ್ಳಿಗೆ ಹೂವು, ಗಿಡಕ್ಕೆ ಚಿಗುರು ಮೂಡುವಂತೆ ಸಲೀಸಾಗಿ ಒಡಮೂಡಿಲ್ಲ, ಅವರೇ ಅಂದಿದ್ದಾರೆ!

'ಚುಟುಕ ಹುಟ್ಟುವ ರೀತಿ ಗೊತ್ತುಂಟೇ ರಾಮ ?
ನಿತ್ಯವೂ ಮೈತುರಿಸಿಕೊಂಡ ಪರಿಣಾಮ'

'ಕೂಸು ಹುಟ್ಟುವ ಮೊದಲು ಬರಬೇಕು ಬೇನೆ'

'ಕಾಣಲಿಕೆ ಅತಿ ಸುಲಭ ಚುಟುಕಗಳ ಸಾಲು
ಬರೆಯಲಿಕೆ ಹೊರಟಾಗ ಆಗುವದು ಫೇಲು
ಚುಟುಕದೊಳಗಿರಬೇಕು ಲೇಖನಿಯ ಜಾದು
ಜಾದು ತಪ್ಪಿದರೆ ಸಖಿ, ಬರವಣಿಗೆ ಬಾದು'

'ಕಾವ್ಯ ಹುಟ್ಟುವದಿಲ್ಲ ಬರಿ ಸ್ಫೂರ್ತಿಯಿಂದ'

'ಲಾಭದಾಯಕವಲ್ಲ ಕವಿಯ ಬೇಸಾಯ
ಕಾಡಿನಲಿ ಕೃಷಿ ಮಾಡಿದಂತೆ ವ್ಯಾರಾಯ'

'ಕಾವ್ಯವೆಂಬುದು ಜಾಣತನವಲ್ಲ, ಹುಚ್ಚು
ತೀವ್ರವಾದರೆ ಹುಚ್ಚು ಕವಿಯು ಬೆಲೆ ಹೆಚ್ಚು'

'ಚುಟಕ ಸಣ್ಣಾದರೂ ಬರೆಯುವದು ಕಷ್ಟ
ಮಾತು ತಪ್ಪಿದರೆ ಕವಿ ಆಗುವನು ಭ್ರಷ್ಟ
ಬರಿ ಪಂಕ್ತಿಯಲಿ ನಾನ್ನೂರು ತುಂಬಿ
ಕಂಪು ಬೀರಿದರೆ ಹಾರಾಡುವದು ದುಂಬಿ.'

'ಚುಟಕ ಸಣ್ಣಾದರೂ ಶಕ್ತಿ ಹಿರಿದಾಗಿ
ಮೂಡಿ ಬಂದರೆ ಇದಕೆ ಅನ್ನವರು ರಾಗಿ'

(ಇಲ್ಲಿ 'ರಾಗಿ' ಶಬ್ದ ಎಷ್ಟು ಸೂಚಕ! ಅದು ರೈತನ ಅನ್ನ. ಸತ್ವಕ್ಕೂ ಸಲ್ಲುವದು. ಕನಕದಾಸನೇ ಕಾವ್ಯ ಬರೆದ 'ರಾಮಾಧಾನ್ಯ'!)

ಚುಟಕದಲ್ಲಿ ಏನು ಇರಬೇಕು ?

ಚುಟುಕಮ್ಮ, ನಿನಗೆ ಸೇರುವ ಕವಿತೆಯುಂಟೆ ?
ಕವಿತೆಯೊಳಗಿರಬೇಕು ಮಾನಸಿಕ ತಂಟೆ
ಅಲ್ಲೋಲ ಕಲ್ಲೋಲವಾಗಿರಲಿ ಮಾತು
ಎಲ್ಲರೂ ಕೇಳುವರು ಒಂದೆಡೆಗೆ ಕೂತು'

ಈ ಚುಟಕಮ್ಮನ ಅಹಾರವೇನು ಗೊತ್ತೇ ?

'ಚುಟಕಮ್ಮ, ನೀನು ತಿನ್ನುವುದೇನು ನಿತ್ಯ ?
ಭರ್ತಿ ಮೆಣಸಿನಕಾಯಿ, ಆಮೇಲೆ ಪಥ್ಯ
ಮಧ್ಯಾಹ್ನ ಕುಡಿಯುವೆನು ಸ್ವಲ್ಪ ಹುಳಿಸಾರು
ಮತ್ತೆ ಆಗಾಗ್ಗ ತುಸು ಮೂಲ ನುಗಿ ಬೇರು'

'ಚುಟುಕಮ್ಮ, ಬೇಕೇನು ಅಕಾಡೆಮಿಯ ಪ್ರೈಜು ?
ಚಿಕ್ಕದಾಗಿದೆಯಲ್ಲ ನನ್ನ ಮೈ ಸೈಜು !
ನಿತ್ಯವೂ ನಾನೆಷ್ಟು ಸುರಿಸಿದರೂ ಬೆವರು
ಮೆಚ್ಚುವರೇ ಗಿಡ್ಡ ಹೆಂಗಸಿಗೆ ದೊಡ್ಡವರು ?'

ಚುಟಕದ ರಚನೆ ಹೇಗೆ ?

‘ ಚುಟಕವಾಗಿರಲಿ, ಸಖಿ, ಡೊಂಕಾದ ವಂಕಿ
ಈ ವಂಕಿಯೊಳಗಿರಲಿ ಕೆಂಡಗಳ ಬೆಂಕಿ
ಯಾವಾಗಲೂ ಉರಿಯುತಿರಬೇಕು ಕೆಂಡ
ಉರಿಯದಿದ್ದರೆ ನನ್ನ ನುಡಿ ಬ್ರಹ್ಮ ಗಂಡ ’

ಕೆಲಸಲ ದಿನಕರರು ಸಂದಿಗ್ಧ ಮಿಶ್ರ ರೂಪಕಗಳಲ್ಲಿ ನಮ್ಮನ್ನು ಕಂಗೆಡಿಸುವುದುಂಟು ! ಕವಿ ಕಾವ್ಯದ ಉಗಮವನ್ನು ಹೀಗೂ ಬಣ್ಣಿಸಿದ್ದುಂಟು.–

‘ ದೇವನೇ ಕವನಗಳ ಬರೆದ ಸಾಕಷ್ಟು
ನಮ್ಮ ರಾಜ್ಯಕ್ಕೆ ಮಾಡಿದನು ಪೋಸ್ಟು
ನಾ ಬರೆದೆಯೆನ್ನುವದು ಬರಿ ಒಂದು ಭ್ರಾಂತಿ
ದೇವ ಔಷಧಿ ಕೊಡಲು ಕವಿಗಾಯಿತು ವಾಂತಿ ’

(ಇದು ದೇವರು ಕವನ ಬರೆಯುವ ರೀತಿಯೇ–ಕವಿಗೆ ವಾಂತಿಯಾಗುವ ಔಷಧಿ ಕೊಟ್ಟು !)

‘ ದಿನಕರನ ಚೌಪದಿಗೆ ಬರಿ ನಾಲ್ಕು ಸಾಲು
ಸರಿಯಾಗಿ ಹಿಂಡಿದರೆ ಮಣಗಟ್ಲೆ ಹಾಲು
ಈ ಹಾಲಿನೊಳಗುಂಟು ಮಜ್ಜಿಗೆಯ ಅರ್ಕ
ಹಾಲು ಹುಳಿಯಾದೊಡನೆ ತರ ತರದ ತರ್ಕ ’

ಕವನ (ಚುಟಕಗಳ) ಅರ್ಥದ ಬಗೆಗೂ ಕವಿ ದಿನಕರ ಚಿಂತನೀಯವಾಗಿ ಬರೆದಿದ್ದಾರೆ.–

‘ ಅರ್ಥವಾಗದ ಕವಿತೆ ಅತ್ಯಂತ ಶ್ರೇಷ್ಠ
ಅರ್ಥವಾದರೆ ನಿಮ್ಮ ತಲೆಗಿಲ್ಲ ಕಷ್ಟ
ಕಷ್ಟವಾದರೆ ತಲೆಗೆ ವ್ಯಾಯಾಮ ಭರ್ತಿ
ಕೊನೆಯವರೆಗೂ ಉಳಿಯುವದು ಕವಿಯ ಕೀರ್ತಿ ’

(‘ The less it is understood, the more poetic it is ’) ಎಂದಿದೆ ಒಂದು ಆಂಗ್ಲ ಸೂಕ್ತಿ. ಕವಿ ರಾಬರ್ಟ್ ಬ್ರೌನಿಂಗ್‌ನಿಗೆ ಅವನ ಕಾವ್ಯದ

ಅರ್ಥವನ್ನು ರಸಿಕನಾರೊ ಕೇಳಿದನಂತೆ. ಆಗ ಅತ ಅಂದದ್ದು. 'when I, work God and myself knew it. Now God alone knows it!' ದಿನಕರರ ಅಭಿಪ್ರಾಯವೇನು ?

'ಅರ್ಥವಿಲ್ಲದ ಕವಿತೆಗೂ ಅರ್ಥವುಂಟು
ಇಂಥ ಕವಿತೆಯ ಬರೆಯುವನು ಸೃಷ್ಟಿಕರ್ತ
ನುಡಿಯೆನ್ನುವದೇ ಗುಡಿಯು ಸರಿಯಾಗಿ ನೋಡು
ಅಡಿಗಡಿಗೆ ಅವನ ಕಿವಿಯೊಳಗೆ ಮಾತಾಡು'

ಆದ್ದರಿಂದ–

'ಅಗೆಯಿರೋ ಅಗೆಯಿರೋ ಮತ್ತಷ್ಟು ಕಂತ
ಆಳ ಹೆಚ್ಚಾದಷ್ಟು ಶುದ್ಧ ವೇದಾಂತ
ಈ ಬಾವಿಯೊಳಗೆ ಮುಳುಗಿ ಬದುಕಿದರೆ ಮಾತ್ರ
ಪರಿಶುದ್ಧವಾಗುವದು ಕವಿಯ ಕುಲಗೋತ್ರ'

ದಿನಕರರ ಮಾತು 'ಮುತ್ತಿನ ಹಾರ'. ಅರ್ಥ ಸ್ಫಟಿಕದ ಸಲಾಕೆ. ಅದಕ್ಕೇ ಮಾಣಿಕದ ದೀಪ್ತಿ. ಅದಕ್ಕೇ ಅಂದಿರಬೇಕು–

'ಎಲ್ಲರೂ ಮಾತನಾಡುವ ರೀತಿ ಒಂದು
ಕವಿ ಮಾತ್ರ ಮಾತನಾಡುವದು ಇನ್ನೊಂದು
ಎಲ್ಲರೂ ಮಾತನಾಡುವದು ವ್ಯವಹಾರ
ಕವಿ ಮಾತನಾಡುವದು ಮುತ್ತುಗಳ ಹಾರ'

ಈ ಕವಿಗೆ 'ಕವನ ಹೃದಯದ ಕಮಲ'

'ಕಟ್ಟಿದರೆ ಅನುಭವದ ತಳಹದಿಯ ಮೇಲೆ
ಕೊನೆಯವರೆಗೂ ನಿಲ್ಲುವದು ಕವಿಯ ಲೀಲೆ
ಇಟ್ಟಂಗಿಯಾಗಲಿ ಮಾತು ಕೃತಿಯೊಂದು
ಸರಿಯಾದ ಜಾಗದೊಳಗಿರಲಿ ಒಂದೊಂದು'

(ಕಾವ್ಯವೆಂದರೇನು ? ಕೊನೆಗೂ 'Best possible words in best possible order' ಕವಿಯ ಗುರು ಸರ್ವಜ್ಞನೇ ಹೇಳಿಲ್ಲವೇ ? 'ಹೊತ್ತಿಗಾಡಿದ ಮಾತು ಸತ್ತವನು ಎದ್ದಂತೆ' ಈ ಸಮರ್ಪಕತಾ ಔಚಿತ್ಯ ಸಕಲ ಸಾಹಿತ್ಯದ ಜೀವಾಳ !)

ಇದನ್ನು ಸಾಧಿಸುವುದು ಹೇಗೆ ? ಕವಿಯನ್ನೇ ಕೇಳಿರಿ–

'ಚುಟಕ ಬರೆದರೆ ಅದರ ಕೊನೆಗಿರಲಿ ಹರಿತ
ಇದರಿಂದ ಎಚ್ಚರಾಗುವನು ಜಡ–ಭರತ
ಚುಟಕ ಬರೆದರೆ ಭಾಷೆಯೊಳಗಿರಲಿ ಮದ್ದು
ಸಪ್ಪಳಕೆ ಓಡಿ ಹೋಗುವದು ರಣಹದ್ದು'

ಆದರೆ ಈ ಬಗೆಗೆ ನಾವು ಭಾವಿಸುವದೇನು ?–

'ಚುಟಕ ಬರೆಯುವ ಕೆಲಸ ಅತ್ಯಂತ ಸಾದಾ
ನಾಲ್ಕು ಪಂಕ್ತಿಗಳಲ್ಲಿ ಏನಿದೆ ಅಗಾಧಾ ?
ಏನಾದರೂ ಗೀಚಿ ಹಚ್ಚಿಬಿಡಿ ಪ್ರಾಸ
ತಿಳಿಮಾತ್ರವೂ ಕವಿಯ ತಲೆಗಿಲ್ಲ ತ್ರಾಸ'

ಆದರೆ ಕವಿಯ ಅಭಿಪ್ರಾಯ ಬೇರೆ,–

'ಚುಟಕದೊಳಗಿದ್ದರೂ ಬರಿನಾಲ್ಕು ಸಾಲು
ಇದರ ರಚನೆಗೆ ಬೇಕು ಪೂರ್ಣ ಕಂಟ್ರೋಲು
ಕಂಟ್ರೋಲು ತಪ್ಪಿದರೆ ರಚನೆ ನೆಲಕುರುಳಿ
ಚುಟುಕವಾಗುವುದುಂಟು ಕಾಗದದ ಸುರುಳಿ'

ಇನ್ನೊಂದು ಎಚ್ಚರಿಕೆ–

'ಚುಟಕದೊಳಗಿರಲಿಲ್ಲ ಸ್ವಲ್ಪವೂ ಸುಳ್ಳು
ಇದಕೆ ಕಾರಣ ನನಗೆ ಹಿಡಿದಿತ್ತು ಮಳ್ಳು
ಮಳ್ಳುತನ ಮರೆಯಾಗಿ ನಾನಾದೆ ಜಾಣ
ಆಮೇಲೆ ಬರೆದದ್ದು ಬಿಡಬೇಕೇ ಪ್ರಾಣ ?

ಕಿರಿದರಲಿ ಹಿರಿದಾಶಯ ಇರುವದು ಇಂಥ ತೀರ ಸರಳ ಎನಿಸುವ ಮಾತುಗಳಲ್ಲಿ. ಚುಟಕ ಚುಚ್ಚುಮದ್ದು ಮತ್ತು ಮೆಚ್ಚುಮದ್ದು.

'ಕನ್ನಡದ ಕಾವ್ಯಕ್ಕೆ ಬಾಂದಳದ ನೆತ್ತಿ
ಕೈಯೊಳಗೆ ಝುಳಪಿಸಲು ಕೊಲ್ಮಿಂಚು ಗತ್ತಿ'

ಆ ಕತ್ತಿಯು ತಿವಿತ, ಇರಿತ, ಹರಿತ ಎಲ್ಲ ಈ ಚುಟಕಗಳ ಕೊನೆಗೆ ಇದೆ. ವ್ಯಂಗ್ಯದಲ್ಲಿ ಅದ್ದಿಬಂದ ವಿಡಂಬನೆ. ಕನ್ನಡ ' ಹಿಡಿಂಬ 'ನ ಆಯುಧ !

ಈ ವಿಡಂಬನೆ ಕವಿಗೆ ತುಂಬಾ ಇಷ್ಟ. ಅದನ್ನು ಕವಿ ಕೊಂಡಾಡುವದು ಹೀಗೆ–

' ಓ ವಿಡಂಬನ ಕಾವ್ಯ ಓ ಮುಳ್ಳುಗಳ್ಳಿ
ಘನಕೊಂಡಿತರು ನಿನ್ನ ಹಾಕಿದರು ತಳ್ಳಿ
ಆದರೂ ಬೇರೂರಿ ತಲೆಯೆತ್ತಿ ಬಂದೆ
ನೀರಿಲ್ಲದಿದ್ದರೂ ಹಸುರಾಗಿ ನಿಂದೆ '

ಕವಿಯ ಮತದಂತೆ ಇಂಥ ಕವನ ಶತಮಾನ ಕಾಯಬೇಕು. ಆ ಕುರಿತು ಕವಿಗೆ ಭ್ರಮ, ಸಂಭ್ರಮ ಯಾವದೂ ಇಲ್ಲ.

' ಎಲೆ ಕವಿಯೆ ನಿನಗೇಕೆ ನರನ ಬಹುಮಾನ ?
ಕಾಲರಾಯನು ಕೇಳುವನು ನಿನ್ನ ಗಾನ
ಮೊದಲು ಸಿಗಬೇಕೆಂದು ಕೈಮುಗಿಯಬೇಡ
ತಲೆಬಾಗಿಸಿದರೆ ಕವಿ, ಕವಿಯುವದು ಮೋಡ '

' ಎಲೆ ಕವಿಯೇ ನಿನ್ನ ಪದ್ಯಗಳ ಬೆಲೆ ಎಷ್ಟು ?
ಹೇಳುವದು ಕಷ್ಟ ! ಆಗಿಲ್ಲ ' ಆಡಿಟ್ಟು '
ಈ ಕೆಲಸ ಮುಗಿಯಲಿಕೆ ಬೇಕು ಶತಮಾನ
ಆಮೇಲೆ ಗೊತ್ತಾಗುವದು ನನ್ನ ಸ್ಥಾನ ! '

ಇದು ದಿನಕರರ ವಿ ನ ಮ್ರ ವಾ ದ ರೂ ಉನ್ನತ ಹಾಗೂ ಉತ್ಕಟವಾದ ಆತ್ಮವಿಶ್ವಾಸ.

' ಅಲ್ಪಪ್ರಾಣಕ್ಕೆ ವಿಸ್ತಾರವೇ ವಿನಾಶ '– ಎಂದಿದ್ದರು ಬೇಂದ್ರೆ ಒಮ್ಮೆ ನನ್ನೊಡನೆ ಮಾತಾಡುತ್ತ. ಚುಟಕಗಳೆಲ್ಲ ಅಲ್ಪಪ್ರಾಣ. ಗಾತ್ರದಲ್ಲಿ, ಆದರೆ ಪಾತ್ರತೆಯಲ್ಲಿ ಅಲ್ಲ. ಇವುಗಳ ಬೆಲೆ ಕಟ್ಟಲು ಕಾಣಲು ಶತಮಾನ ಕಾಯಬೇಕಿಲ್ಲ. ಇವು ಒಂದೊಂದು ಗಟ್ಟಿ ನಾಣ್ಯ. ಪೇಟೆಯ ಬೆಲೆ ಏರುಪೇರಾದರೂ ಇದರ ಹೊನ್ನಿನ ಬೆಲೆಗೆ ಮೋಸವಿಲ್ಲ. ಇನ್ನು ಈ ಸಾವಿರಾರು ಲಹರಿಗಳಲ್ಲಿ ಉಕ್ಕೇರಿ ಬಂದ ಚೌಪದಿಯ ವಿಶಾಲ ಕಡಲಲ್ಲಿ ಹವಳ, ಮುತ್ತು, ಶಂಖ, ಚಿಪ್ಪು, ಮಳಲು– ಎಲ್ಲವೂ ಇರುವುದು ಸಹಜ. ಮುಳುಗಿ ಹುಡುಕಾಡಿ ಕೈಯಾಡಿಸಿದರೆ ಅವರವರ ಭಾಗ್ಯಕ್ಕೆ ತಕ್ಕಂತೆ ಅವರವರ ಪಾಲು ಸಿಗುವದು ಕಷ್ಟಸಾಧ್ಯವಲ್ಲ. (' Laughing

lions should come who shall kill by laughter ! ') ಅಂದಿದ್ದ ಜರ್ಮನ್ ತತ್ವವೇತ್ತ ನೀಟ್ಸ್. ಕವಿ ದಿನಕರ ಅಂತ ನಗೆಮೊಗದ ಸಿಂಹ. ತಮ್ಮ ಮಿಗುನಗೆಯು ನಗೆಮಿಗುವ ಕವನಗಳ ತಿವಿತ ಇರಿತಗಳಿಂದ ಕನ್ನಡ ಕುಲವನ್ನು ಎಚ್ಚರಿಸಿದನು. ಉತ್ತರ ಕನ್ನಡದ ಉತ್ತರ ಕುಮಾರರನ್ನು ಕುಮಾರರಾಮರನ್ನಾಗಿ ಮಾಡಿದನು. 'ಹಾಸ್ಯ ರಸದಿಂದ ಜೀವನವಾಯ್ತು ಧನ್ಯ!'–ಎಂದು ಕವಿಯು ಸಾರ್ಥಕವಾಗಿಯೇ ಆಡಿದ್ದಾರೆ. ಆದ್ದರಿಂದಲೇ ತನ್ನನ್ನೇ ಹೀಗೆ ಕಂಡುಕೊಂಡಿದ್ದಾರೆ–

'ಕವಿಯಲ್ಲ ಮಾರಾಯ! ನಾನೊಬ್ಬ ಭಂಗಿ
ಮಡಿವಾಳನೂ ಹೌದು: ತೊಳೆಯುವೆನು ಅಂಗಿ
ಮತ್ತೆ ಕ್ಷೌರಿಕನಾಗಿ ಕೆತ್ತುವೆನು ಬೋಳು
ಒಮ್ಮೊಮ್ಮೆ ಕಣಜದಲಿ ತುಂಬುವೆನು ಕಾಳು'

ಚೌಪದಿಗಳ ಬೃಹತ್ ಸಂಕಲನದಲ್ಲಿ ಆಡಳಿತದ ಕುರಿತೇ ೧೨೮ ಚುಟಕಗಳಿವೆ. ಆ ನಂತರ ರಾಜಕೀಯಕ್ಕಾಗಿ ೯೬, ಪಂಚವಾರ್ಷಿಕ ಯೋಜನೆಗಳಿಗೆ ೯೬, ಈ ಸಾರ್ವಜನಿಕ ಜೀವನದ ಪ್ರಜ್ಞೆಯು ಕುರಿತ ತೀವ್ರತೆ ನೇರ ಜೀವನದ ಬಗೆಗೆ ೬೪, ಚುಟಕಗಳಲ್ಲಿ ವ್ಯಕ್ತವಾಗಿವೆ. ಭ್ರಷ್ಟಾಚಾರದ ಕುರಿತೇ ೯೬ ಚುಟಕಗಳು ತುಂಬಿವೆ. ಅಂದರೆ ಸ್ಥೂಲವಾಗಿ ಕವಿಯ ಲಕ್ಷ್ಯದ ಯಕ್ಷಕಿರಣ ಎಲ್ಲೆಡೆಗೂ ಪ್ರಖರವಾಗಿಯೇ ಸುತ್ತಾಡಿದೆ. ಅಷ್ಟೇ ನಿಖರವಾಗಿ ತನ್ನ ಕಿರುಗವನಗಳ ಮೇಲೂ ಅದು ಮಾರ್ಮಿಕವಾಗಿ ಚೆಲ್ಲಿದೆ. ಇಲ್ಲಿಯ ಒಂದು ಕೌತಕವೆಂದರೆ ಬದುಕಿನ ಯಾವ ವಸ್ತು–ವ್ಯಕ್ತಿ–ವಿಶೇಷಗಳ ವರ್ಣನೆಯೂ ಪ್ರಕೃತಿಯ ಸೊಬಗನ್ನೂ, ಬಣ್ಣವನ್ನೂ ಬಿಟ್ಟಿರುವದಿಲ್ಲ. ಮಲೆನಾಡಿನ ಹೆಣ್ಣು, ಕರಿ ಮೆಣಸು, ಯಾಲಕ್ಕಿ, ಎಲೆಬಳ್ಳಿಗಳಲ್ಲಿ ಸಿಂಗಾರವಾಗಿಯೇ ಬರುತ್ತಾಳೆ. ಬದನೆ, ಮೂಲಂಗಿ, ಹಾಗಲ, ಸೋರೆ ಕಾಯಿಗಳೂ ಉಪಮಾನಗಳಾಗಿ ಸೇವೆ ಸಲ್ಲಿಸುತ್ತವೆ. ಎಂಥ ಗಹನ ಗಂಭೀರ ಸಂಗತಿಯನ್ನೂ ದಿನಬಳಕೆಯ ಸರಕಿನೊಂದಿಗೆ ಹೊಂದಿ ಹೋಲಿಕೆ ಹೊಂದದೇ ಹೋಗುವದಿಲ್ಲ. ಒಂದು ಚುಟಕ ಹುಟ್ಟುವ ಕ್ರಿಯೆಗೂ ಇದೇ ಒಳಗುಟ್ಟು. 'ನಾನೆಂದಿಗೂ ಮುಟ್ಟಾಗುವದಿಲ್ಲ. ನಿತ್ಯ ಬಸುರಾಗುವೆ. ಮಧ್ಯರಾತ್ರಿಗೆ ಮುಂಜಾನೆ ಚುಟಕ ಮರಿ ಜನಿಸುವದು ಖಾತ್ರಿ' 'ಅನ್ನುತ್ತಾಳೆ ಚುಟಕಮ್ಮ ಮರೆಮಾಚದೆ, ಏನೇನೂ ನಾಚದೆ! ಈ ಕವಿಗೆ 'ಮಾನವನಿಗೂ ಮಿಗಿಲು ಮರಸಾಗವಾನಿ.' ಅನೇಕ ಸಲ ಗಂಭೀರಕ್ಕೆ ಗೇಲಿ ಒಳವೈ. ಇದೊಂದು ಸ್ಯಾಂಪಲ್ಲು,

'ಪ್ರಗತಿಪರವಾಗಿರಲು ನಮ್ಮ ಶತಮಾನ
ಪುರುಷನಿಗೆ ಸ್ತ್ರೀಜಾತಿ ಅಲ್ಲವೆ ಸಮಾನ ?
ಪ್ರತಿಯೊಂದು ಸಲ ನಾನೇ ಬಸುರಾಗಬೇಕೇ ?
ಹೀಗೆಂದು ಗಂಡನಿಗೆ ಕೇಳಿದಳು ಆಕೆ ! '

ಹೀಗೆ ಬೀಜದಲಿ ಬ್ರಹ್ಮಾಂಡ ತೆರೆದು ತೋರಿಸುವ ಮಂತ್ರಶಕ್ತಿ ಈ ಚುಟಕಗಳಲ್ಲಿ ತುಂಬಿವೆ. ಕಾವ್ಯದ ಸ್ವರೂಪವೇ ಹೀಗೆ–

'ತರಕಾರಿ ಎನ್ನುವದು ಅಲ್ಲ ಬರಿ ಬದನೆ
ಕಾವ್ಯವೆಂಬುದು ಅಲ್ಲ ಬರಿ ಶಬ್ದ ರಚನೆ
ಪ್ರತಿಯೊಂದು ಶಬ್ದದೊಳಗಿರಬೇಕು ಪಾಕ
ಈ ಪಾಕ ಎನ್ನುವದು ಅನುಭವದ ಲೋಕ '

'ತಲೆಗೇರಿದರೆ ಮಾತ್ರ ಅನುಭವದ ಮದ್ಯ
ಹೃದಯದೊಳಗಿಂದ ಹೊರಬೀಳುವದು ಪದ್ಯ '

ಹೀಗೆ ದಿನಕರರಿಗೆ ಪದ್ಯದ ಉಗಮ, ಕಾವ್ಯದ ನಿಕಶ, ಚುಟುಕದ ಮರ್ಮ– ಎಲ್ಲ ಅನುಭವ. ನೂರಾರು ಪಂಕ್ತಿಗಳಲ್ಲಿ ಈ ತತ್ವ ಪುಟಿದೇಳುತ್ತದೆ. ನಮ್ಮ ಕಣ್ಣು ಕುಕ್ಕುತ್ತದೆ. ಕಬ್ಬು ಎಷ್ಟೇ ಅಂಕುಡೊಂಕಾದರೂ ಅದನ್ನು ಎಲ್ಲಿ ಕಡೆದರೂ ಕಚ್ಚಿದರೂ ಸರಿಯೇ. ಈ ಚುಟಕಗಳ ರುಚಿ ಅಂತಹದು. 'ಸವಿ 'ಯಿಂದ 'ಸಿಹಿ ' ಆಯಿತೇ ? ಹಾಗಿದ್ದರೆ 'ಕವಿ 'ಯಿಂದ 'ಕಹಿ 'ಯೇ ? ಈ ಕವಿಯ ಸಾವಿರಾರು ಸಾವಿರದ ಚುಟಕುಗಳ ರುಚಿ ರಂಗು ಘಾಟು ಏನೇ ಇದ್ದರೂ ಅವೆಲ್ಲವುಗಳ ಉತ್ಪಾದದ ಮೂಲದಲ್ಲಿ ಒಂದು ತೀವ್ರ ಉದ್ವೇಗವಿದೆ. ಆಳವಾದ ವೇದನೆ ಇದೆ.–ವಿಶಾದವಿದೆ. ನಮ್ಮ ಜೀವನದ ಕುರಿತು ಕರುಣೆಯ ತಳಮಳ ತಳ್ಳಂಕ ತುಳಿಯುತ್ತಿದೆ. ಅದೇ ಕಳವಳಿಸುವ ಕವನಗಳಾಗಿ ಮಿಡಿಯುತ್ತದೆ. ಯಾವದೇ ಚುಟಕ ಎಲ್ಲಿಂದಲೇ ಎತ್ತಿ ಓದಿರಿ ಅದನ್ನು ಮೆಲ್ಲುತ್ತ ಹೋದಂತೆ ಅದರ ಆಳದ ಕಟುಮಧುರ ಸ್ವಾದ ನಮಗೆ ಅರಿವಾಗದೇ ಹೋಗುವದಿಲ್ಲ. ಲೋಕದ ಶೋಕವೇ ದಿನಕರರಲ್ಲಿ ಮಾಗಿ ಶ್ಲೋಕವಾಗಿದೆ. 'Our sweetest songs are those that tell of sadest thought' ಕವಿವರ್ಯ ಶೆಲ್ಲಿಯ ಈ ಉಕ್ತಿಯು ಸೆಲೆ ದಿನಕರರ ಕವನವಾಹಿನಿಯಾಗಿ ಹರಿದು ಬಂದಿವೆಯೆಂದರೆ ಇಬ್ಬರಿಗೂ ಅನ್ಯಾಯವಲ್ಲ. ಮಹಾತ್ಮಾಜಿ, ಮುಖ್ಯ ಮಂತ್ರಿಗಳಿಂದ,

ಆಗೇರ ಮುಕ್ರಿ ಹಾಲಕ್ಕಿ ತಿಮ್ಮರವರೆಗೂ ಕವಿಯ ಅಂತಃಕರಣದ ಕಾವ್ಯಕಿರಣ ಸ್ಫುರಣಗೊಂಡು ಅವ್ಯಾಹತವಾಗಿ ಹರಿದಿದೆ. ಎಲ್ಲ ಬದುಕಿನ ಕುರಿತು ಅಪಾರ ಸಹಾನುಭೂತಿ, ಬಾಳಿನ ಆಳವಾದ ಅಗಲವಾದ ಜೀವಂತ ಅನುಭೂತಿ ಈ ಚೌಪದಿಗಳ ಭದ್ರಚೌಕಟ್ಟು, ನೆಲಗಟ್ಟು. ಇಂಥ ವಾಸ್ತವವಾದಿಯು ಆದರ್ಶ ವಾದಿಯೂ ಆದಾಗ ಅವನ ರಕ್ತಗತವಾದ ಮಾನವತಾವಾದೀ ಮನೋವ್ಯಥೆಯು ಸತತವೂ ತಹತಹಿಸುತ್ತಿರುತ್ತದೆ. ಕವನವೇನು, ಮಕ್ಕಳ ಪದ್ಯವೇನು, ಭಾವಗೀತ ವೇನು, ಚುಟಕವೇನು,-ಎಲ್ಲವೂ ಒಂದೇ ಕರುಣಾ ರಸದ ಸುಳಿಗುಳ್ಳಿ ಬುದ್ಬುದ. ಇದೇ ಪ್ರತೀತಿ ಈ ಚುಟಕಗಳನ್ನು ಓದಿದಾಗ ನೆನೆದಾಗ ಪ್ರತಿಯೊಬ್ಬ ಸಹೃದಯನ ರಸಿಕನ ಆಳದ ಅನುಭವ.

ಇವುಗಳ ಪದಪವಣಿಕೆ ಪರಿಮಿತ. ಶಬ್ದ ಸಂಗ್ರಹ ಹಿತಮಿತ. ಪುನರುಕ್ತಿ, ಪ್ರಾಸ ಕಟ್ಟುಗಳು ವಿಪುಲ. ಅವುಗಳಲ್ಲಿಯೂ ವೈವಿಧ್ಯ ವಿರಳ. ಯಾವಾಗಲೂ ವಿಚಿಕಿತ್ಸೆ, ವಿಮರ್ಶೆ, ಅಸಹನೆ. ಈ ತೀವ್ರ ನಿಷೇಧದ ವಚನವೃತ್ತಿ, ಟೀಕಾಪ್ರವೃತ್ತಿ. ಆದರೆ ಇದೆಲ್ಲವನ್ನೂ ಮೀರಿ ತುಳುಕಾಡುವದು ಕವಿಯ ಪ್ರತಿಭೆ.-ಹಾಸ್ಯರಸದ ಹೊರಲೇಪದಲಿ ಮಿಸುನಿಯಂತೆ ಮಿನುಗುವ ಅದರ ವರ್ಣರಂಜಿತ ವಿನ್ಯಾಸ ! ತೀಕ್ಷ್ಣದರ್ಶನ, ತೀವ್ರವಿಮರ್ಶೆ, ತಾತ್ವಿಕ ತಾತ್ಪರ್ಯ, ಉಕ್ತಿಯ ಔಚಿತ್ಯ, ಪರಿತದ ವಾಗ್ಬಾಣ, ಕೋಮಲ ಅಂತಃಕರಣ, ಕಠೋರ ಅನ್ವೇಷಣೆ,-ಈ ಸಪ್ತ ವರ್ಣಗಳಲ್ಲಿ ಸ್ಫುಟವಾದ ಕವಿತ್ವದ ಕಮನೀಯವಾದ ಕಾಮನಬಿಲ್ಲು !

ಇನ್ನು ಇಲ್ಲಿಯೇ ವಿರಮಿಸಬೇಕು. ಗುಣಕ್ಕೆ ಇತಿಇಯತ್ತತೆ ಇದೆಯೆಂದಲ್ಲ, ಪುಟಗಳಿಗೆ ಪರಿಮಿತಿ ಇದೆಯಲ್ಲ !

ದಿನಕರರ ಪ್ರಾರಂಭಿಕ ಕಾವ್ಯ

ಅನುಬಂಧ

'ಹಣ್ಣಿನ ರುಚಿ ಹೀಚಿನಲ್ಲಿ' ಅನ್ನುತ್ತಾರೆ. ಆದರೆ ಇದು ಎಲ್ಲ ನಾಣ್ಣುಡಿಗಳಂತೆ ಪೂರ್ತಿ ಸತ್ಯವಲ್ಲ. ಹಣ್ಣಿನ ರುಚಿಯೆ ಬೇರೆ, ಹೀಚಿನ ರುಚಿಯೆ ಬೇರೆ. ಹೀಚಿನ ಒಗರು ಚೊಗರು ಹಣ್ಣಿನಲ್ಲಿ ರಸವಾಗಿ ಮಾಗುತ್ತದೆ. ಹಣ್ಣಿಗೂ ಹೀಚಿಗೂ ಇರುವ ಈ ರಸ-ರುಚಿ ವ್ಯತ್ಯಾಸವನ್ನು, ಅದರದೆ ಆದ ವಿಕಾಸವನ್ನು ಪರಿಶೀಲಿಸುವುದೂ ರಸಿಕ ದೃಷ್ಟಿಗೆ ಒಂದು ಸ್ವಾರಸ್ಯ. ದಿನಕರ ದೇಸಾಯಿಯಂಥ ಹಿರಿಯ ಕವಿ, ನಮ್ಮ ಉತ್ತರ ಕನ್ನಡದ ಜನತೆಯ ಕವಿ ಇಂದು ಬೆಡಗಿನ ಚಿಟ್ಟೆಯಂತೆ ಹಲವಾರು ಹೂವುಗಳ ನಡುವೆ ತಾನೂ ಒಂದು ಹಾರಾಡುವ ಹೂವಾಗಿ ಕಂಗೊಳಿಸುತ್ತಿದ್ದಾಗೆ. ಆದರೆ ಈ ರಾಜಭೃಂಗ-ಮಧು ಪತಂಗ ತನ್ನ ಕೀಟಾವಸ್ಥೆಯಲ್ಲಿ ಹೇಗಿತ್ತು ?

ಈ ಜಿಜ್ಞಾಸೆಯನ್ನು ತಣಿಸಿಕೊಳ್ಳುವುದಾದರೆ ನಾವು ೪೦-೪೫ ವರ್ಷಗಳ ಆಚೆಗೆ ಹೋಗಬೇಕು, ಅಂದು ಧಾರವಾಡದ 'Modern review' ಅನಿಸಿಕೊಂಡ 'ಜಯ ಕರ್ನಾಟಕ'ದ ೧೯೨೬ ರಿಂದ ೩೩ ರ ವರೆಗಿನ ಸಂಚಿಕೆಗಳನ್ನು ತಿರುವಿ ಹಾಕಬೇಕು. ಆ ೭-೮ ವರ್ಷಗಳಲ್ಲಿ ಆಗಾಗ್ಗೆ ಪ್ರಕಟವಾದ ದಿನಕರರ ಬಿಡಿ ಕವನಗಳನ್ನು ಗಮನಿಸದಿದ್ದರೆ ಈ 'ದಿನಕರ ದರ್ಶನ' ಪೂರ್ಣವಾಗಲಾರದು. ('ದಿನಕರ ದರ್ಶನ'ದ ನಾಲ್ಕನೆಯ ಭಾಗದಲ್ಲಿ ದಿನಕರರ ೧೫ ಪ್ರಾರಂಭಿಕ ಕವನಗಳು ಪ್ರಕಟವಾಗಿರುವದನ್ನು ಗಮನಿಸಬೇಕು.) ಈ ಕಾಲಖಂಡದಲ್ಲಿ ಅನಿಯತಕಾಲಿಕವಾಗಿ ಪ್ರಕಟವಾದ ಅವರ ಕವನಗಳು ಇಂದಿನ ಅವರ ಕಾವ್ಯದ ಪ್ರೌಢಿಮೆಯ ಹಾಗೂ ಆಧುನಿಕ ವಿಮರ್ಶೆಯ ಪ್ರಗಲ್ಭತೆಯ ದೃಷ್ಟಿಯಿಂದ ಅಷ್ಟೊಂದು ಗಣನೀಯವೆನಿಸಲಿಕ್ಕಿಲ್ಲ. ಆದರೂ ಒಬ್ಬ ಪ್ರಾಮಾಣಿಕ ಕವಿಯ ವಿಕಾಸದ ಅವಸ್ಥಾಂತರದ ಚಾರಿತ್ರಿಕ ಮಹತ್ವದ ದೃಷ್ಟಿಯಿಂದ ಅವು ನಿಸ್ಸಂದೇಹವಾಗಿ ಗಮನೀಯವಾಗಿವೆ.

ಈ ೧೯೨೬ ರಿಂದ ೩೩ ರ ಅವಧಿಯಲ್ಲಿ ಪ್ರಕಟವಾದ ಕವಿತೆಗಳನ್ನಷ್ಟೇ ಅವರು ಅಂದು ಬರೆದಿದ್ದರೆಂದು ಅನ್ನಲಾಗದು. ಅವರ ಲೆಕ್ಕಕ್ಕೆ ಇಷ್ಟೂ ಸದರಲ್ಲದ ಅನೇಕ ಕವನಗಳನ್ನು ದಿನಕರರು ಆಗಲೂ ಬರೆದು ಬದಿಗಿಟ್ಟಿರಬಹುದು. (ಆಗಲೆ ಅವರು ಮಕ್ಕಳ ಪದ್ಯಗಳ ಕವಿಯೆಂದು ಖ್ಯಾತಿವೆತ್ತಿದ್ದರು. ಇಂದಿಗೂ ಅಂಥ ಪದ್ಯಗಳ

ಸರಳತೆ–ಸುಬೋಧತೆಗಳು ಅವರ ಎಂಥ ಕವಿತೆಗೂ ಅಂಟಿಕೊಂಡ ಲಕ್ಷ್ಯವಾಗಿದೆ.) ಕನ್ನಡದಲ್ಲಿ ತಾನು ಗೀಚಿದ್ದೆಲ್ಲ ಶ್ರೀಗಂಧವಾಗುವದೆಂಬ ಇಂದಿನ ಆತ್ಮವಿಶ್ವಾಸ ಆಗಿನ ದಿನಕರನಲ್ಲಿ ಅಷ್ಟೊಂದು ಇರದಿದ್ದರೆ ಸೋಜಿಗವೇನೂ ಅಲ್ಲ. ಆಗಿನ ಅವರ ಒಟ್ಟು ಕಾವ್ಯ ನಿರ್ಮಿತಿ ಎಷ್ಟೇ ಇರಲಿ, ಈ ೧೫ ಕವನಗಳು ಅಂದಿನ ಅವರ ಕೃತಿಪ್ರಪಂಚಕ್ಕೆ ಪ್ರಾತಿನಿಧಿಕ ಸ್ವರೂಪದ್ದಾಗಿವೆಯೆಂದು ಗ್ರಹಿಸಿದರೆ ತಪ್ಪಾಗಲಾರದು.

ಪ್ರಕಟನೆಯ ದೃಷ್ಟಿಯಿಂದ ೧೯೩೦-೩೧, ೩೧-೩೨ ಇವೆರಡು ವರ್ಷಗಳು ಬರಡಾಗಿವೆ. ೧೯೨೯ ರಲ್ಲಿಯೇ ಅತಿಹೆಚ್ಚು ಸಂಖ್ಯೆಯ–ಐದು–ಕವನಗಳು ಬರೆದವು. ಅವುಗಳಲ್ಲಿಯೂ ಒಂದೇ ತಿಂಗಳಲ್ಲಿ ಮೂರು, ಅದರಲ್ಲಿಯೂ ಒಂದೇ ದಿನ ಬರೆದವು ಎರಡು. ಆದರೆ ಅನಂತರ ಎರಡು ವರ್ಷ 'ಶೂನ್ಯ ಮಾಸ'.

ಯಾವ ಕವಿಗೂ ಹೊಸ ಹಾದಿ ಹಿಡಿಯುವ ಮೊದಲು, ತನ್ನ ಹಳೆಯ ಎರಕವನ್ನು ಮುರಿಯುವ ಮೊದಲು ಒಂದು Liberation ಅವಧಿ ನಡುವೆ ಬರುತ್ತದೆ, ಹೊಸ ಚಿಗುರೊಡೆಯುವ ಮುಂಚೆ ಬೀಜ ದೀರ್ಘ ಕಾಲ ಹಿಮದಲ್ಲಿ ಬಿದ್ದು ನಿದ್ದೆ ಹೋಗುವಂತೆ. ಮಣ್ಣಿನ ಸತ್ವ ಹೆಚ್ಚಿಸಲು ಕೆಲಕಾಲ ಹೊಲವನ್ನು ಪಡಬಿಡುವಂತೆ 'ಎದೆಯ ಒಕ್ಕಲಿಗ'ನಾದ ಕವಿಯು ತನ್ನ ಕೃಷಿಯನ್ನು ಸ್ವಲ್ಪ ಸಮಯ ಸ್ಥಗಿತಗೊಳಿಸುವದುಂಟು. ಈ ಅವಧಿಯ ನಂತರ ಅವನ ಕೃತಿಗೆ ಹೊಸ ಪದ, ಹೊಸ ಹುರುಳು, ಹೊಸ ಹರಿತ ಬರುವದನ್ನು ಕಾಣುತ್ತೇವೆ.

ಆದರೆ ದಿನಕರರ ಈ 'ಶೂನ್ಯ ಮಾಸ'ವು ಈ ರೀತಿ ಫಲಕಾರಿ ಆದಂತಿಲ್ಲ. ಅನಂತರದ ಅವರ ಕೃತಿಗಳು ಈ ಮೊದಲಿನವುಗಳಂತೆಯೇ ಹೆಚ್ಚು ಕಡಿಮೆ ರೂಪಗೊಂಡಿವೆ. ಹಾಗೆ ನೋಡಿದರೆ, ೧೯೨೯ ರಿಂದಲೆ ಕವಿಯ ಕೃತಿಗೆ ಹೊಸ ವ್ಯಂಜನೆ ತುಂಬಿದೆ. ಈ ಹಿಂದಿನವುಗಳಿಗಿಂತಲೂ ಅಂದಿನಿಂದ ಮುಂದೆ ದಿನಕರರ ಕೃತಿಗಳಲ್ಲಿ ಕಲ್ಪನೆ, ಆಶಯ ಮತ್ತು ಮಾನವೀಯ ಪ್ರಜ್ಞೆ ಹೆಚ್ಚು ಪುಷ್ಟವಾಗಿ ಮೈವೆತ್ತಿವೆ. 'ಇಂತಿರಲಿ' 'ಕುರುಡನ ದೇಶಭಕ್ತಿ' 'ಹನಿ ಮುತ್ತು' 'ದೀನರ ಬಂಧು'–ಮುಂತಾದ ಕವನಗಳು ಆಗಲೆ ಬೆಳಕು ಕಂಡಿದ್ದು.

ಆದರೆ ಒಂದು ಸೋಜಿಗದ ಅಂಶವೆಂದರೆ ಈ ದಶಕದಲ್ಲಿ ಕವಿಯು ಹಂಬಲವನ್ನು ವಿಶೇಷವಾಗಿ ತೊಡಗಿಸಿದ ವಸ್ತು 'ದೇವರು'. ೧೫ ರಲ್ಲಿ ೯ ಕೃತಿಗಳು ಇದೇ ವಿಷಯವನ್ನು ಸುತ್ತುತ್ತವೆ. 'ದೇವ'ನೊಂದಿಗೆ ಮೋಕ್ಷ (ಮುಕ್ತಿ) ಭಕ್ತಿ

ಮತ್ತು ಪ್ರಾರ್ಥನೆಗಳು ಆನುಷಂಗಿಕವಾಗಿ ಬರುತ್ತವೆ. ೩–೪ ಕವನಗಳ ದನಿ ಪ್ರಾರ್ಥನೆಯದೇ ಆಗಿದೆ. ಕವಿಯು ತಂದೆ ಸಾಂಪ್ರದಾಯಿಕ ಶ್ರದ್ಧಾಧನ ಭಾವಿಕರಿದ್ದರು. ಕವಿಯು ಅಣ್ಣ Rationalist Association ಸಂಸ್ಥೆಯ ಸದಸ್ಯ. ಆಗಿನ ಮಟ್ಟಿಗೆ ಮೂರ್ತಿ ಭಂಜಕ, ಬುದ್ಧಿ ಪ್ರಾವೀಣ್ಯವಾದಿ ಆ ಮಟ್ಟಿಗೆ ನಾಸ್ತಿಕನೇ. ಕವಿಯು ಆಂತರಿಕ ಜೀವನ ಇವೆರಡರ ನಡುವಿನಿಂದ ತನ್ನ ಹಾದಿ ಮಾಡಿಕೊಂಡಿತು. ಬಿ. ಎಂ. ಶ್ರೀ. ಅವರ ' ಕರುಣಾಳು ಬೆಳಕು ಬಾ ' ಎಂದು ಕರೆದು ಕಾಣಿಸಿದ ಹೆಜ್ಜೆ ಹಾಡು ಈ ಮಾನವ್ಯದಲ್ಲಿ ದೈವಿಕತೆಯನ್ನು ಕಾಣುವ ದಾರಿ.

ದೇವನೆಲ್ಲಿ ? ದೇವನ ನಿಜರೂಪವೇನು ? ಮುಕ್ತಿ ಯಾವುದು ? ಅಲ್ಲದೆ ದೇವನಲ್ಲಿ ಕವಿಯು ನಿವೇದನೆ ಎಂತಹದು ?–ಎಂಬುದೆಲ್ಲವೂ ಈ ಕವನಗಳಲ್ಲಿ ಒಡಮೂಡಿದೆ. ' ಜಗವೆಂಬುದೆ ದೇವರ ಗುಡಿ ' ಎಂಬ ಮನೋಭಾವ ಅಂದು ಕವಿಯು ಸ್ಥಾಯಿಯಾಗಿದೆ. ಮೊದಲನೆಯ ಕವನದಲ್ಲಿ ಈ ಗುಡಿಯು ರೂಪಕವೆ ಮನೋಜ್ಞವಾಗಿ ವಿಸ್ತಾರಗೊಂಡಿದೆ–a sustained metaphor. ' ನಾನು ' ಕವನದಲ್ಲಿ ದೇವನೆ ತನ್ನ ಗೊತ್ತು ಪತ್ತೆಯನ್ನು ಸಾರುತ್ತಾನೆ. ಈ ಕಲ್ಪನೆ ಈ ಕವಿಯದೆ ಶೋಧವಲ್ಲ, ಆದರೆ ಇಲ್ಲಿಯ ದೇವನ ಆತ್ಮನಿವೇದನೆಯ ಧಾಟಿ ಹೊಸತು. ' ಭಾವೇಷು ವಿದ್ಯತೆ ದೇವಃ ' ' ಮದ್ಭಕ್ತಾಃ ಯತ್ರ ಗಾಯಂತಿ ತತ್ರ ತಿಷ್ಠಾಮಿ '–ಇತ್ಯಾದಿ ವಚನಗಳಲ್ಲಿ ನಮ್ಮ ಪೂರ್ವಸೂರಿಗಳು ಇದನ್ನೇ ಸಾರಿದ್ದುಂಟು. ' ಅಡವಿಯಲಿ ಗುಡಿಯಲಿ ಗಿಡ–ದಡಿಯು ಕರಿಕಲ್ಲಿನಲ್ಲಿ ನಾ ನಿಲ್ಲ, ಅಡಿಗಡಿಗೆ ಪೊಡವಿ ತುಂಬಿ ನಾನಿದ್ದೇನೆ. ನನ್ನನ್ನು ಹುಡುಕಿ ತೆಗೆ ಭಕುತಿಯಲ್ಲಿ. '

' ಧನಕನಕ ವನಮಾಲೆ ಹಣ್ಣು ಹೂ ಬೇಕಿಲ್ಲ,
ನನಗೇಕೆ ನೂರೆ ಹಾಲು ? ದನಕರು ಸೇವಿಸಲಿ,
ನನಗಿರಲಿ ನಿರ್ಮಲಾಂತಃಕರಣವು '

–ಎನ್ನುತ್ತಾನೆ ದೇವ. ಇಂಥ ಕವನಗಳ ಭಾವ ಹಳೆಯದು, ಆದರೆ ಭಾಷೆ ಹೊಸತು.

ಇದೆ ಆಶಯವು ಹೆಚ್ಚು ನಿಷ್ಠುರವಾಗಿ ಕವಿಯ ಸ್ವಂತ ಆದೇಶವಾಗಿ ' ದೀನರ ಬಂಧು ' ಕವನದಲ್ಲಿ ವ್ಯಕ್ತವಾಗಿದೆ. ದಿನಕರ ದೇಸಾಯಿ ಮನೋವೃತ್ತಿಯಲ್ಲಿ ಕವಿ, ವೃತ್ತಿಯಲ್ಲಿ ಜನಸೇವಕ, ಸಾಮಾಜಿಕ ಕಾರ್ಯಕರ್ತ. ಈ ಪ್ರಜ್ಞೆಗೆ ಈ ಪ್ರತಿಜ್ಞೆ

ರಕ್ಷಾಕವಚವಾಗಿದೆ. ಅವರ ನಿರಂತರದ ನಿದಿಧ್ಯಾಸ ದೀನದಲಿತರ ಸೇವೆ ಈ ಪ್ರಜ್ಞೆ ಕಾವ್ಯಾನುಕ್ರಮದಲ್ಲಿ ಇಲ್ಲಿಯೇ ಮೊದಲಿಗೆ ಪರಿಸ್ಫುಟವಾಗಿದೆಯೆನ್ನ ಬಹುದು.

'ದುಡಿಯುವ ದೇಹದ ಬೆವರಲಿ ಮೀವನು
ಬಡವರ ಕಂಗಳಲುದಯಿಪನು.
ಕಡಲಿನ ತೆರೆಗಳ ನೊರೆಯಲಿ ತೇಲುತ
ಜೋಗುಳ ಹಾಡನು ಹಾಡುವನು.
ದೋಣಿಯೊಳೊರಗಿದ ಬೆಸ್ತರ ಮಗುವಿಗೆ
ತೊಟ್ಟಿಲ ತೂಗುತಲಿರುತಿಹನು.'

(ಕನ್ನಡ ಕರಾವಳಿಯ ಈ ಕವಿಗೆ ದೇವನು ಬೆಸ್ತರ ದೋಣಿಯಲ್ಲಿ ಕಾಣುವುದು ಕೌತುಕದ ಮಾತಲ್ಲ !)

'ದೇವರು ಇಲ್ಲ, ಇದ್ದರೆ ಕಾಣನೆ'
ಎಂಬೀ ಮಾತಿಗೆ ಹುರುಳಿಲ್ಲ
ಕಂಗಳ ತೆರೆದರೆ ಕಾಂಬನು ದೇವ,
ಬಡವರ ಬಂಧು ಮಾದೇವ.

–ಅಂದರೆ ಈ ಕವಿ ಶುದ್ಧಾಶುದ್ಧ ನಾಸ್ತಿಕನಲ್ಲ. ಜನತೆಯಲ್ಲಿಯೆ ಜನಾರ್ಧನನನ್ನು ಕಾಣುವ ಮಾನವತೆಯ ಉಪಾಸಕ, ದರಿದ್ರನಾರಾಯಣನ ಭಕ್ತ. ಇವರದು 'ಈಶಾವಾಸ್ಯ' ಭಾವ.

ದಿನಕರರ 'ದೀನಗಿಂತ ದೇವ ಬಡವ' ಎಂಬ ಕವನ ಸಂಗ್ರಹ–ಸಂಕಲನಗಳ ಪುಟವನ್ನು ಅಲಂಕರಿಸುವ ಒಂದು ಜನಪ್ರಿಯ ಕೃತಿಯಾಗಿದೆ. ಆ ಪ್ರಸಿದ್ಧಿ ಈ ಕವನಕ್ಕೆ ಬಂದಿಲ್ಲ. ಇವೆರಡರಲ್ಲಿ ಯಾವುದು ಮೊದಲನೆಯದೊ ಗೊತ್ತಿಲ್ಲ. (ಪು. ತಿ. ನ. ಅವರ ಒಂದು ದೈವಿಕ ಕವನವೂ 'ದೀನಗಿಂತ ದೇವ ಬಡವನೋ' ಎಂಬ ಸಾಲಿನಿಂದಲೆ ಆರಂಭವಾಗುತ್ತದೆ. ಅದು ಮತ್ತು ದಿನಕರರ ಕವನ ಇವೆರಡರಲ್ಲಿ ಯಾವುದು ಯಾವುದಕ್ಕೆ ಉತ್ತರವೊ ಗೊತ್ತಾಗಿಲ್ಲ. ಉಭಯ ಕವಿಗಳೇ ಈ ಕುರಿತು ಬೆಳಕು ಚೆಲ್ಲಬೇಕು !)

' ದೀನರ ಬಂಧು ' ' ಸಂಸಾರ ' ಇಂಥ ಕವಿತೆ ಓದಿದಾಗ ಗುರುದೇವ ರವೀಂದ್ರರ ' ಗೀತಾಂಜಲಿ 'ಯ ಒಂದು ಸುಪ್ರಸಿದ್ಧ ಗೀತ ನೆನಪಾಗದಿರದು, ವಿಶೇಷತಃ ಅದರ ಈ ನುಡಿಗಳು :

Whom do'st thou worship in this dark corner
With doors all shut
Open thine eyes and see
Thy God is not before thee
He is there where the tiller is tilling the soil where the path maker is breaking stones
He is there with them in Sun and Shower.

ಕವಿಯು ತನ್ನ ದೇವರಂತೆಯೆ ಆಗಲು ಬಯಸುತ್ತಾರೆ.

' ಸಂಸಾರ ' ಕವನದಲ್ಲಿ ಮುಕ್ತಿಯ ಕವಿ ಕಂಡ ಕಲ್ಪನೆ ಸ್ಪಷ್ಟವಾಗಿ ಸಾರಲಾಗಿದೆ. ರವೀಂದ್ರರು ಮುಕ್ತಿಯು ದೇವನಿಗೇ ಇಲ್ಲ, ಭಕ್ತನಿಗೆಲ್ಲಿಂದ ? ಎಂದು ವಾದಿಸಿದ್ದಾರೆ–

' Deliveranee ? where this deliverance is to be found ?
God himself has taken up bonds of Creation '

ಇದೇ ಭಾವವನ್ನು ದಿನಕರರು ತಮ್ಮ ವಿವರ–ವಿಶಿಷ್ಟ ಶೈಲಿಯಲ್ಲಿ ಬಣ್ಣಿಸಿದ್ದಾರೆ.

' ಹೆಂಡತಿ ಮಕ್ಕಳನೆಲ್ಲರನುಳಿದು
ಬೈರಾಗಿಯು ನಾನಾಗುವೆನು
ಸಂಸಾರದ ಹೊಸ ಜಾಲವ ಹರಿದು
ದೇವರ ಲೋಕಕೆ ಸಾಗುವೆನು–
ಎನ್ನುವ ಜನರಿಗೆ ಮತಿ ಇಲ್ಲ,
ದೇವನ ನಿಜರೂಪದ ತಿಳಿವಿಲ್ಲ '

–ಎಂದು ನಿರ್ದಯವಾಗಿಯೆ ಕವಿ ಜರೆದಿದ್ದಾರೆ.

ಆ ದೇವನ ನಿಜರೂಪವನ್ನು ಕವಿ ಎಲ್ಲಿ ಕಾಣುತ್ತಾನೆ ? ಈ ಕವನದಲ್ಲಿ ದೇವನ ಕೌಟುಂಬಿಕ ಚಿತ್ರ ಬಂದಿದೆ. ‘ Our God is a domestic God ’– ಅಂದಿಲ್ಲವೆ ದಾರ್ಶನಿಕ ಕಲಾವಿದ Ruskin ? ‘ ನಿರ್ಮಲ ಮನಸಿನ ಮಕ್ಕಳ ನಗೆಯಲಿ, ತಾಯಿಯ ಹೃದಯದ ಮೋಹದಿ, ಮಕ್ಕಳ ಮುದ್ದಿನ ಜೊಲ್ಲಿನಲಿ ’, ಮಾದೇವನು ಹೊರಸೂಸುವ ಬಗೆಯನ್ನು ಕವಿ ಕಾಣುತ್ತಾನೆ. (ಈ ‘ ಮಾದೇವನು ಹೊರಸೂಸುವ ’ ಪದಪ್ರಯೋಗ ಅಷ್ಟೇನು ಹೃದ್ಯವಲ್ಲ. ಆದರೆ ಈ ಕವಿಗೆ ಕಲೆಯ ಕುಸುರಿನ ಕೆಲಸಕ್ಕೆ ವ್ಯವಧಾನ ಕಡಿಮೆ. ಆವೇಶದ ಭರದಲ್ಲಿ ಇಂಥ ದುರ್ಬಲ ದುರ್ಧರ ಪದಪವಣಿಕೆ ಅವರಿಂದ ಘಟಿಸಿ ಹೋಗುತ್ತದೆ !)

‘ ಸತಿಯೊ ಪತಿಯೊ ಮಗುವೊ ಜಗವೊ
ಎಲ್ಲವು ದೇವರ ಪ್ರತಿಬಿಂಬ
ಈ ಸಂಸಾರವೆ ಮುಕುತಿಯ ಲೋಕದ
ದಾರಿಯ ತೋರುವ ಕೈಗಂಬ ! ’

(ಇಲ್ಲಿ ಬಿಂಬ–ಕಂಬಗಳ ಪ್ರಾಸದ ಯತಿ ಸಾರ್ಥಕವಾಗಿದೆ. ಆದರೆ ಮಾತು ಉಪ್ಪ ಬೆಳೆಸಿದಂತಾಗಿದೆ.)

‘ ನಿಜರೂಪ ’ ಎಂಬ ಕವನವೂ ದೇವರ ನಿಜರೂಪದ ನಿರ್ದೇಶನದಲ್ಲಿಯೇ ಮುಗಿಯುತ್ತದೆ. ಆದರೆ ಈ ಕವನದ ಕೊನೆ ಒಂದು anti-climax. ಗಾಳಿಯ ರೂಪವನ್ನು ಕುಣಿಯುವ ಎಲೆಗಳು ಬರೆಯುತ್ತವೆ. ಜೀವನದ ರೂಪವನ್ನು ದೇಹವನ್ನು ಚಿತ್ರಿಸುವವ ಬರೆಯುತ್ತಾನೆ, ದೇವನ ರೂಪ ಕಲ್ಲಲ್ಲಿ ಬೊಂಬೆ ಕೆತ್ತುವವ ಕೊರೆಯುತ್ತಾನೆ. ಆದರೆ ದೇವರ ನಿಜರೂಪ ಮನದಲಿ ಮೂಡಲಿ– ಎಂದು ಕವಿತೆ ಮುಗಿಯುತ್ತದೆ. ಯಥಾರ್ತದಿಂದ ಅಯಥಾರ್ತ, ಸಗುಣದಿಂದ ನಿರ್ಗುಣ ಅರಿತುಕೊಳ್ಳುವ ವಿಚಾರ ಇಲ್ಲಿ ಬಂದಿದೆ. ಆದರೆ ಅದರ ನಿರ್ವಹಣೆ ಹೃದ್ಯವಾಗಿ ಹೊರಟರೂ ಗದ್ಯವಾಗಿ ಮುಗಿದಿದೆ.

ಈ ಆರಂಭದ ಕವನಗಳಲ್ಲಿ ಅಲ್ಲಲ್ಲಿ ಎದ್ದು ಕಾಣುವ ದೋಷವೇ ಇದು. ಬಂಧದಲ್ಲಿ, ಭಾವವ್ಯಂಜನೆಯಲ್ಲಿ, ಶಬ್ದ ಜೋಡಣೆಯಲ್ಲಿ (ಹೇಸಿ ನೆಲದಮ್ಮ, ಬೊಮ್ಮ) ಉತ್ಪ್ರೇಕ್ಷೆ ರೂಪಕ ಪ್ರತಿಮೆಗಳ ಜಾಡು ಹೆಣೆಯುವ ದಕ್ಷತೆಯಲ್ಲಿ ಸಾಂದ್ರತೆ ಕಡಿಮೆ. ಸಾಂಗತ್ಯ ತಪ್ಪುವದು, ಔಚಿತ್ಯ ಕೆಡುವದು, ಶೈಥಿಲ್ಯ

ತಲೆದೋರುವುದು,ಕೃತಕ ಲಾಲಿತ್ಯದ ಪ್ರಯತ್ನ ಕಾಣುವುದು.(ಪರಮೇಶ ಪೊರಗಣ್ಣೆ ಪೊಳೆವುದೆಂದು) ಕವಿಗೆ ತಾನು ಹೇಳತಕ್ಕದ್ದನ್ನು ಸೂಚ್ಯವಾಗಿ ಇಡುವ ತಾಳ್ಮೆ ಕಡಿಮೆ. ಅದನ್ನು ತಾನೇ ಎಲ್ಲ ವಾಚ್ಯವಾಗಿ, ಆದೇಶ-ಉಪದೇಶಗಳ ಧಾಟಿಯಲ್ಲಿ ಹೇಳಿ ಮುಗಿಸುವ ಚಪಲ ಹೆಚ್ಚು. ಅಥವಾ ಆ ಯುಗದ ಕವಿತ್ವದ ಜಾಯ ಮಾನಕ್ಕೆ ಅದೊಂದು ಚಾಳಿ ಅಂಟಿಕೊಂಡಿದ್ದಿರಬೇಕು !

ಒಂದು ವಿಷಯುವನ್ನೊ ರೂಪಕವನ್ನೊ ಪ್ರತಿಮೆಗಳ ಮಾಲೆಯನ್ನೊ ಹಿಡಿದು ಹೊರಟರೆ ಅದನ್ನು ಕೊನೆಯುವರೆಗೂ ಕಾಪಾಡಿಕೊಂಡು ಹೋಗುವ ಪರಿವೆ ಈ ಕವನಗಳಲ್ಲಿ ಕಂಡಿದೆ. 'ಜಗವೆಂಬ ಗುಡಿ'ಯು ಕೊನೆಯ ನುಡಿ ಉಳಿದವು ಗಳೊಂದಿಗೆ ಸಂಗತಿ ಸಾಧಿಸುವದಿಲ್ಲ. 'ಕವಿಯಲ್ಲಿ' ಒಂದು ವೈಶಿಷ್ಟ್ಯಪೂರ್ಣ ಕವಿತೆ. ಕವಿಯು ಕೊಳಲು, ಮಿಕ್ಕ ಜನ ಬಿದಿರು. ('ನನ್ನ ಕೊಳಲಹುದು ಈ ನಿನ್ನ ಕೊರಳು'-ಬೇಂದ್ರೆ) 'ಸುಳಿದು ಭಾವದ ಗಾಳಿ ನಿನ್ನ ಬಗೆ ಬಿರುಕಿನಲಿ ಪಾಡುವದು ನಲುವಿಂದಲಿ'. ಸರಿ, ಆದರೆ ಮುಂದೆ, 'ಹೊಳೆದು ಕಲ್ಪನೆಯ ಶಶಿ ನಿನ್ನ ಬಗೆ ಮುಗಿಲಲ್ಲಿ ಜೀರುವದು ಬೆಳದಿಂಗಳು !' ಹೀಗೆ ಪ್ರತಿಮೆಗಳ ಕಲಬೆರಕೆ ಏಕೆ ಒಂದೇ ಉಪಮೇಯದ ಬಗೆಗೆ ?

ಇನ್ನು ಕಾಮನಬಿಲ್ಲಿನ ಸೇತುವೆಯನ್ನು ಕ್ರಿಶ್ಚನಾ ರೊರ್ಸೆಟಿಯಿಂದ ಎರವಲ ತಂದರೂ ಅದನ್ನೇರಿ ಸುರಲೋಕದ ಅಂಗಳದಿಂದ ತಾರೆಗಳ ಕುಂದ ಕುಸುಮ ಗಳನ್ನು ತರುವ ಉತ್ಪ್ರೇಕ್ಷೆ ಕವಿಯದೇ ಆಗಿದೆ.

ಹಾಗೆಯೇ 'ಜೀವೇಶ' (ಇದು 'ಪರಮೇಶ' ಪದಕ್ಕೆ ಪ್ರತಿಶಬ್ದ ?) ಕವನದ ಕಲ್ಪನೆಯಲ್ಲಿ ನಾವೀನ್ಯವಿದ್ದರೂ ಲಾವಣ್ಯವಿಲ್ಲ. ಜೀವೇಶ, ಪ್ರಾಣೇಶ ಅಂದರೆ ನಲ್ಲ, ವಲ್ಲಭ ? ಅಲ್ಲ, ಇಲ್ಲಿ ಈತ ಮುಖ್ಯಪ್ರಾಣ ಅರ್ಥಾತ್ ಹನುಮಂತ. ಮರುತದಲ್ಲಿ 'ಪಾರಾಡುವ' ಮಾರುತಿ. ಈತ ಪೇರಾನೆಯಿಂದ ಕಟ್ಟಿರುವೆಯು ವರೆಗೆ ಅಣುರೇಣುಗಳಲ್ಲಿ ನೂರಾರು ಬಗೆಯಿಂದ ಸೇರುವಂ, ಆದರೂ ಈ ಜೀವವೆಂಬ ಹನುಮಂತನು ಮಂಗನಂದದಿ ಚಂಚಲನು. ಅಥವಾ ಚಂಚಲತೆ ಯಿಂದಾಗಿ ಜೀವನಿಗೆ ಈ ಹನುಮಂತ ದಿನಕರರ ದೃಷ್ಟಿಯಲ್ಲಿ. ಇದು ತತ್ವದ ಪದ್ಯವೋ ಕಾವ್ಯವೋ ?

'ಕನ್ನಡಮ್ಮ'ನನ್ನು ಕುರಿತು ಕಳಕಳಿಯ ಕವಿತೆಯಲ್ಲಿ ಆವೇಶ-ಆಕ್ರೋಶವಿದೆ. ಸಾರವತ್ತಾದ ವಾಗ್ಮಿತೆ ಇಲ್ಲ. 'ಹುತ್ತರಿ ಹಾಡಿ'ನ ಗತ್ತಿನಲ್ಲಿ ಬರೆದಿರುವುದರಿಂದ

ಈ ಕವಿತೆಯಲ್ಲಿ ಪಂಜೆ ಮಂಗೇಶರಾಯರ ಕಾವ್ಯ ಸತ್ವದೊಂದಿಗೆ ತುಲನೆ ಅನಿವಾರ್ಯವಾಗುತ್ತದೆ. ಅದರ ಕಲೆಗಾರಿಕೆಯ ಕೆಚ್ಚು ಕಟ್ಟುಗಳ ನೆನಪಿನಲ್ಲಿ ಈ ಕವನ ಪೆಚ್ಚು ಬೀಳುತ್ತದೆ. ಇಲ್ಲಿ ರಚನೆ ಗದ್ಯಗಂಧಿ, ಅಲ್ಲಿಯಂತೆ ಶಕ್ತಿಯುತವಾದ ಪ್ರತಿಮಾ ವಿಲಾಸವಿಲ್ಲ ವಿಚಾರಗಳು ಪುನರುಕ್ತಿಗೊಂಡಿವೆ, ಭಾವ ಉತ್ಕಟವಾಗಿಲ್ಲ, ಭಾವಾತಿಸಾರವೇ ಕಾಣುತ್ತದೆ. ' ನಿನ್ನ ದೇಹವ ತುಳಿದು ಪಾಪಿಗಳಾದೆವು ' ಎಂದು ಮರಗುವುದರ ಮರ್ಮವೇನೊ ! ಏಕೆಂದರೆ ' ಅಮ್ಮ ' ಎಂದರೂ ಇದು ನೆಲ. ಅದನ್ನು ತುಳಿಯದೆ ಬದುಕುವದೆಂತು ?

' ನಿನಗೆ–ನನಗೆ '–contrast ವಿರೋಧಿ ತತ್ವದ ಮೇರೆ ಆರಂಭವಾಗುತ್ತದೆ. ಕುಸುಮ ನಿನಗೆ, ಗಂಧ ನನಗೆ. ತಾವರೆಗೆಂಪಿನ ಕೆನ್ನೆ ನಿನ್ನದು, ಎಸಳುಗಣ್ಣು ನಿನ್ನವು. ಮುತ್ತಿಡುವ ತುಟಿ ನನ್ನದು. ಸರಿ, ಮುಂದೆ ಈ ವ್ಯತ್ಯಾಸಚಿತ್ರ ವಿರೋಧದಿಂದ ಸಾಮಾನ್ಯಕ್ಕೆ ವಿಸ್ತರಿಸುತ್ತದೆ. ನಾಟ್ಯ ರಂಜನೆಯ 'ಯುಕುತಿ' (!) ನಿನಗೆ. ನೋಡಿ ನಲಿಯುವ ' ನಯನವೆರಡು ' (ಒಂದೇ ಅಲ್ಲ ಮತ್ತೆ !) ನನಗೆ. ನಿನಗೆ ಕವಿತ್ವ, ನನಗೆ ರಸಿಕತೆ. ಹಾಗೆಯೆ ಮುಂದರಿದು ನಿನಗೆ ಕ್ಷಮಾಗುಣ, ನನಗೆ ತುಂಟತನ–ಎಂದು ದೇವರಿಗೆ ಪ್ರಾರ್ಥನೆಯಲ್ಲಿ ಈ ವರ್ಗೀಕರಣ ಕವನ ಮುಗಿಯುತ್ತದೆ. ಅಂದರೆ ಒಟ್ಟು ಈ ಕವನದ ಆವ್ಹಾನ ಯಾರಿಗೆ ? ಆಲಂಬನ ಯಾರು ? ಚೆಂದ ಕಲ್ಪನೆಗಳ ಕಿಚಡಿ ಈ ಕವನ. ಕ್ರಮೇಣ focus ಕೆಟ್ಟು ವಿಕೀರ್ಣವಾಗುತ್ತದೆ ಕಾವ್ಯದ ಬಿಂಬ.

ಇನ್ನು ಈ ಕೃತಿಗಳ ಬಂಧವೂ ಹಾಗೆಯೇ. ಈ ದಶಕದಲ್ಲಿ ಕವಿಯು ಸಾಂಪ್ರದಾಯಿಕ ಛಂದಸ್ಸಿನ ಪ್ರಭಾವದಿಂದ ಬಿಡುಗಡೆ ಹೊಂದಿದ್ದಿಲ್ಲ. ಆಧುನಿಕ ಪ್ರಜ್ಞೆಗೆ ಸಾಂಪ್ರದಾಯಿಕ ಪದಬಂಧ ಒಂದು ಬಂಧನವೆ ಆಗುವದು ಹೊರತು ಬಾಂಧವ್ಯವಲ್ಲ, ' ಕುರುಡನ ದೇಶಭಕ್ತಿ ' ' ದೀನರ ಬಂಧು ' ' ಸಂಸಾರ ' ' ಕನಸಿನಲ್ಲಿಯ ಕಂದ ' ' ನಿಜ ರೂಪ ' ಈ ಕವಿತೆಗಳನ್ನು ಬಿಟ್ಟರೆ ಉಳಿದೆಲ್ಲವೂ ವಾರ್ಧಿಕ, ಅರ್ಧವಾರ್ಧಿಕ, ವಾರ್ಧಿಕದ ಪಾದವೇ ಆಗಿದ್ದು ಲಲಿತರಗಳೆಯ ವೃತ್ತದಲ್ಲಿ ಬರೆದವು. ಆದರೆ ಈ ಬಂಧನಕ್ಕೆ ಬೇಕಾದ ಪದಪವಣಿಕೆಯ ಬಿಗಿತ, ತುಡಿತ ಅಲ್ಲಲ್ಲಿ ಸಡಿಲುಗೊಳ್ಳುತ್ತದೆ. ಆದರೂ ಕವಿಯು ಅಭಿವ್ಯಕ್ತಿಗೆ ಈ ೫ ಮಾತ್ರೆಯ ೪ ಗಣಗಳ ಪಾದ ಇಂದಿಗೆ ಪೂರ್ತಿ ಒಗ್ಗಿದೆ. ಅವರ ಸದ್ಯದ ಕಾವ್ಯರೂಪವಾದ ' ಚುಟುಕ ' ಅದೇ ಚತುಷ್ಪಾದದ ಶಿಶು.

ಈ ಸಂದರ್ಭದಲ್ಲಿ H. Coombes ಎಂಬ ವಿಮರ್ಶಕನ ಈ ಮಾತುಗಳು

ಉದ್ಬೋಧಕವಾಗಿವೆ. 'But it is dangerously easy to manufacture an obvious kind of rhythm, to make up a kind of sing-song that is but a poor substitute for real rhythm.'

ಒಡೆದು ಕಾಣಬಲ್ಲ ಒಂದು ಲಯಬಂಧವನ್ನು ಸರಾಗವಾಗಿ ಹೇಳಬಹುದಾದ ಒಂದು ವೃತ್ತವನ್ನು ರಚಿಸುವದು ಗಂಡಾಂತರಕ್ಕೆ ಒಯ್ಯುವಷ್ಟು ಸುಲಭ ಉಪಾಯ. ಆದರೆ ಅದು ನಿಜವಾದ ಅರ್ಥಲಯದ ಪರ್ಯಾಯವಾಗಲಾರದು.

ಈ ಕವನಗಳಿಗೆ ಆದ ತೊಡಕೆ ಇದು. ಆದ್ದರಿಂದಲೆ ವಾರ್ಧಿಕವಲ್ಲದ ವೃತ್ತಗಳಲ್ಲಿ ಹೊಯ್ದು ಅವರ ಕಾವ್ಯದ ಎರಕ ಹೆಚ್ಚು ಸಾರ್ಥಕ ಸಮರ್ಪಕವಾಗಿದೆ.

ದಿನಕರರು ನಿಸರ್ಗ ಕವಿಗಳಲ್ಲ, ಮಾತ್ರವಲ್ಲ, ಇವೆಲ್ಲ ಕವನಗಳಲ್ಲಿ ಅವರದೇ ಎಂಬ ನೈಜ ಅನುಭವದ ಅಭಿವ್ಯಕ್ತಿ ಇಲ್ಲ. ಇಲ್ಲಿ ಕಾಣುವ ಪ್ರಾಮಾಣಿಕತೆ ಅವರ ವಿಚಾರ, ಭಾವನೆ ಮತ್ತು ಅಭಿಪ್ರಾಯಗಳದು ಹೊರತು ಅನುಭವದ್ದಲ್ಲ, ದಿನಕರರು ಆದೇಶ-ಆವೇಶ, ಸಾಮಾಜಿಕ ಮೌಲ್ಯಗಳ ಉದ್ದೇಶಗಳ ಕವಿ. ಅದರ ಫಲವಾಗಿ ವರ್ಣನೆಯ ವೈಖರಿಯ ಲೋಪಗಳನ್ನು ತುಂಬಿಕೊಳ್ಳುವಂತೆ ಕವಿಯು ಪ್ರಶ್ನೋತ್ತರ, ನಾಟಕೀಯ ಸ್ವಗತ, ಅಲಂಕಾರಿಕ ಪ್ರಶ್ನಾವಲಿ, ರೂಪಕ ಕಥೆ-ಮುಂತಾದ ತಂತ್ರ ವೈವಿಧ್ಯವನ್ನು ತೊಡಿಸಿ ತಮ್ಮ ಕೃತಿಯನ್ನು ಯಶಸ್ವಿಯಾಗಿ ಸುತ್ತಾರೆ.

'ಜೀವನ' ಎಂಬ ಜೀವನ ಸಾಫಲ್ಯದ ಕುರಿತ ಕವಿತೆ ಹುರಿಕಟ್ಟಾಗಿದೆ, ಹಿತವಾಗಿ ಬಂದಿದೆ. ಪ್ರಶ್ನಮಾಲಿಕೆ ಕಲ್ಪಕ (fanciful) ವಾಗಿದೆ. 'ಇಂತಿರಲಿ'ಯೂ ಅದೇ ರೀತಿ-ಪ್ರಾರ್ಥನಾತ್ಮಕ ಚಿತ್ರಮಾಲೆ, ಚೆಂದವಾಗಿ ಬಂದಿದೆ. ಆದರೆ ತೀರ elaborate ವಿವರಣೆಯಲ್ಲಿ ಲಂಬಾಯಮಾನ! ಈ ಅತಿವಾಚ್ಯತೆ ದಿನಕರರ ಪ್ರತಿಭೆಗೆ ಬಡಿದ ಶಿಶು ಸಾಹಿತ್ಯದ ಶಾಪವಿರಬೇಕು. 'ಕುರುಡನ ದೇಶಭಕ್ತಿ'ಯಲ್ಲಿಯೂ ಕವಿ ಶ್ರಮಿಸಿದಷ್ಟು ಸಿದ್ಧಿ-ಉತ್ಕಟತೆಯ ಕರುಳು ಮಿಡಿತ ಸಾಧಿಸಿಲ್ಲ. ಹೇಳಿದ್ದನ್ನೇ ಪರಿಪರಿಯಾಗಿ ಹೇಳುವದರಿಂದ ಭಾವ ಬೊರಡಾಗಿದೆ.

'ಹನಿ-ಮುತ್ತು' ಒಂದು ತಾಯಿ-ಮಗು ಸಂವಾದ. ಆದರೆ ಇಂಗ್ಲಿಷ್ ಕವನದ

ಭಾವಾನುವಾದವೊ ? ಏಕೆಂದರೆ, 'ನಿನ್ನೆ ಸಂಜೆ ಬಂದು ಇಂದು ಮುಂಜಾನೆ ಮಾಯವಾಗುವ ಹುಲ್ಲಿನಲ್ಲಿ ಶೋಭಿಸುವ ಬೆಳ್ಳಿಯ ಮುತ್ತು'–ನಮ್ಮಲ್ಲಿ ಯಾವವು ? ಅವನ್ನು ಹೆಕ್ಕಿಕೊಡಲು ಅಶಕ್ಯವೆನ್ನುತ್ತಾಳೆ ತಾಯಿ. 'ಮುಟ್ಟಿದರೇನೇ ನೀರಾಗುವವು' ಅಂದರೆ ಅವು ನೀರ್ವನಿಗಳಲ್ಲ. ಮೂಲತಃ ಹಿಮಕಣ (snow flakes) ಆಗಿದ್ದಿರಬೇಕು ! ಏನೇ ಇರಲಿ, ಈ ಕವಿತೆಗೆ ಕನ್ನಡದ 'ಮಣ್ಣಿನ ವಾಸನೆ' ಚೆನ್ನಾಗಿಯೆ ಬಳಿದಿದೆ.

'ಕನಸಿನಲ್ಲಿಯ ಕಂದ' ಒಂದು ಮಾರ್ಮಿಕವಾದ ರೂಪಕ ಕಥೆ. ಇಂಥ ಕವನಗಳಲ್ಲಿ ದಿನಕರರು Wordsworth ಕವಿಯ ನಿರಾಭರಣ ಸೌಂದರ್ಯವನ್ನು ಸಾಧಿಸುತ್ತಾರೆ. ಬತ್ತಲೆಯಾದ ಕಂದ ಮನೆಯ ಅಂಗಳಕ್ಕೆ ಬಂದು ಅಲ್ಲಿದ್ದ ಆಟಿಗೆಗಳೊಂದಿಗೆ ಆಡುವದರಲ್ಲಿ, ಅಲ್ಲಿ ಸಿಕ್ಕ ಬಟ್ಟೆ ತೊಟ್ಟು ಕುಣಿದಾಡುವದರಲ್ಲಿ ತಾಯಿಯನ್ನು, ಜಗತ್ತನ್ನು ಮರೆಯುತ್ತಾನೆ. ಆ ಆಟಿಗೆಗಳೊ ಬೆಳ್ಳಿಯ ಗೊಂಬೆ (ಸೂರ್ಯ ?) ಮತ್ತು ಬುಗರಿ (ಪೃಥ್ವಿ ?) ಆದರೆ ಈ ತಲ್ಲೀನತೆ ಎರಡೇ ಕ್ಷಣ. ಹಸಿವೆ ಆದೊಡನೆ ದಣಿದ ಕಂದನಿಗೆ ತಾಯ ಹಂಬಲ. ತಾಯಿ ಬಾಗಿಲಲ್ಲಿ ಕಾಯುತ್ತಿರುತ್ತಾಳೆ. ಕಂದ ಗಾಢ ನಿದ್ದೆಯ ದಿವ್ಯಾನಂದವನ್ನು ಅನುಭವಿಸುತ್ತಾನೆ. ಆಟದ ಸಂಭ್ರಮದಲ್ಲಿ ಈ ಶಿಶು ತಾಯನ್ನು ನಿಜವಾಗಿಯೂ ಮರೆಯಲಿಲ್ಲ.

ನಾವೇ ಈ ಶಿಶು. ಬರುವಾಗ ಹೋಗುವಾಗ ಬತ್ತಲೆಯೇ. ಈ ಕ್ಷಣಿಕ ಬಾಳಿನಲ್ಲಿ ಗೊಂಬೆಯಾಟ ಹೂಡುತ್ತೇವೆ ಮತ್ತೆ ತಾಯಿಯ ಮಡಿಲು ಸೇರುತ್ತೇವೆ. ಇಲ್ಲಿಗೆ ಈ ಕವಿತೆ ಮುಗಿದರೆ ಉತ್ತಮ. ಆದರೆ ಕವಿಗೆ 'ಅತೋಽಹಂ ಬ್ರವೀಮಿ' ಎನ್ನುವ ಆತುರ. ಇದು ತನಗೆ ಬಿದ್ದ ಕನಸೆಂದು ಸಾರಿ, ನಿನ್ನ ಕಂದನು ನಾನು ದೇವಾ ಎಂದು ಶಿರಬಾಗುವದೇಕೆ ? ಈ ಕೊನೆಯೂ ವಿರಸ. (೨ ವರ್ಷದ ಕಂದ ತಾಯ ಮೊಲೆ ಉಣ್ಣುವದೇ ?)

ಹೀಗಿದೆ ದಿನಕರರ ಆರಂಭಿಕ ಕಾವ್ಯ ಕೃಷಿಯ ಫಸಲಿನಲ್ಲಿ ಕೆಲವು ಬತ್ತದ ತೆನೆಗಳ 'ನಿಜರೂಪ'.

ದಿನಕರ ದೇಸಾಯರ 'ಪುಷ್ಟ್ಯಬ್ದಿ' ಸಂದರ್ಭದಲ್ಲಿ ಅವರ ಅಭಿಮಾನಿಗಳು ಅರ್ಪಿಸಿದ 'ದಿನಕರ ದರ್ಶನ' ಗ್ರಂಥದಿಂದ ಆಯ್ದುಕೊಂಡ ಲೇಖನ, (೧೯೭೧)-ಸಂ.

ಸಂಕಲನವೊಂದು ಪ್ರಕಟವಾಗುವ ಮೊದಲೇ ಪ್ರಸಿದ್ಧಿಗೆ ಬಂದಿದ್ದ ಜನಾದರಣೀಯ ಹಿರಿಯ ಕವಿ ದಿನಕರ ದೇಸಾಯಿ. ಸುಂದರ-ಸುಲಲಿತವಾದ ಅವರ ಮಕ್ಕಳ ಪದ್ಯಗಳು ಇಂದು ನಾಡಿನಾದ್ಯಂತ ಚಿರಪರಿಚಿತ. ಅವರ ಚಿಂತನಪ್ರಧಾನ ಭಾವಗೀತಗಳೂ ಅಷ್ಟೇ ಜನಪ್ರಿಯ. ಅವರ ಸಾವಿರದ ಸಾವಿರದ ಸಾವಿರಾರು ಚುಟುಕಗಳು ಇಂದು ನಾಡಿನ ಮನೆಮಾತು.

ಈ ಜನಸೇವಕ-ಕವಿಯ ವಿವಿಧ ಪ್ರಕಾರದ ಸಮೃದ್ಧವಾದ ಕಾವ್ಯಬೆಳಸಿನ ಗುಣವಿಶೇಷವೇನು ? ಕನ್ನಡ ಕಾವ್ಯಸಮೀಕ್ಷೆಯ ಸಂದರ್ಭದಲ್ಲಿ ಈ ಕವಿಗೆ ಸಲ್ಲುವ ಮಾನ ಯಾವುದು ? ಈ ಕವಿ ನಿಲ್ಲುವ ಸ್ಥಾನ ಎಲ್ಲಿ, ಯಾರೊಂದಿಗೆ ?- ಎಂಬಿತ್ಯಾದಿ ವಿಚಾರ-ವಿಮರ್ಶೆಗೆ ಮೀಸಲಾದ ಗಮನಾರ್ಹ ಪ್ರಯತ್ನ ಇದು ವರೆಗೆ ನಡೆದಂತಿಲ್ಲ. ಆ ಕೊರತೆಯನ್ನು ತಕ್ಕಮಟ್ಟಿಗಾದರೂ ತುಂಬುವ ಒಂದು ಪುಟ್ಟ ಪ್ರಯತ್ನವಾಗಿ ಈ ಸಮೀಕ್ಷಾ ಸಂಕಲನವನ್ನು ಪ್ರಕಟಿಸುತ್ತಿದ್ದೇವೆ.

(' ಪ್ರಕಾಶಕರ ನುಡಿ 'ಯಿಂದ)